ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 41-42 ಅಕ್ಟೋಬರ್ 18, 1987 ಬೆಲೆ 1-50 ರೂ.

ಒಳಗಿನ ಪುಟಗಳಲ್ಲಿ

ಡಿಸೆಂಬರ್ 9ಕ್ಕೆ 10 ಲಕ್ಷ ಜನರ ದೆಹಲಿ ರ್‍ಯಾಲಿ

ಭಾರತದ ಇತಿಹಾಸದಲ್ಲಿಯೇ ಮೊತ್ತ ಮೊದಲ ಬಾರಿಗೆ, ದೇಶದ ಐದು ಕಡೆಗಳಿಂದ ಪ್ರಚಾರ ಜಾಥಾಗಳು ಆರಂಭವಾಗಿ 10 ಲಕ್ಷ ಜನರ ಅಭೂತ ಪೂರ್ವ ರ್‍ಯಾಲಿಯಾಗಿ ದೆಹಲಿಯಲ್ಲಿ ಸಮಾವೇಶಗೊಳ್ಳಬೇಕೆಂಬ ನಿರ್ಧಾರವನ್ನು ಎಡ ಪಕ್ಷಗಳ ನೇತೃತ್ವದ 24 ಸಾಮೂಹಿಕ ಸಂಘಟನೆಗಳು ಕೈಗೊಂಡಿವೆ.

"ರಾಜೀವಗಾಂಧಿಯವರೇ ರಾಜೀನಾಮೆ ಕೊಡಿ" "ಮಧ್ಯಂತರ ಚುನಾವಣೆ ನಡೆಸಿ" ಎಂಬ ಉದ್ಘೋಷವನ್ನು ಇಡೀ ದೇಶದಲ್ಲೇ ಅನುರಣನಗೊಳ್ಳುವಂತೆ ಮಾಡಲಿರುವ ನಿರ್ಧಾರವನ್ನು ಈ ಸಂಘಟನೆಗಳ ಪರವಾಗಿ ಅಖಿಲ ಭಾರತ ಕಿಸಾನ್ ಸಭಾದ ನೇತಾರ ಹರ್‌ಕಿಷನ್‌ಸಿಂಗ್ ಸುರಜೀತ್, ಎಐಟಿಯುಸಿಯ ಹೋಮಿದಾಜಿ, ಯು.ಟಿ.ಯು.ಸಿ.ಯ ತ್ರಿದಿಪ್‌ಚೌಧುರಿ ಮತ್ತು ಅಖಿಲ ಭಾರತ ಕೃಷಿ ಕಾರ್ಮಿಕ ಸಂಘಟನೆಯ ಪ್ರ.ಕಾರ್ಯದರ್ಶಿ ಪಿ.ಕೆ.ಕುಂಜಚ್ಚನ್ ದೆಹಲಿಯಲ್ಲಿ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು.

ಎಡ ಪಕ್ಷಗಳ ಸ್ವತಂತ್ರ ಚಳುವಳಿಯಾಗಿ ಇದು ದೇಶದಲ್ಲಿಯೇ ದೊಡ್ಡ ಪ್ರಭಾವ ಬೀರಲಿವೆ. ಈ ಚಳುವಳಿಗೆ

ಎಡ ಪಕ್ಷಗಳ ನೇತೃತ್ವದ 24 ಸಾಮೂಹಿಕ ಸಂಘಟನೆಗಳು ಕಾರ್ಮಿಕರು, ರೈತರು ವಿದ್ಯಾರ್ಥಿಗಳು ಯುವ ಜನರು, ಮಹಿಳೆಯ ಒಕ್ಕೂರಲ ತೀರ್ಮಾನ.

ಜಾತ್ಯಾತೀತ ಪ್ರಜಾಸತ್ತಾತ್ಮಕಪಕ್ಷಗಳ ನೇತೃತ್ವದ ಸಾಮೂಹಿಕ ಸಂಘಟನೆಗಳೂ ಈ ಚಳುವಳಿಯಲ್ಲಿಸೇರಬಹುದು ಎಂದು ಸುರ್ಜೀತ್ ಹೇಳಿದ್ದಾರೆ.

ತಿರುವನಂತಪುರ, ಮದ್ರಾಸ್, ಅಮೃತಸರ, ಕಲ್ಕತ್ತಾ, ಬೊಂಬಾಯಿಗಳಿಂದ ಆರಂಭವಾಗುವ ಈ ಪ್ರಚಾರ ಜಾಥಾಗಳನ್ನು ಹಾಗೂ ದಾರಿ ಯುದ್ದಕ್ಕೂ ಸಭೆ ಹಾಗೂ ರ್‍ಯಾಲಿಗಳನ್ನು ನಡೆಸಲು 24 ಸಂಘಟನೆಗಳ ನಾಯಕರು ಸೇರಿದ್ದ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು. ಅಖಿಲ ಭಾರತ ವ್ಯಾಪಿಯಾಗಿ ನಡೆಸುವ ಪ್ರಕ್ಷೋಭೆ ಹಾಗೂ ಚಳುವಳಿಗೆ ನೇತೃತ್ವ ನೀಡಲು 8 ಜನರ ಕಾರ್ಯದರ್ಶಿ ಮಂಡಳಿಯನ್ನು ಹಾಗೂ 48 ಜನರ ಕೇಂದ್ರ ಸಮಿತಿಯನ್ನು ಈ ಸಭೆ ರಚಿಸಿತು. ಈ ಸಮಿತಿಗೆ ಕಿಸಾನ್ ಸಭಾದ ಹರ್‌ಕಿಷನ್‌ಸಿಂಗ್ ಸುರಜೀತ್ ಹಾಗೂ ಎ.ಐ.ಟಿ.ಯು.ಸಿ.ಯ ಹೋಮಿದಾಜಿಸಂಚಾಲಕರಾಗಿರುರುತ್ತಾರೆ. 8 ಜನರ ಕಾರ್ಯದರ್ಶಿ ಮಂಡಳಿಯಲ್ಲಿ ಹರ್‌ಕಿಷನ್‌ಸಿಂಗ್ ಸುರ್ಜೀತ್, ಹೋಮಿದಾಜಿ, ಪಿ.ಕೆ. ಗಂಗೂಲಿ, ಇಂದ್ರದೀಪ್ ಸಿನ್ಹ, ತ್ರಿದಿಪ್ ಚೌಧುರಿ, ಚಿತ್ತಬಸು, ಶಾಸ್ತ್ರಿ ಹಾಗೂ ಪ್ರಣಯಾರಾಯ್ ಇದ್ದಾರೆ.

ದೇಶದಲ್ಲಿ ಒಂದು ಬೃಹತ್ ಚಳುವಳಿಯ ಅಲೆಯನ್ನೆಬ್ಬಿಸಲಿರುವ ಈ ಪ್ರಕ್ಷೋಭೆ ರಾಜಕೀಯ ಘೋಷಣೆ ರಾಜೀವ್‌ಗಾಂಧಿ ರಾಜೀನಾಮೆ ಕೊಡಿ, ಬರಗಾಲ ನೆರೆಗೆ ತುರ್ತು ಪರಿಹಾರ ನೀಡಿ, ಬೆಲೆ ಏರಿಕೆ ಇಳಿಸಲು ತುರ್ತು

(8ನೇ ಪುಟ ನೋಡಿ)

ಸೂರಜ್‌ಕುಂಡ್ ಸಭೆ ಮತ್ತು ಎಡಪಕ್ಷಗಳು

ಹರ್‌ಕಿಷನ್‌ಸಿಂಗ್ ಸುರ್ಜಿತ್

ಚೌಧುರಿ ದೇವಿಲಾಲ್ ಕರೆದ ವಿರೋಧ ಪಕ್ಷಗಳ ಸಭೆಯಲ್ಲಿ ಎಡ ಪಕ್ಷಗಳು ಭಾಗವಹಿಸದಿದ್ದುದರ ಬಗ್ಗೆ ಪತ್ರಿಕೆಗಳಲ್ಲಿ ಬಹಳಷ್ಟು ಚರ್ಚೆ ನಡೆದಿದೆ. ಕೆಲವು ಪತ್ರಿಕೆಗಳು ಈ ಸಭೆಯಲ್ಲಿ ಭಾಗವಹಿಸಿದ ಪಕ್ಷಗಳ ಪರಸ್ಪರ ವಿರೋಧ ಅಭಿಪ್ರಾಯಗಳ ಬಗ್ಗೆ ವಿಮರ್ಶೆ ಮಾಡಿದ್ದರೆ, ಇನ್ನು ಕೇಂದ್ರ ಪತ್ರಿಕೆಗಳು ರಾಜೀವ್ ಗಾಂಧಿಯವರನ್ನು ಅಧಿಕಾರದಿಂದಿಳಿಸುವ ಆಂದೋಲನವನ್ನು ಎಡ ಪಕ್ಷಗಳು ಛಿದ್ರಗೊಳಿಸಿವೆ ಎಂದು ಟೀಕಿಸಿವೆ. ಆದರೆ ಸಭೆಯ ಮರುದಿನದ ಪತ್ರಿಕಾ ಸಮ್ಮೇಳನದ ನಂತರ ಬಹಳಷ್ಟು ಜನ ಎಡ ಪಕ್ಷಗಳ ನಿಲುವನ್ನು ಮೆಚ್ಚಲಾರಂಭಿಸಿದ್ದಾರೆ. ಈ ಪತ್ರಿಕಾ ಸಮ್ಮೇಳನದಲ್ಲಿ ದೇವಿಲಾಲ್ ಮತ್ತು ಇತರ ಮುಖಂಡರು ಬಿ.ಜೆ.ಪಿ. ಒಂದು ಜಾತ್ಯಾತೀತ ಪಕ್ಷ ಎಂದು ಅದಕ್ಕೆ ಸರ್ಟಿಫಿಕೇಟ್ ಕೊಡುವ ಮಟ್ಟದ ವರೆಗೆ ಹೋಗಿರುವುದು ಆ ಸಭೆಯಲ್ಲಿ ಭಾಗವಹಿಸಿದ ಕೆಲವರಿಗೆ ಕೂಡಾ ಮುಜುಗರವುಂಟುಮಾಡಿದೆ.

ಎಡ ಪಕ್ಷಗಳನ್ನು ಕೆಲವರು ಟೀಕಿಸಲು ಕಾರಣ ಕಾರ್ಮಿಕ ವರ್ಗದಿಂದ ಹಿಡಿದು ಬೂರ್ಜ್ವಾವರ್ಗದ ಕೆಲವಿಭಾಗಗಳವರೆಗೂ ಬಹು ಮಂದಿಯಲ್ಲಿರುವ ರಾಜೀವ್ ಗಾಂಧಿಯವರನ್ನು ಅಧಿಕಾರದಿಂದ ಇಳಿಸಬೇಕು ಎನ್ನುವ ಆಕಾಂಕ್ಷೆ. ಇದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಅದನ್ನು ಸಾಧಿಸುವುದು ಹೇಗೆ, ರಾಜೀವ್ ಸರ್ಕಾರಕ್ಕೆ ಪರ್ಯಾಯವಾಗಿ ಯಾವ ರೀತಿಯ ರಂಗಮೂಡಿಬರಬೇಕೆಂಬುದರ ಬಗ್ಗೆ ಭಿನ್ನಾಭಿಪ್ರಾಯವಿದೆ. ಕೆಲವರಿಗೆ ಧೋರಣೆಯ ಪ್ರಶ್ನೆ ಅಥವಾ ದೇಶವನ್ನು ಈ ಸ್ಥಿತಿಗೆ ತಂದಿರಿಸಿದ ಸಮಸ್ಯೆಗಳ ಪರಿಹಾರ ಹೇಗೆ ಎಂಬ ಬಗ್ಗೆ ಪ್ರಶ್ನೆ ಬೇಕಿಲ್ಲ.

ರಾಜೀವ್ ಗಾಂಧಿಯವರು ಜನರ ವಿಶ್ವಾಸ ಕಳೆಕೊಂಡಿರುವುದು ಕೇವಲ ಭ್ರಷ್ಟಾಚಾರಗಳಿಂದಾಗಿ ಮಾತ್ರವೇ ಅಲ್ಲ. ವಾಸ್ತವವಾಗಿ ಇದು ಅವರ ಜನ ವಿರೋಧಿ ಧೋರಣೆಗಳ ಒಟ್ಟು ಫಲ. ಪಶ್ಚಿಮ ಬಂಗಾಳ ಮತ್ತು ಕೇರಳ ನಂತರ ಹರ್‍ಯಾಣದಲ್ಲಿ ಕಾಂಗ್ರೆಸ್ (ಐ) ಸಂಪೂರ್ಣವಾಗಿ ಸೋತಾಗ ಈ ಅವಿಶ್ವಾಸ ಸ್ಪಷ್ಟವಾಗಿ ತೋರಿ ಬಂತು. ಇದರ ನಂತರ ಬಯಲಿಗೆ ಬಂದ ಭ್ರಷ್ಟಾಚಾರ, ವಿ.ಪಿ ಸಿಂಗ್‌ರ ಉಚ್ಚಾಟನೆಯೊಂದಿಗೆ ರಾಜೀವ್ ಗಾಂಧಿಯವರ ರಾಜೀನಾಮೆಯ ಒತ್ತಾಯ ಮುಂದೆ ಬಂತು.

ರಾಜೀವ್ ಗಾಂಧಿ ರಾಜೀನಾಮೆ ನೀಡಿ ಜನತೆ ತಮ್ಮ ಆಯ್ಕೆಯ ಸರಕಾರ ಪಡೆಯಲು ಹೊಸ ಚುನಾವಣೆ ಪಡೆಯಬೇಕು ಎಂದು ಜ್ಯೋತಿಬಸುರವರು ನೇ ತಿಂಗಳಲ್ಲಿ ಕಾಂಗ್ರೆಸೇತರ ಮುಖ್ಯಮಂತ್ರಿಗಳ ಸಭೆ ಕರೆದರು ಅದರ ಬೆನ್ನ ಹಿಂದೇ ಜಾತ್ಯಾತೀತ

ವಿರೋಧ ಪಕ್ಷಗಳ ಸಭೆಯೂ ನಡೆಯಿತು. 1983-84ರಲ್ಲಿ ವಿಜಯವಾಡದಿಂದ ಕಲ್ಕತ್ತಾವರೆಗಿನ ಶೃಂಗ ಸಭೆಗಳಲ್ಲಿ ಆರಂಭವಾಗಿ ಈ ಎರಡು ಸಭೆಗಳ ನಂತರ ಹೀಗೆ ಮುಂದುವರಿದ ಈ ಪ್ರಕ್ರಿಯೆಯನ್ನು ಇದ್ದಕ್ಕಿದ್ದಂತೆ ತಿರುವು ಮುರುವು ಗೊಳಿಸಿ ಕೋಮುವಾದೀ ಪಕ್ಷಗಳನ್ನು ಸೇರಿಸಿಕೊಳ್ಳುವ ಪ್ರಯತ್ನವೇಕೆ ಎಂದು ನಮಗೆ ಅರ್ಥವಾಗುತ್ತಿಲ್ಲ. ಇದೊಂದು ಚುನಾವಣಾ ಕೂಟ ಅಲ್ಲವೆಂದು ಅವರಲ್ಲಿ ಕೆಲವರು ವಾದಿಸಿದ್ದಾರೆ. ಆದರೆ ಇದು ಕೇವಲ ವಾದಗಳ, ಮಾತುಗಳ ಪ್ರಶ್ನೆಯಲ್ಲ; ರಾಜೀವ್‌ಗಾಂಧಿ ಸರ್ಕಾರದ ವಿರುದ್ಧ ಜನತೆಯನ್ನು ಅಣಿನೆರೆಸುವ ಹಾಗೂ ರಾಷ್ಟ್ರೀಯ ಐಕ್ಯತೆಯ ರಕ್ಷಕರಾಗಿ ಮುಂದೆ ಬರುವ ಸಾಮರ್ಥ್ಯ ಯಾವ ಶಕ್ತಿಗಳಿಗಿದೆ ಎಂಬ ಪ್ರಶ್ನೆ.

ಬಿ ಜೆ.ಪಿ. ಕೋಮುವಾದಿಯಲ್ಲ ದೇವಿಲಾಲ್

ಸೂರಜ್‌ಕುಂಡ್ ಸಭೆಯ ಕಲಾಪಗಳನ್ನು ವಿರೋಧ ಪಕ್ಷಗಳ ಹಿಂದಿನ ಸಭೆಗಳೊಂದಿಗೆ ಹೋಲಿಸಿದಾಗ ಯಾವ ಪಕ್ಷಗಳು ತಮ್ಮ ಹಿಂದಿನ ನಿಲುವಿಗೆ ಬೆನ್ನು ತೋರಿಸಿವೆ. ಎಂಬುದು ಕಂಡುಬರುತ್ತದೆ ●

ರಾಜಕೀಯ ಸಮಾವೇಶಗಳ ಬಗ್ಗೆ ಪಕ್ಷದ ಘಟಕಗಳು ಹೊರಡಿಸಬೇಕಾದ ಕರ ಪತ್ರದ ಮಾದರಿ-ಪುರವಣಿಯ ಮೊದಲ ಪುಟದಲ್ಲಿ.

"ಜನ ಮೋರ್ಚಾ" ಒಂದು ಹೆಜ್ಜೆ ಮುಂದಿಟ್ಟ ವಿ. ಪಿ. ಸಿಂಗ್

ಕಾಂಗ್ರೆಸ್‌ನಿಂದ ವಿ.ಪಿ.ಸಿಂಗ್ ಮತ್ತು ಅವರ ಜೊತೆಗಾರರನ್ನು ಹೊರ ಹಾಕಿದಂದಿನಿಂದ ಅವರು ಒಂದು ನ್ಯಾಯಬದ್ಧ, ಸಮಾನ ವ್ಯವಸ್ಥೆಗಾಗಿ, ಆರೋಗ್ಯಕರ ಸಾರ್ವಜನಿಕ ಜೀವನಕ್ಕಾಗಿ, ಇತ್ತೀಚಿನ ಕೆಲವು ತಿಂಗಳುಗಳಲ್ಲಿ ಇಡೀ ದೇಶದ ಜನಮನವನ್ನು ಕದಡುತ್ತಿರುವ ಫೇರ್‌ಫಾಕ್ಸ್, ಸಬ್‌ಮೇರಿನ್, ಬೋಫೋರ್ಸ್ ಹಗರಣಗಳಂತಹ ಉನ್ನತವಲಯಗಳ ಭ್ರಷ್ಟಾಚಾರದ ವಿರುದ್ಧ ಪ್ರಕ್ಷೋಭೆ ನಡೆಸುತ್ತಿದ್ದಾರೆ. ಈ ಪ್ರಕ್ಷೋಭೆಯಲ್ಲಿ ದೇಶದ ಎಲ್ಲಾ ಮೂಲೆಗಳಿಂದ ವ್ಯಾಪಕ ಪ್ರತಿ ಸ್ಪಂದನವನ್ನೂ ಪಡೆಯುತ್ತಿದ್ದಾರೆ. ಇದು ನಿಸ್ಸಂಶಯವಾಗಿಯೂ ರಾಜೀವ್‌ಗಾಂಧಿಯವರು ಪ್ರಧಾನಮಂತ್ರಿಯಾದಾಗಿನಿಂದಲೂ ಅನುಸರಿಸಿದ ನೀತಿಗಳ ವಿರುದ್ಧ ಒಟ್ಟುಗೂಡಿ ಚಿಮ್ಮುತ್ತಿರುವ ಅತೃಪ್ತಿಯೇ ಹೊರತು ಬೇರೇನಲ್ಲ. ಜನ ವಿರೋಧಿ ಆರ್ಥಿಕ ನೀತಿಗಳಿಂದಾಗಿ, ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ಧಾಳಿಯಿಂದಾಗಿ ಆಗಲೇ ನರಳುತ್ತಿದ್ದ ಜನರನ್ನು ಬಹಿರಂಗವಾದ ಈ ಹಗರಣಗಳು ರೊಚ್ಚಿಗೆಬ್ಬಿಸಿದುವು. ವಿ.ಪಿ.ಸಿಂಗ್ ಮತ್ತು ಅವರ ಸಹೋದ್ಯೋಗಿಗಳು ಇದುವರೆಗೂ ಕಾಂಗ್ರೆಸ್(ಐ) ಪ್ರಭಾವವಲಯದಲ್ಲಿದ್ದ ಜನರನ್ನು ತಮ್ಮತ್ತಸೆಳೆಯಲು ಶಕ್ತರಾಗಿದ್ದಾರೆ. ಇವರ ಈ ಪ್ರಕ್ಷೋಭೆಯಿಂದ ರಾಜೀವ್‌ಗಾಂಧಿಯವರು ಕಳೆಗಳೆಯ

(8ನೇ ಪುಟ ನೋಡಿ)

ಮುದ್ರಣ ಯಂತ್ರದ ದೋಷದಿಂದಾಗಿ 'ಐಕ್ಯರಂಗ' 11.10.87ರ ಸಂಚಿಕೆ ಪ್ರಕಟವಾಗಲಿಲ್ಲ. ಇದನ್ನು ಸರಿದೂಗಿಸಲು ದಿನಾಂಕ 18.11.87ರ ಸಂಚಿಕೆ 12 ಪುಟಗಳೊಡನೆ ಮುದ್ರಣವಾಗುತ್ತಿದೆ. ಓದುಗರು ದಯವಿಟ್ಟು ಸಹಕರಿಸಬೇಕು.

ಸೂರಜ್‌ಕುಂಡ್ ಬಂಡವಾಳಶಾಹಿ ಪಕ್ಷಗಳ ತಿಪ್ಪೆರಲಾಗ

[ಒಂದನೇ ಪುಟದಿಂದ]

ಸೂರಜ್ ಕುಂಡ್ ಸಭೆ ಅಂಗೀಕರಿಸಿದ ಠರಾವು "1986-87 ಅತ್ಯಂತ ಹೀನ ಕೋಮು ಹಾಗೂ ಜಾತಿ ಕಲಹಗಳ ವರ್ಷ. ಮೇರಠ್‌ನಲ್ಲಿ ನೂರಾರು ಅಮಾಯಕ ಜೀವಿಗಳು ಬಲಿಯಾದವು ಗಾಂಧೀಜಿಯ ಗುಜರಾತ್ ಜಾತಿ ಸಂಘರ್ಷದಲ್ಲಿ ಸಿಲುಕಿದೆ...." ಎಂದೆಲ್ಲಾ ಹೇಳಿದೆ. ರಾಷ್ಟ್ರೀಯ ಆಂದೋಲನ ಕುರಿತಾದ ಠರಾರಿನ ಮೊದಲ ವಾಕ್ಯ ಕೂಡಾ "ರಾಷ್ಟ್ರೀಯ ಐಕ್ಯತೆ–ಕೋಮು ಹಾಗೂ ಸಾಮಾಜಿಕ ಸಾಮರಸ್ಯ" ಎಂದಿದೆ. ಆದರೆ ಬಿ.ಜೆ ಪಿ. ಮತ್ತು ಸಂಯುಕ್ತ ಅಕಾಲಿ ದಳದ ಜತೆಗೂಡಿ ಹೇಗೆ ಈ ಸಾಮರಸ್ಯವನ್ನು ಸಾಧಿಸುತ್ತಾರೆ ಎಂದು ನಾವು ತಿಳಿಯ ಬಯಸುತ್ತೇವೆ. ಯಾವುದೇ ಕೋಮು ದಂಗೆಯ ವರದಿ ನೋಡಿದರೆ ಅದರಲ್ಲಿ ಎಲ್ಲಾದರೂ ಒಂದೆಡೆಆರ್.ಎಸ್.ಎಸ್–ಜನ ಸಂಘದ ಕೈವಾಡ ಕಂಡೇ ಕಾಣುತ್ತದೆ. ಮೇರಠ್‌ನಲ್ಲಿ ಇತ್ತೀಚೆಗೆ ಹತ್ಯಾಕಾಂಡ ನಡೆಸಿದ ಪಿ.ಎ.ಸಿಯನ್ನು ಸಮರ್ಥಿಸಲು ಬಿ.ಜೆ.ಪಿ. ಮುಂದಾಗಿದ್ದುದು ಸತ್ಯ ಸಂಗತಿ ಅಲ್ಲವೇ? ಬಾಬ್ರಿಮಸೀದಿ,ರಾಮಜನ್ಮ ಭೂಮಿ ಪ್ರಶ್ನೆಯ ಮೇಲೆ ಮುಸ್ಲಿಂ ಸಂಯುಕ್ತ ರಂಗ ಮತ್ತು ವಿಶ್ವ ಹಿಂದೂ ಪರಿಷತ್ತು, ಹಿಂದೂ ಮತ್ತು ಮುಸ್ಲಿಂಮರ ನಡುವೆ ಕಂದರ ಏರ್ಪಡಿಸುತ್ತಿರುವುದು ವಾಸ್ತವ ಸಂಗತಿಯಲ್ಲವೇ ? ವಿಶ್ವ ಹಿಂದೂ ಪರಿಷತ್ತಿನ ಬೆನ್ನ ಹಿಂದಿರುವ ಮುಖ್ಯ ಶಕ್ತಿ ಬಿ.ಜೆ. ಪಿ. ಹಾಗೂ ಆ ಪಕ್ಷದ ಉಪಾಧ್ಯಕ್ಷೆ ವಿಜಯರಾಜೇ ಸಿಂಧ್ಯಾ ವಿಶ್ವ ಹಿಂದೂ ಪರಿಷತ್ತಿನ ಮುಖ್ಯ ನಾಯಕಿಯೆಂಬುದು ಸುಳ್ಳೇ ?

ಸಪ್ಟೆಂಬರ್ 24 ರಂದು ಪತ್ರಿಕಾ ಸಮ್ಮೇಳನ ನಡೆಸಿದ ಮುಖಂಡರನ್ನು ಪತ್ರಕರ್ತರು ಕೇಳಿದರು– "ದ್ವಂದ್ವ ಸದಸ್ಯತ್ವದ ಪ್ರಶ್ನೆಯ ಮೇಲೆ ನೀವೇಕೆ 1979ರಲ್ಲಿ ಜನತಾ ಪಕ್ಷವನ್ನು ಒಡೆದಿರಿ ? ಬಿ.ಜೆ.ಪಿ. ದ್ವಂದ್ವ ಸದಸ್ಯತ್ವ ಬಿಡಲು ಈಗಲಾದರೂ ಒಪ್ಪಿದೆಯೇ ?" ಎಂದು ಅವರು ಕೇಳಿದ ಪ್ರಶ್ನೆ ಸರಿಯಾಗಿಯೇ ಇದೆ. ಬಿ.ಜೆ.ಪಿ. ತನ್ನ ಸಂವಿಧಾನದಲ್ಲಿ ಮಾಡಿರುವ ಏಕೈಕ ಬದಲಾವಣೆಯೆಂದರೆ "ಗಾಂಧೀ ಸಮಾಜವಾದ" ದ ಬದಲು "ಸಮಗ್ರ ಮಾನವೀಯತೆ" ತನ್ನ ಗುರಿಯೆಂದು ಹೇಳಿಕೊಂಡಿರುವುದು ಈ ದೀನದಯಾಳ್ ಉಪಾಧ್ಯಾಯರ "ಸಮಗ್ರ ಮಾನವೀಯತೆ" ಹಿಂದಿನ ಜನ ಸಂಘದ ಗುರಿಯಾಗಿತ್ತು. ಬಿ.ಜೆ.ಪಿ.ಈಗ ಯಾವುದೇ ವೇಷ ಹಾಕಿರಲಿ, ಅದೊಂದು ಹಿಂದೂ ಪುನರುತ್ಥಾನಾವಾದಿ ಕೋಮುವಾದಿ ಸಂಘಟನೆಯೆಂಬುದು ಎಲ್ಲರಿಗೂ ಗೊತ್ತಿದೆ.

ಕಾಂಗ್ರೆಸ್ (ಐ) ನಿಂದ ನಿಸ್ಸಂಶಯವಾಗಿಯೂ ಈಗ ದೂರ ಸರಿಯುತ್ತಿರುವ ಅಲ್ಪಸಂಖ್ಯಾತರು, ಈ ಬಿ. ಜೆ. ಪಿ. ಯ ಹೆಸರು ಕೇಳಿದರೇ ದೂರ ಉಳಿಯುತ್ತಾರೆ.

ತಲೆ ಕೆಳಗಾದ ನಿಲುವು

ಸುರ್ಜಿತ್‌ಸಿಂಗ್ ಬರ್ನಾಲಾ ಸ್ವರ್ಣ ಮಂದಿರದಿಂದ ಭಯೋತ್ಪಾದಕರನ್ನು ಹೊರತಳ್ಳಲು ಪೋಲೀಸ್ ಕಳುಹಿಸಿದಾಗ ಅಕಾಲ್‌ತಖ್ತ್‌ನ ಮುಖ್ಯ ಧರ್ಮಗುರು ಸೃಷ್ಟಿಸಿದ ಪಕ್ಷ. ಸಂಯುಕ್ತ ಅಕಾಲಿದಳ ಇದರ ಬಗ್ಗೆ ಸೂರಜ್ ಕುಂಡ್ ಸಭೆಯಲ್ಲಿ ಭಾಗವಹಿಸಿದ ಇತರರು ಏಕೆ ಅಡ್ಡಿ ವ್ಯಕ್ತಪಡಿಸಲಿಲ್ಲವೆಂಬುದು ಆಶ್ಚರ್ಯದ ಸಂಗತಿ. ಬರ್ನಾಲಾ ಮುಖ್ಯಮಂತ್ರಿಯಾಗಿದ್ದಾಗ ತಖ್ತ್‌ನ ಫರ್ಮಾನನ್ನು ಪಾಲಿಸದಿದ್ದಕ್ಕೆ ಅವರಿಗೆ ಬಹಿಷ್ಕಾರ ಹಾಕಬೇಕೆಂದು ಒತ್ತಾಯಿಸಿದ್ದು, ಎಲ್ಲಾ ಗುರುದ್ವಾರಗಳನ್ನು ಉಗ್ರಗಾಮಿಗಳ ವಶಕ್ಕೆ ಕೊಟ್ಟದ್ದು ಮತ್ತು ಉಗ್ರಗಾಮಿಗಳಿಗೆ ರಕ್ಷಣೆ, ಪ್ರೋತ್ಸಾಹ ನೀಡುತ್ತಿರುವುದು ಇದೆ ಸಂಯುಕ್ತ ಅಕಾಲಿದಳವೇ. ಸೂರಜ್‌ಕುಂಡ್ ಠರಾವಿನಲ್ಲಿ ಭಯೋತ್ಪಾದಕರ ಚಟುವಟಿಕೆಗಳನ್ನು ಹತ್ತಿಕ್ಕುವಲ್ಲಿ ಸರ್ಕಾರದ ವಿಫಲತೆಯನ್ನು ಗಮನಿಸಲಾಗಿದ್ದರೂ ಪ್ರತ್ಯೇಕತಾವಾದಿಗಳನ್ನು ಹಾಗೂ ಉಗ್ರಗಾಮಿಗಳನ್ನು ಖಂಡಿಸುವ ಒಂದು ಮಾತೂ ಇಲ್ಲದಿರುವುದು ಆಕಸ್ಮಿಕವೇನಲ್ಲ.

ಅದೇ ರೀತಿ ಪತ್ರಿಕಾ ಸಮ್ಮೇಳನದಲ್ಲಿ ಪಂಜಾಬ್ ವಿಧಾನಸಭೆಯನ್ನು ವಿಸರ್ಜಿಸಿ ಮತ್ತೆ ಚುನಾವಣೆ ನಡೆಸಬೇಕೆಂದು ದೇವೀಲಾಲ್ ಒತ್ತಾಯಿಸಿರುವುದೂ ಆಕಸ್ಮಿಕವೇನಲ್ಲ. ಕೇವಲ ನಾಲ್ಕು ತಿಂಗಳ ಹಿಂದೆ – ಮೇ ತಿಂಗಳಲ್ಲಿ ನಮ್ಮ ಪಕ್ಷ ಸೇರಿದಂತೆ ಜಾತ್ಯಾತೀತ ವಿರೋಧ ಪಕ್ಷಗಳ ಸಭೆಯಲ್ಲಿ ಬರ್ನಾಲಾ ಸರ್ಕಾರದ ವಜಾವನ್ನು ಖಂಡಿಸಿ ಕೇಂದ್ರ ಸರ್ಕಾರ ಖಾಲಿಸ್ತಾನದ ವಿರುದ್ಧ ಪಂಜಾಬಿನಲ್ಲಿ ಮೂಡಿಬರುತ್ತಿರುವ ರಾಜಕೀಯ ಐಕ್ಯತೆಯನ್ನು ರಾಜಕೀಯ ದುರುದ್ದೇಶದಿಂದ ಛಿದ್ರಗೊಳಿಸಿದೆ ಎಂದು ಆಪಾದಿಸಲಾಯಿತು.

ಸೂರಜ್‌ಕುಂಡ್‌ನಲ್ಲಿ ಸಿ.ಪಿ.ಐ. (ಎಂ) ಹಾಗೂ ಇತರ ಎಡ ಪಕ್ಷಗಳು ಭಾಗವಹಿಸಲಿಲ್ಲವೇಕೆ ? ಹಲವರ ಪ್ರಾಮಾಣಿಕ ಪ್ರಶ್ನೆ. ರಾಜೀವ್‌ಗಾಂಧಿಯವರನ್ನು ರಕ್ಷಿಸಲು ವಿರೋಧ ಪಕ್ಷಗಳ ಐಕ್ಯತೆ ಒಡೆಯಲು ಎಂದು ಬಂಡವಾಳಶಾಹಿ ಪತ್ರಿಕೆಗಳ ಅಪಪ್ರಚಾರದ ಪರಮಾವಧಿ.

ಇದಕ್ಕೆ ಉತ್ತರ ನೀಡಿದ್ದಾರೆ ಪಾಲಿಟ್‌ಬ್ಯೂರೋ ಸದಸ್ಯ ಕಾ|| ಸುರಜೀತ್.

ಈಗ ಕೆಲವು ವಿರೋಧ ಪಕ್ಷಗಳೂ ಬರ್ನಾಲಾರಿಗೆ ಬೆಂಬಲದ ತಮ್ಮ ನಿಲುವು ಬದಲಿಸಿ ಸಂಯುಕ್ತ ಅಕಾಲಿದಳಕ್ಕೆ ಬೆಂಬಲ ಸೂಚಿಸಲು ಆಧಾರವೇನು ಎಂದು ನಾವು ತಿಳಿಯಬಯಸುತ್ತೇವೆ. ಪಂಜಾಬ್ ಪ್ರಶ್ನೆಯನ್ನು ಕುರಿತಂತೆ ಬಿ. ಜೆ. ಪಿ. ಸಿಖ್ಖ ಜನ ಸಮೂಹಗಳ ಭಾವನೆಗಳನ್ನು ಲೆಕ್ಕಿಸದೆ ಸಂಪೂರ್ಣ ಭಿನ್ನವಾದ ನಿಲುವು ತಳೆದಿದೆ. ರಾಜ್ಯವನ್ನು ಸೇನೆಯ ವಶಕ್ಕೊಪ್ಪಿಸಬೇಕು, ಎಂದು ಅದು ಒತ್ತಾಯಿಸುತ್ತಲೇ ಬರುತ್ತಿದೆ. ಪಂಜಾಬಿನ ಜನತೆಯನ್ನು ರಾಜೀವ್‌ಗಾಂಧಿ ಸರ್ಕಾರದ ವಿರುದ್ಧ ಅಣಿ ನೆರೆಸ ಬೇಕಾದ ಸೂರಜ್ ಕುಂಡ್ ಸಭೆಯ ಎರಡು ಪರಸ್ಪರ ವಿರೋಧಿ ಅಂಗಗಳಾದ ಬಿ.ಜೆ.ಪಿ. ಮತ್ತು ಸಂಯುಕ್ತ ಅಕಾಲಿದಳ ಕನಿಷ್ಟ ಒಂದೇ ವೇದಿಕೆಯಲ್ಲಿ ನಿಲ್ಲುವುದಾದರೂ ಸಾಧ್ಯವಿದೆಯೇ ?

ಕಾಂಗ್ರೈ ನಿಲುವಿನ ಕಡೆಗೆ....

ಕೇಂದ್ರ – ರಾಜ್ಯಗಳ ಸಂಬಂಧದ ಪ್ರಶ್ನೆ ಇಂದು ದೇಶದ ಇನ್ನೊಂದು ಪ್ರಮುಖ ಪ್ರಶ್ನೆ. ಇದನ್ನು ಕುರಿತಂತೆ ಬಿ.ಜೆ.ಪಿ.ಯ ದೃಷ್ಟಿಕೋನ ರಾಜೀವ ಗಾಂಧಿಯವರ ದೃಷ್ಟಿಕೋನದಂತೆಯೇ ಇದೆ. ಭಾಷಾವಾರು ಪ್ರಾಂತ್ಯಗಳ ರಚನೆ ಮಾಡಿದ್ದೇ ತಪ್ಪು ಎಂದು ರಾಜೀವ್‌ಗಾಂಧಿ ಹೇಳಿದ್ದಾರೆ. ಬಿ. ಜೆ. ಪಿ. ಅದನ್ನೇ ಹೇಳುತ್ತದೆ. ರಾಜೀವ್ ಗಾಂಧಿ ಅಧಿಕಾರಗಳ ಕೇಂದ್ರೀಕರಣದ ಯತ್ನ ನಡೆಸಿದ್ದಾರೆ. ಎಲ್ಲಾ ಅಧಿಕಾರವೂ ಕೇಂದ್ರದಲ್ಲೇ ನೆಲೆಯಾಗಬೇಕೆಂದು ಒತ್ತಾಯಿಸುವ ಮೂಲಕ ಬಿ. ಜೆ. ಪಿ. ಅದನ್ನೇ ಹೇಳುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಜಾತ್ಯಾತೀತ ವಿರೋಧ ಪಕ್ಷಗಳು ರಾಜ್ಯಗಳ ಪೂರ್ಣ ಸ್ವಾಯತ್ತತೆ ಹಾಗೂ ಕೇಂದ್ರ–ರಾಜ್ಯ ಸಂಬಂಧಗಳ ಪುನರ್ರಚನೆಯ ಇತರ ಅಂಶಗಳ ಬಗ್ಗೆ ಸ್ಪಷ್ಟ ನೀಲಿ ನಕಾಶೆಯನ್ನೇ 1983 ರಲ್ಲಿ ಶ್ರೀನಗರ ಸಮ್ಮೇಳನದಲ್ಲಿ ರೂಪಿಸಿ ದೇಶದ ಮುಂದಿಟ್ಟವೆ. 1987 ರಲ್ಲಿ ನಡೆದ ಕಾಂಗ್ರೈಯೇತರ ಮುಖ್ಯಮಂತ್ರಿಗಳ ಸಭೆಯೂ ಇದನ್ನು ಮತ್ತೆ ಒತ್ತಿ ಹೇಳಿತು. ಆದರೆ ಜಾತ್ಯಾತೀತ ಪಕ್ಷಗಳು 1983 ರಿಂದ ಯಾವ ನಿಲುವಿಗೆ ಬದ್ಧರಾಗಿದ್ದರೋ ಅದನ್ನು ಸೂರಜ್ ಕುಂಡ್ ಸಭೆ ಬಿ. ಜೆ. ಪಿ. ಮತ್ತು ರಾಜೀವ್‌ಗಾಂಧಿಯವರ ನಿಲುವುಗಳಿಗೆ ಅನುಕೂಲವಾಗುವಂತೆ ಪರಿಷ್ಕರಿಸಿದೆ. ದೇಶದ ಜಾತ್ಯಾತೀತ ಆಧಾರವನ್ನು ಬಲಪಡಿಸುವ ಬದಲು ಹಿಂದೂರಾಷ್ಟ್ರದ ಕನಸು ಕಾಣುವ ಪಕ್ಷಗಳ ಸಹಕಾರ ಪಡೆಯ ಬಯಸುವಾಗ ಈ ರೀತಿಯ ರಾಜಿ ಸ್ವಾಭಾವಿಕವೇ !

ಸೂರಜ್‌ಕುಂಡ್ ಸಭೆ ಇತರ ಬೇಡಿಕೆಗಳನ್ನು ನಿರೂಪಿಸುವಾಗಲೂ ಅದರಲ್ಲಿ ಭೂ ಸುಧಾರಣೆಯ ಪ್ರಸ್ತಾಪವೇ ಇಲ್ಲದಿರುವುದು ಇನ್ನೊಂದು ಗಮನಿಸಬೇಕಾದ ಸಂಗತಿ. 1984 ರ ವಿರೋಧ ಪಕ್ಷಗಳ ಕಲ್ಕತ್ತಾ ಸಮ್ಮೇಳನ ಹಾಗೂ 1987ರ ಕಾಂಗ್ರೆಸ್ಸೇತರ ಮುಖ್ಯ ಮಂತ್ರಿಗಳಸಮ್ಮೇಳನದಲ್ಲೂಇದೊಂದು ಪ್ರಮುಖ ಬೇಡಿಕೆಯಾಗಿತ್ತು. ಇದೇ ರೀತಿ ಈ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು ಒಟ್ಟಿನಲ್ಲಿ, ಇಂತಹ ಕಲಸುಮೇಲೋಗರ ಏನನ್ನೂ ಸಾಧಿಸಲಾರದು ಮತ್ತು ಭ್ರಷ್ಟಾಚಾರಗಳಿಂದ ನಡುಗಿ ಹೋಗಿರುವ ರಾಜೀವಗಾಂಧಿ ಸರ್ಕಾರವನ್ನು ಇಳಿಸಲು ಭಾರತೀಯ ಜನತೆಯನ್ನು ಸಂಘಟಿಸುವಲ್ಲಿ ಒಂದು ಪರಿಣಾಮಕಾರೀ ಅಸ್ತ್ರವೂ ಆಗಲಾರದು ಎಂಬ ತೀರ್ಮಾನಕ್ಕೆ ಯಾರೇ ಆಗಲಿ ಬರಬಹುದು. ಜಾತ್ಯಾತೀತ ವಿರೋಧ ಪಕ್ಷಗಳೂ ಇದನ್ನು ಅರಿತುಕೊಳ್ಳುತ್ತವೆ ಎಂಬ ಭರವಸೆ ನನಗಿದೆ. ಹೋರಾಟ ಮುಂದುವರಿಸಲು ಅವರು ಎಡ ಪಕ್ಷಗಳ ಜತೆ ಸೇರಬೇಕು. ಬಂಧಿತ ಸಿಖ್ಖ ಉಗ್ರಗಾಮಿಗಳು ನೀಡಿರುವ ಹೇಳಿಕೆಗಳನ್ನ ನೋಡಿಯಾದರೂ ದೇಶದ ವಿರುದ್ಧ ಸಾಮ್ರಾಜ್ಯಶಾಹೀ ಪಿತೂರಿಗಳ ಬಗ್ಗೆ ಎಚ್ಚರಾಗಬೇಕು.

1983 ರಿಂದಲೂ ಎಡ ಪಕ್ಷಗಳು ಸತತವಾಗಿ ತಳೆದಿರುವ ನಿಲುವು ನೀತಿಬದ್ಧ ನಿಲುವು. ಆದರೆ ತಾವೇಕೆ ತಮ್ಮ ನಿಲುವುಗಳನ್ನು ಬದಲಿಸಿಕೊಳ್ಳುತ್ತಿದ್ದೇವೆ ಎಂದು ಪರೀಕ್ಷಿಸಿಕೊಳ್ಳಬೇಕಾದವರು ಇತರ ಜಾತ್ಯಾತೀತ ವಿರೋಧಪಕ್ಷಗಳು. ಇಂತಹ ಕ್ಷಿಪ್ರ ಬದಲಾವಣೆಗಳಿಂದ ಅವರಿಗೂ ಪ್ರಯೋಜನವಿಲ್ಲ. ಹೊಸ ಚುನಾವಣೆಯ ಆಂದೋಲನಕ್ಕೂ ಪ್ರಯೋಜನವಿಲ್ಲ.

"ಎಡ ಪಕ್ಷಗಳನ್ನೇ ಬೆಂಬಲಿಸುವೆ" — ವಿ. ಪಿ. ಸಿಂಗ್

ಎಡ ಪಕ್ಷಗಳು ಮತ್ತು ಬಿ.ಜೆ.ಪಿ. ನಡುವೆ ಒಂದನ್ನು ಆರಿಸಿ ಕೊಳ್ಳಬೇಕಾಗಿ ಬಂದಲ್ಲಿ, ಎಡ ಪಕ್ಷಗಳನ್ನೇ ನಾನು ನನ್ನ ಮಿತ್ರ ಪಕ್ಷವನ್ನಾಗಿ ಆಯ್ಕೆ ಮಾಡುತ್ತೇನೆ ಎಂಬುದಾಗಿ ಮಾಜೀ ರಕ್ಷಣಾ ಸಚಿವ ವಿ.ಪಿ.ಸಿಂಗ್ ಸೆ. 27ರ ಪತ್ರಿಕಾ ಗೋಷ್ಠಿಯೊಂದರಲ್ಲಿ ಹೇಳಿದರು.

ನಾನು ನನ್ನ ಚಳವಳಿಯಲ್ಲಿ ಪ್ರತ್ಯೇಕತಾವಾದದ ವಿರುದ್ಧದ ಹೋರಾಟಕ್ಕೆ ಹೆಚ್ಚಿನ ಆದ್ಯತೆ ನೀಡುತ್ತೇನೆ. ಏಕೆಂದರೆ ಆರ್ಥಿಕ ಅಪರಾಧಗಳ ವಿರುದ್ಧದ ಹೋರಾಟಕ್ಕೆ ಇದು ಮುಖ್ಯವಾಗುತ್ತದೆ. ಅಕ್ಟೋಬರನಲ್ಲಿ ಎಡ ಪಕ್ಷಗಳು ದೆಹಲಿಯಲ್ಲಿ ನಡೆಸಲಿರುವ ಪ್ರತ್ಯೇಕತಾವಾದ ವಿರೋಧಿ ಸಮ್ಮೇಳನದಲ್ಲಿ ನಾನು ಭಾಗವಹಿಸುತ್ತೇನೆ. ಪ್ರತ್ಯೇಕತಾವಾದದ ಪ್ರಶೆ ಕುರಿತಂತೆ ಯಾರನ್ನು ಬೆಂಬಲಿಸುವುದೆಂಬ ವಿಷಯದಲ್ಲಿ ವಿರೋಧ ಪಕ್ಷಗಳು ಎರಡು ಗಂಪುಗಳಾಗಿ ಒಡೆಯುವ ಪಕ್ಷದಲ್ಲಿ ನಾನು ಎಡ ಪಕ್ಷಗಳೊಂದಿಗೆ ಇರುತ್ತೇನೆ. ಏಕೆಂದರೆ ಕೆಲವು ನಿರ್ದಿಷ್ಟ ಪ್ರಶ್ನೆಗಳನ್ನು ಕುರಿತಂತೆ ಎಡ ಪಕ್ಷಗಳ ಧೋರಣೆಯೊಂದಿಗೆ ನನ್ನ ಒಮ್ಮತವಿದೆ.

ಇತ್ತೀಚೆಗೆ ಸೂರತ್ ಕುಂಡ್‌ನಲ್ಲಿ ಎಡ ಪಕ್ಷಗಳನ್ನು ಹೊರತು ಪಡಿಸಿದ, ವಿರೋಧ ಪಕ್ಷಗಳ ಸಭೆ ನಡೆಯಿತು. ಇದರಲ್ಲಿ ಎಡ ಪಕ್ಷಗಳು ಭಾಗವಹಿಸಲಿಲ್ಲ. ಯಾವುದೇ ಒಂದು ರಾಷ್ಟ್ರೀಯ ಚಳುವಳಿಯಲ್ಲಿ ಎಡ ಪಕ್ಷಗಳನ್ನು ದೂರವಿಡುವುದು, ಸರಿಯಲ್ಲ ಎಂಬುದಾಗಿ ವಿ.ಪಿ. ಸಿಂಗ್ ಅಭಿಪ್ರಾಯ ವ್ಯಕ್ತಪಡಿಸಿದರು.

ಹೋಸಿಪುರನಲ್ಲಿ ಸೆ. 30ರಂದು ಬಹಿರಂಗ ಸಭೆಯನ್ನುದ್ದೇಶಿಸಿಮಾತನಾಡಿದ ವಿ.ಪಿ. ಸಿಂಗ್ ಕೋಮು ವೈಷಮ್ಯವನ್ನು ಪ್ರಚೋದಿರುವವರ ವಿರುದ್ಧ ಜನತೆ ತೀವ್ರ ಹೋರಾಟ ನಡೆಸಬೇಕಾಗಿದೆಯೆಂದು ಹೇಳಿದರು.

ಡಿ. ವೈ. ಎಫ್. ಐ. 3ನೇ ರಾಜ್ಯ ಸಮ್ಮೇಳನ
4–6, ನವೆಂಬರ್ 1987 ಕೋಲಾರ

ಡಿ.ವೈ.ಎಫ್.ಐ. 3ನೇ ರಾಜ್ಯ ಸಮ್ಮೇಳನವು ಕೋಲಾರ ನಗರದ ಬಿಂದಿನಾಳ್ಯಂ ಕಲ್ಯಾಣ ಮಂದಿರದಲ್ಲಿ ನಡೆಯಲಿದೆ.

ಎಲ್ಲಾ ಜಿಲ್ಲಾ ಘಟಕಗಳು ಶೀಘ್ರವಾಗಿ ಕಾರ್ಯ ಪ್ರವೃತ್ತರಾಗಬೇಕೆಂದು ಕೋರಲಾಗಿದೆ.

ಎಸ್. ಶಿವರಾಂ
ಕಾರ್ಯದರ್ಶಿ

ಮಹಾಬಲ ವಡೇರ ಹೋಬಳಿ
ಅಧ್ಯಕ್ಷ

ಕರ್ನಾಟಕ ರಾಜ್ಯದಲ್ಲಿ

ಜನತಾ ಅಧ್ಯಕ್ಷರಾಗಿ ಪ್ರಕಾಶ್

ಬಹಳ ನೆನೆಗುದಿಗೆ ಬಿದ್ದಿದ್ದ ರಾಜ್ಯ ಜನತಾ ಪಕ್ಷದ ಅಧ್ಯಕ್ಷರ ಚುನಾವಣೆ ಕೊನೆಗೆ ಎಂ.ಪಿ.ಪ್ರಕಾಶ್ ಅವರ ಆಯ್ಕೆಯಲ್ಲಿ ಕೊನೆಗೊಂಡಿತು. ಕಾಂಗ್ರೆ ಅಧ್ಯಕ್ಷರಾಗಿ ನೇಮಕಗೊಂಡಿರುವ ಕೇಂದ್ರರಾಜ್ಯ ಅರ್ಥಮಂತ್ರಿಜನಾರ್ಧನ ಪೂಜಾರಿಯವರ ಬಿರುಗಾಳಿಯ ಪ್ರಭಾವಿತ ಪ್ರಚಾರವನ್ನೆದುರಿಸಲು ಅಬ್ದುಲ್ ನಝೀರ್ ಸಾಹೇಬರೇ ಯೋಗ್ಯ ವ್ಯಕ್ತಿ ಎಂಬ ಕಾರಣದಿಂದ ಅವರನ್ನೇ ಅಧ್ಯಕ್ಷರನ್ನಾಗಿಮಾಡಬೇಕೆಂಬ ಹೆಗಡೆಗುಂಪಿನ ಆಸೆ ಕೈಗೂಡಲಿಲ್ಲವಷ್ಟೇ ಅಲ್ಲ ಹೆಗಡೆ ವಿರೋಧಿ ಗುಂಪಿಗೂ ಜಯ ಸಿಗಲಿಲ್ಲ. ಗುರುಪಾದಸ್ವಾಮಿಯವರನ್ನು ಅಧ್ಯಕ್ಷಪಟ್ಟಕೇರಿಸುವಲ್ಲಿ ನನ್ನನ್ನು ತಡೆಯಲು ಪ್ರಯತ್ನ ನಡೆದಿದೆ ಎಂದು ಆರ್ಭಟಿಸುತ್ತಲೇ ಗುರುಪಾದಸ್ವಾಮಿಯವರು ತಮ್ಮ ನಾಮ ಪತ್ರಹಿಂತೆಗೆದುಕೊಂಡು ಎಂ.ಪಿ.ಪ್ರಕಾಶರನ್ನು "ಸರ್ವಾನುಮತ" ದಿಂದ ಆರಿಸಲು ದಾರಿ ಮಾಡಿಕೊಟ್ಟು ಕೊನೆಯಲ್ಲಿ ಅವರಿಗೆ ಶುಭಕೋರಿದರು.

ಜನತಾ ಪಕ್ಷದ ಅಧ್ಯಕ್ಷರು ಯಾರಾಗುತ್ತಾರೆಂಬುದರ ಕುರಿತು ನಾವು ತಲೆಕೆಡಿಸಿಕೊಳ್ಳುವ ಅಗತ್ಯವೇನಿಲ್ಲ. ಆದರೆ ಕೇಂದ್ರ ಸರ್ಕಾರದ ನೀತಿಯ ವಿರುದ್ಧದ ಹೋರಾಟದಲ್ಲಿ ಜನತಾ ಪಕ್ಷದ ಸಹಕಾರ ಅಗತ್ಯ ! ಆ ಕಾರಣದಿಂದಾಗಿ ಆ ಪಕ್ಷದ ಅಧ್ಯಕ್ಷ ಸ್ವಲ್ಪವಾದರೂ ಪ್ರಗತಿಪರ ವ್ಯಕ್ತಿಯಾದರೆ ಎಡಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಚಳುವಳಿಗೆ ಸಹಾಯವಾಗುತ್ತದೆ ಎಂಬ ದೃಷ್ಟಿಯಿಂದ ನಾವು ವಿಚಾರ ಮಾಡಬೇಕಾಗುತ್ತದೆ. ಎಂ.ಪಿ. ಪ್ರಕಾಶ್ ಜನತಾ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದನ್ನು ನಾವು ಸ್ವಾಗತಿಸುತ್ತೇವೆ. ಇವರು ಮಾಜಿ ಸಮತಾವಾದಿಗಳು, ಈಗಲೂ ಸ್ವಲ್ಪ ಮಟ್ಟಿಗಾದರೂ ಅದೇ ಸಮಯದಲ್ಲಿ ಗುರುಪಾದಸ್ವಾಮಿಯವರ ರಾಜಕೀಯ ಹಿನ್ನೆಲೆ ಸರಿಯಿಲ್ಲ. ವಿದೇಶಿ ಶಕ್ತಿ ಕೂಟದೊಡನೆ ಸಂಬಂಧವಿದೆಂಬ ವದಂತಿಯಿದೆ. ಆ ದೃಷ್ಟಿಯಲ್ಲಿ ಎಂ.ಪಿ. ಪ್ರಕಾಶರಿಂದ ಹೆಚ್ಚಿನ ಅಪಾಯವಿಲ್ಲೆಂದೇ ಹೇಳಬಹುದು. ಕೇಂದ್ರದ ವಿರುದ್ಧ ಹೋರಾಟದಲ್ಲಿ ತಮ್ಮ ಪಕ್ಷದವರನ್ನು ಅಣಿಗೊಳಿಸಲು ರಾಜ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸಲು ತಮ್ಮ ಸ್ಥಾನವನ್ನು ಎಂ.ಪಿ.ಪ್ರಕಾಶ್ ಉಪಯೋಗಿಸುತ್ತಾರೆಂದು ಆಶಿಸೋಣ.

ಲಾಭದಲ್ಲಿ ರಾಷ್ಟ್ರೀಕೃತ ಬ್ಯಾಂಕ್

ಸಾಲಮೇಳಗಳ ಮೂಲಕ ಬ್ಯಾಂಕ್‌ಗಳನ್ನು ದಿವಾಳಿ ಎಬ್ಬಿಸುತ್ತಿರುವುದಾಗಿ ತಮ್ಮ ವಿರುದ್ಧದ ಆರೋಪ ನಿರಾಕರಿಸಲು ರಾಷ್ಟ್ರೀಕೃತಬ್ಯಾಂಕ್‌ಗಳುಕಳೆದ ಮೂರು ವರ್ಷಗಳಲ್ಲಿ ಶೇ.63 ರಷ್ಟು ಲಾಭಗಳಿಸಿರುವುದೇ ದೊಡ್ಡ ಪುರಾವೆ ಎಂದು ಜನಾರ್ಧನ ಪೂಜಾರಿ ಬೆನ್ನು ಚಪ್ಪರಿಸಿ ಕೊಂಡಿದ್ದಾರೆ. 1984ರಿಂದ 1986,ರವರೆಗೆ ಪ್ರತಿವರ್ಷ82ಕೋಟಿ, 117 ಕೋಟಿ ಮತ್ತು 192 ಕೋಟಿ ರೂ. ಲಾಭವಾಗಿದೆಂದೂ ಹೇಳಿ ತಾವು ಸಾಲಮೇಳದ ರೂಪದಲ್ಲಿ ಬ್ಯಾಂಕಿನ ಹಣ, ವಿತರಣೆ ಮಾಡುವ ಪದ್ಧತಿಯನ್ನು ಸಮರ್ಥಿಸಿ ಕೊಂಡಿದ್ದಾರೆ. ಸಾರ್ವಜನಿಕರು ತೊಡಗಿಸಿದ ಹಣಕ್ಕೆ ಕಡಿಮೆ ಬಡ್ಡಿ, ಅವರು ಪಡೆಯುವ ಸಾಲದ ಬಡ್ಡಿ ಎಂ.ಟಿ.ಡಿ.ಡಿ. ಗಳ ಕಮಿಶನ್ ದುಬಾರಿ. ಹೀಗೆ ಬ್ಯಾಂಕುಗಳಲ್ಲಿ ಹಣವಿಟ್ಟ ಸಾರ್ವಜನಿಕರ ಮೇಲೆಭಾರವಾದ ಹೊರೆಹೇರಿ ಬ್ಯಾಂಕುಗಳಿಸುತ್ತಿವೆಂಬ ಅಂಶವನ್ನು ರಾಜಕೀಯ, ಮತಗಳಿಕೆಯ ದುರುದ್ದೇಶದಿಂದ ಪೂಜಾರಿಯವರು ಮುಚ್ಚಿಡುತ್ತಿದ್ದಾರೆ.

ಬಡವರಿಗೆಲ್ಲ ಹಣದ ಸಹಾಯ ಒದಗಿಸಲೇಬೇಕು. ಅದು ಸದುಪಯೋಗವಾಗಲೇಬೇಕು. ಸಂದಿಗ್ಧ ಪರಿಸ್ಥಿತಿಗಳಲ್ಲಿ ಸಾಲ ಮನ್ನಾ ಆಗಲೇ ಬೇಕು. ಇವುಗಳಿಗೆಲ್ಲಾ ಜನಾರ್ಧನ ಪೂಜಾರಿಯವರ ಸಾಲಮೇಳ ಪರಿಹಾರವಲ್ಲ.

ನಮ್ಮ ಹೋರಾಟಕ್ಕೆ ಜಯ

ಸಿ.ಪಿ.ಐ. (ಎಂ) ಮತ್ತು ಪ್ರಾಂತ ರೈತ ಸಂಘ ಕಳೆದ ಹಲವಾರು ವರ್ಷಗಳಿಂದ ನಡೆಸಿದ ಹೋರಾಟಕ್ಕೆ ಸ್ವಲ್ಪ ಜಯ ಸಿಕ್ಕಿದೆ. ಸರಕಾರಿ ಭೂಮಿಯಲ್ಲಿರುವ ಗುಡಿಸಲು ವಾಸಿಗಳಿಗೆ, ಮನೆ ಕಟ್ಟಿಸಿಕೊಂಡವರಿಗೆ ಅವರಿಗಿರುವ ಜಾಗವನ್ನು ಅವರ ಹೆಸರಲ್ಲೇ ಮಂಜೂರಿ ಮಾಡಬೇಕೆಂಬುದೇ ನಮ್ಮ ಹೋರಾಟವಾಗಿತ್ತು. ಆ ತತ್ವವನ್ನು ರಾಜ್ಯ ಜನತಾ ಸರಕಾರ ತಾ.-23-9-87ರ ಸಂಪುಟ ಸಭೆಯಲ್ಲಿ ಒಪ್ಪಿಕೊಂಡಿದೆ. ಅನಧಿಕೃತವಾಗಿ ನಿರ್ಮಿಸಿರುವ ಮನೆಗಳನ್ನು ಸಕ್ರಮಗೊಳಿಸಲು ನಿರ್ಧರಿಸಿದೆ. ನಾವು ನಡೆಸಿದ ಹೋರಾಟಕ್ಕೆ ಸಿಕ್ಕ ಜಯ ಇದಾಗಿದೆ. ಆದರೆ ಸಂಪುಟದ ನಿರ್ಧಾರ 1986 ಮಾರ್ಚ್ ತಿಂಗಳ ಕೊನೆಯವರೆಗೆ ಕಟ್ಟಿದ ಮನೆಗಳಿಗೆ ಮಾತ್ರ ಸೀಮಿತವಂತೆ. ಬಡವರಿಗೆಲ್ಲಾ ಪುಕ್ಕಟೆಯಾಗಿಯೇ ವಾಸ ಸ್ಥಳ ಒದಗಿಸಬೇಕೆಂಬುದು ನಮ್ಮ ಬೇಡಿಕೆ. ಆದರೆ ಈ ಜನರ ಮೇಲೆ ಅತಿ ಹೆಚ್ಚಿನ ದಂಡ ಹೇರಲು ಜನತಾ ಸರ್ಕಾರ ನಿರ್ಧರಿಸಿದೆ. ಆ ನಿರ್ಣಯವನ್ನು ನಾವು ಒಪ್ಪುವುದಿಲ್ಲ. ಪುಕ್ಕಟೆಯಾಗಿಯೇ ಅವರಿಗೆಲ್ಲಾ ಪಟ್ಟಾ ಕೊಡಬೇಕು, ಸಾಧ್ಯವಾಗದಿದ್ದಲ್ಲಿ ಸಾಂಕೇತಿಕವಾಗಿ ಮಾತ್ರ ದಂಡ ಹೇರಿ ಸಮಸ್ಯೆ ಬಗೆಹರಿಸಬೇಕು, ಅಧಿಕಾರಿಗಳ ಯಾವುದೇ ರೀತಿಯ ಕಿರುಕುಳ ವಿಲ್ಲದೆ ಶೀಘ್ರ ಪಟ್ಟಾವಿತರಣೆ ಆಗಬೇಕು. ●

"ಸತಿ" ಪ್ರತಿಭಟನೆಗೆ ಕರೆ

ರಾಜಸ್ಥಾನದ 'ಸತಿ' ಪದ್ಧತಿ ದೇಶದ ಮಹಿಳೆಯರನ್ನು ಹಲವು ಶತಮಾನಗಳಷ್ಟು ಹಿಂದಿನ ಮೌಢ್ಯದಿಂದ ಜಿಡ್ಡುಗಟ್ಟಿದಸಂಪ್ರದಾಯಕ್ಕೆ ತಳ್ಳುವಂತಹದಾಗಿದ್ದು ಇದರ ವಿರುದ್ಧ ಮಹಿಳೆ ಸಿಡಿದೇಳಬೇಕೆಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಂಚಾಲಕಿ ಕಾ||ಹರಿಣಿ ಕಕ್ಕೇರಿಯವರು ಕರೆ ನೀಡಿದ್ದಾರೆ.

ಬಿ. ಜೆ. ಪಿ. ಕಾಂಗ್ರೆ, ಜನತಾ ನಾಯಕರು ಚುನುರಿ ಮಹೋತ್ಸವ ಆಚರಣೆಯಲ್ಲಿ ಪಾಲ್ಗೊಂಡು ಬೆಂಬಲಿಸಿದ್ದನ್ನು ಅವರು ಉಗ್ರವಾಗಿ ಖಂಡಿಸಿದ್ದಾರೆ. ಕರ್ನಾಟಕದ ತನ್ನ ಎಲ್ಲಾ ಘಟಕಗಳು 'ಸತಿ' ಪದ್ಧತಿ ವಿರುದ್ಧ ಪ್ರತಿಭಟಿಸಲು ಅವರು ಕರೆ ನೀಡಿದ್ದಾರೆ.

ಇದು ನಿಮಗೆ ಗೊತ್ತೆ ?

ಟೆನಿಸ್, ಟೆನಿಸ್, ಕಳೆದ ವಾರದಿಂದ ಬಹುತೇಕ ಕ್ರೀಡಾಭಿಮಾನಿಗಳ ಚರ್ಚೆಯ ಅತಿ ಮುಖ್ಯ ವಸ್ತು— ಟೆನಿಸ್ ರಮೇಶ್‌ಕೃಷ್ಣನ್, ಆಸ್ಟ್ರೇಲಿಯಾದ ನೆಲದಲ್ಲಿಯೇ ಅವರನ್ನೇ ಸೋಲಿಸಿ ಅಭೂತಪೂರ್ವ ಕನಸಿನ ಶೈಲಿಯಲ್ಲಿ ಹೆಜ್ಜೆ ಹಾಕಿದ್ದು ಈ ಚರ್ಚೆಗೆ ಕಾರಣ.

ಘಟಾನುಘಟಿಗಳಿಗೇ ಮಣ್ಣುಮುಕ್ಕಿಸಿದ ನಂತರ ಫೈನಲ್ ತಲುಪಿದೆ ಭಾರತ.ಡಿಸೆಂಬರ್‌ನಲ್ಲಿ ಫೈನಲ್ಸ್ ನಡೆಯಲಿದೆ. ಇದು ಟೆನಿಸ್ ಕ್ರೀಡಾಸಕ್ತರ ಚರ್ಚೆಯಾದರೆ ರಾಜಕೀಯದ ವಲಯದಲ್ಲಿ ಈ ಟೆನಿಸ್ ಭಾರಿ ಸುದ್ದಿ ಮಾಡಿತ್ತು ಎಂದು ನಿಮಗೆ ಗೊತ್ತೆ ?

ಡೇವಿಸ್‌ಕಪ್ ಫೈನಲ್‌ಗೆ ಭಾರತ ಇದುವರೆಗೆ ಮೂರು ಬಾರಿ ಪ್ರವೇಶ ಪಡೆದಿದೆ. ಅದರಲ್ಲಿ ಒಂದು ಬಾರಿ 1974ರಲ್ಲಿ ಫೈನಲ್ ಆಟ ಆಡಲೇ ಇಲ್ಲ. ಆದರೆ ದಕ್ಷಿಣ ಆಫ್ರಿಕಾದಲ್ಲಿ ಈ ಡೆವಿಸ್‌ಕಪ್ ಫೈನಲ್ ನಡೆದಾಗ ಭಾರತ ತನ್ನ ವರ್ಣದ್ವೇಷ ವಿರೋಧಿ ನೀತಿಗೆ ಅನುಗುಣವಾಗಿ ಅಪಾರ ಕ್ರೀಡಾಭಿಮಾನಿಗಳ ದೂಷಣೆಯ ನಡುವೆಯೂ ಸಾಮ್ರಾಜ್ಯಶಾಹಿಗಳ ಒತ್ತಡವನ್ನು ಎದುರಿಸಿ ದ.ಆಫ್ರಿಕಾದ ವರ್ಣನೀತಿಯನ್ನು ಉಗ್ರವಾಗಿ ವಿರೋಧಿಸಲು ಟೆನಿಸ್ ಫೈನಲ್ ಆಡಲೇ ಇಲ್ಲ.

ದುಡಿಯುವ ಮಹಿಳೆಯರ ಸಭೆ

ಚಿಕ್ಕಮಗಳೂರಿನ ಎಂ.ಇ.ಎಸ್. ಶಾಲೆಯ ಸಭಾಂಗಣದಲ್ಲಿ ಸಿ.ಐ.ಟಿ.ಯು.ಗೆ ಸೇರ್ಪಡೆಯಾಗಿರುವ ಕಾಫಿ ಕ್ಯೂರಿಂಗ್, ತೋಟ ಕಾರ್ಮಿಕರ ಮತ್ತು ಇತರ ಸಂಘಗಳ ದುಡಿಯುವ ಮಹಿಳೆಯರ ಸಭೆಯು ಅಕ್ಟೋಬರ್ 4ರಂದು ಜರುಗಿತು. ಸಿ.ಐ.ಟಿ.ಯು. ರಾಜ್ಯ ಮಂಡಳಿ ಸದಸ್ಯೆ ಕಾ.ರಾಜಮ್ಮ, ಕಾ.ಖುರ್ಷಿತಾಬೇಗಂ,ಬೀಡಿ ಕಾರ್ಮಿಕ ನಾಯಕಿ ಕಾ. ಪದ್ಮಾವತಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. 400 ಮಹಿಳೆಯರು ಭಾಗವಹಿಸಿದ್ದ ಸಭೆಯನ್ನು ಕಾಫಿ ಕ್ಯೂರಿಂಗ್ ಸಂಘದ ಕಾರ್ಯದರ್ಶಿ ಕಾ. ಎ.ಕೆ. ವಿಶ್ವನಾಥ್ ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿದರು. ಕಾ. ರಾಜಮ್ಮ ಮಾತನಾಡಿ ತಾವು ರಾಜ್ಯದ ನಾನಾ ಭಾಗಗಳಲ್ಲಿ ಸಂಚರಿಸಿ ಮಹಿಳೆಯರ ಸಮಸ್ಯೆ ಕುರಿತು ಪರಿಶೀಲಿಸಿ ಹೋರಾಟ ಕಾರ್ಯಕ್ರಮ ರೂಪಿಸುವುದಾಗಿ ಹೇಳಿದರು. ಸಾಮಾಜಿಕ ಪಿಡುಗುಗಳ ವಿರುದ್ಧ ಕೂಡ ಹೋರಾಟ ನಡೆಸಬೇಕೆಂದು ಖುರ್ಷಿತಾ ಬೇಗಂ ಹಾಗೂ ಪದ್ಮಾವತಿಯವರು ಕರೆನೀಡಿದರು.

ತೋಟ ಕಾರ್ಮಿಕರ ಸಂಘದ ಕಾರ್ಯದರ್ಶಿ ಕಾ. ಸುಕುಮಾರ್‌ರವರು ಮಾತನಾಡಿ ಅಖಿಲ ಭಾರತ ಸಿ.ಐ.ಟಿ.ಯು. ಸಮ್ಮೇಳನದಲ್ಲಿ ದುಡಿಯುವ ಮಹಿಳೆಯರ ಕುರಿತು ಅಂಗೀಕರಿಸಿದ ನಿರ್ಣಯ ಜಾರಿಗಾಗಿದುಡಿಯಲು ಕರೆಯಿತ್ತರು. ಉಪಕಾರ್ಯದರ್ಶಿ ಕಾ. ಬಿ.ಎನ್. ರಾಘವೇಂದ್ರರವರು ಮಾತನಾಡಿ ಗ್ರಾಮಾಂತರ ಪ್ರದೇಶದ ಮಹಿಳೆಯರನ್ನು ಸಂಘಟಿಸಿ ಜಾಗೃತಗೊಳಿಸಲು ತಿಳಿಸಿದರು. ಕಾ.ಮಂಜುಳರವರು ವಂದನಾರ್ಪಣೆ ಮಾಡಿದರು. ಕಾಫಿ ಕ್ಯೂರಿಂಗ್ ಮತ್ತು ಎಸ್ಟೇಟ್‌ಗಳ 20 ಮಹಿಳಾ ಕಾರ್ಮಿಕರ ಸಮಿತಿಯನ್ನು ಚುನಾಯಿಸಲಾಯಿತು. ●

ಸೋವಿಯೆತ್ ಪತ್ರಿಕೆಯಲ್ಲಿ ಇ. ಎಂ. ಎಸ್. ಲೇಖನ

ಸೋವಿಯೆತ್ ಯೂನಿಯನ್ ನಿಂದ ಪ್ರಕಟವಾಗುತ್ತಿರುವ ಸೈದ್ಧಾಂತಿಕ ಮಾಸ ಪತ್ರಿಕೆಯಾದ 'ಕಮ್ಯುನಿಸ್ಟ್'ನ 13ನೇ ಸಂಚಿಕೆಯಲ್ಲಿ ಸಿ.ಪಿ.ಐ.ನ(ಎಂ)ಪ್ರಧಾನಕಾರ್ಯದರ್ಶಿ ಕಾ.ಇ.ಎಂ.ಎಸ್.ನಂಬೂದಿರಿಪಾಡ್ ಅವರ ಲೇಖನ ಪ್ರಕಟವಾಗಲಿದೆ.

'ಅಕ್ಟೋಬರ್ ಕ್ರಾಂತಿ ಮತ್ತು ಭಾರತದ ರಾಷ್ಟ್ರೀಯ ವಿಮೋಚನೆ' ಎಂಬುದು ಲೇಖನದ ಶೀರ್ಷಿಕೆ. ಅಕ್ಟೋಬರ್ ಕ್ರಾಂತಿಯ 70ನೇ ವಾರ್ಷಿಕೋತ್ಸವದ ವಿಶೇಷ ಸಂಚಿಕೆಯಾಗಿ 'ಕಮ್ಯೂನಿಸ್ಟ್' ಹೊರಬರಲಿದೆ. 25ವರ್ಷಗಳ ನಂತರ ಇಂ.ಎಂ.ಎಸ್.ರವರ ಲೇಖನಈ ಪತ್ರಿಕೆಯಲ್ಲಿ ಪ್ರಕಟಗೊಳ್ಳಲಿದೆ.

ನವೆಂಬರ್7ರಂದು ಮಾಸ್ಕೋದಲ್ಲಿ ನಡೆಯಲಿರುವ ಅಕ್ಟೋಬರ್ ಕ್ರಾಂತಿಯ70ನೇವಾರ್ಷಿಕೋತ್ಸವದ ಸಮಾರಂಭಕ್ಕೆ ಸಿ.ಪಿ.ಐ. (ಎಂ) ಪ್ರತಿನಿಧಿಗಳನ್ನು ಸಿ.ಪಿ.ಎಸ್.ಯು, ಆಹ್ವಾನಿಸಿದೆ. ವಿಶ್ವಾದ್ಯಂತ ಇರುವ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಮುಖಂಡರುಗಳು ಇಲ್ಲಿ ಸಮಾವೇಶಗೊಳ್ಳಲಿದ್ದು ಪರಸ್ಪರ ಅಭಿಪ್ರಾಯ ವಿನಿಮಯಕ್ಕೆ ಇದೊಂದು ಉತ್ತಮ ಸಂದರ್ಭವಾಲಿದೆ.

ಬರ ಮತ್ತು ನೆರೆ ಪರಿಹಾರ ಸಮಿತಿ

ಸಂಗಾತಿಗಳಾದ ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷರು, ಸಿ. ನಂಜುಂಡಪ್ಪ ಪ್ರಧಾನ ಕಾರ್ಯದರ್ಶಿ, ಎನ್. ಕೆ. ಉಪಾಧ್ಯಾಯ ಖಜಾಂಚಿ, ಕೆ. ಮೂಸಬ್ಬ,ಯು. ಬಿ. ಲೋಕಯ್ಯ, ಕೆ. ಶಂಕರ, ಎಂ. ಬಿ. ಕಟ್ಟಿ, ನಿತ್ಯಾನಂದ, ಮಹಮ್ಮದ್‌ದಸ್ತಗೀರ್, ಟಿ. ಎಸ್. ಅನಂತರಾವ್, ಕೆ. ಎಸ್. ಸುಬ್ರಮಣ್ಯಂ, ಮುನಿರೆಡ್ಡಿ ಬಿ. ಇ. ಎಲ್., ಅಬ್ರಹಾಂ, ಐಟಿಸಿ. ವಿ. ಸುಕುಮಾರ್, ಟಿ. ಎಸ್. ಮಣಿ, ಎಂ. ಎಲ್. ಎ. ಸದಸ್ಯರುಗಳು.

ರಾಜಕೀಯ ಸಮಾವೇಶಗಳತ್ತ

ಅಲಿಪ್ತ ನೀತಿಯನ್ನು ರಕ್ಷಿಸುವುದು ಕಾರ್ಮಿಕ ವರ್ಗದ ಕರ್ತವ್ಯ

ಕೇಂದ್ರದ ರಾಜೀವ್‌ಗಾಂಧಿ ಸರಕಾರ ಜನ ಬೆಂಬಲವನ್ನು ಕಳೆದುಕೊಳ್ಳುತ್ತಿದೆ. ಪಕ್ಷದ ರಾಜ್ಯ ಸಮಿತಿ ರಾಜ್ಯದೆಲ್ಲೆಡೆಯಲ್ಲಿ ರಾಜಕೀಯ ಸಮಾವೇಶಗಳನ್ನು ನಡೆಸಿ 17 ಅಂಶಗಳ ಪರ್ಯಾಯ ಕಾರ್ಯಕ್ರಮವನ್ನು ಪ್ರಚಾರ ಮಾಡಲು ಜನರಲ್ಲಿ ಮೂಡುತ್ತಿರುವ ಅತೃಪ್ತಿಯನ್ನು ರಾಜಕೀಯ ಪ್ರಜ್ಞೆಯಾಗಿ ಸಾಕಾರಗೊಳಿಸಲು ತೀರ್ಮಾನಿಸಿದೆ. ಇದಕ್ಕೆ ಬೆಂಬಲವಾಗಿ "ಐಕ್ಯರಂಗ" 17 ಅಂಶಗಳ ಬಗ್ಗೆ ರಾಜಕೀಯ ಪ್ರಚಾರ ನಡೆಸುವ ಕಾರ್ಯಕರ್ತರಿಗಾಗಿ ವಿವರಗಳನ್ನು ಒದಗಿಸುತ್ತಿದೆ.... ಈಗ ಮೊದಲ 4 ಅಂಶಗಳ ಬಗ್ಗೆ ಮುಂದೆ ಓದಿ

ಇಂದು ಇಡೀ ವಿಶ್ವದ ಪ್ರಗತಿಗಾಗಿ ಎರಡು ಮಹಾನ್ ಚಳುವಳಿಗಳು ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಿವೆ. ಇಡೀ ಸಮಾಜವನ್ನು ಹೊಸ ದಿಕ್ಕಿನತ್ತ, ಹೊಸ ಯುಗದತ್ತ ಕೈ ಹಿಡಿದು ಕರೆದೊಯ್ಯುತ್ತಿರುವ ಸಮಾಜವಾದಿ ಕ್ರಾಂತಿಗಳ ಹರಿಕಾರ ಕಮ್ಯೂನಿಸ್ಟ್ ಚಳುವಳಿ ಇದರಲ್ಲಿ ಮೊದಲನೆಯದು. 70 ವರ್ಷಗಳಿಂದ ಜಗತ್ತಿನ ಆಶಾಕಿರಣವಾಗಿ ಪ್ರಜ್ವಲಿಸುತ್ತಿರುವುದು.

ಇಡೀ ವಿಶ್ವವನ್ನೇ ತಮ್ಮ ತಮ್ಮಲ್ಲಿ ಹಂಚಿಕೊಂಡು ವಿಶ್ವದ ಎಲ್ಲಾ ನದಿಗಳೂ ನಮ್ಮದೇ, ಎಲ್ಲಾ ಸಂಪತ್ತು-ಕಾಡು, ಗಿಡ ಮರ ಬಳ್ಳಿಗಳು, ಕಬ್ಬಿಣ, ತಾಮ್ರದಿಂದ ಹಿಡಿದು ಚಿನ್ನ ಬೆಳ್ಳಿ ಮುಂತಾದ ಲೋಹಗಳು, ಈ ವಿಶ್ವದ ಪ್ರತಿಯೊಬ್ಬ ಮಾನವನೂ, ಮಾನವ ಶಿಶುವೂ ನಮ್ಮ ಅಡಿಯಾಳು, ನಮಗಾಗಿ ದುಡಿಯುವುದಕ್ಕಾಗಿಯೇ ಎಂಬ ಮದದಿಂದ ಕೊಬ್ಬಿ ಮೆರೆದು ನಿಂತಿದ್ದ ಕೈ ಬೆರಳೆಣಿಕೆಯ- ಇಂಗ್ಲಿಷ್, ಫ್ರೆಂಚ್, ಡಚ್, ಪೋರ್ಚುಗೀಸ್, ಜರ್ಮನ್, ಅಮೇರಿಕಾಗಳ ರಕ್ಕಸರ ವಿರುದ್ಧ ಸಿಡಿದೆದ್ದು ನಿಂತ ಸ್ವಾತಂತ್ರ್ಯ ಪ್ರೇಮಿ, ವಿಮೋಚನಾ ಚಳುವಳಿಗಳು ಎರಡನೆಯ ಬೃಹದ್ ಶಕ್ತಿ.

ಭಾರತ ಮೊದಲಾದ ಮೂರನೆಯ ಜಗತ್ತಿನ ದೇಶಗಳನ್ನು ಒಮ್ಮೆ ತಮ್ಮ ಮುಷ್ಟಿಯಲ್ಲಿರಿಸಿಕೊಂಡು ಕುಣಿಯುತ್ತಿದ್ದ ಈ ವಸಾಹತುಶಾಹಿ ದೇಶಗಳು ಎರಡನೇಯ ಮಹಾಯುದ್ಧದ ನಂತರ ಈ ದೇಶಗಳಲ್ಲಿ ಬೆಳೆಯುತ್ತಿದ್ದ ಚಳುವಳಿಯನ್ನು ಹತೋಟಿಯಲ್ಲಿಡಲಾಗದೇ ಸ್ವಾತಂತ್ರ್ಯ ನೀಡಿದವು. ರಾಜಕೀಯವಾಗಿ ಈ ದೇಶಗಳು ತಮ್ಮನ್ನು ತಾವು ಆಳಿಕೊಳ್ಳುವುದನ್ನು ಕಷ್ಟ ಪಟ್ಟು ಸಹಿಸಿಕೊಳ್ಳಬೇಕಾಯಿತು. ಆದರೆ ಒಮ್ಮೆ ಮನುಷ್ಯರ ನೆತ್ತರ ರುಚಿ ಕಂಡ ನರಭಕ್ಷಕ ಹುಲಿಗೆ ಬೇರೆ ಯಾವುದೂ ರುಚಿಸದಿರುವಂತೆ ಈ ದೇಶಗಳ ಜನರ, ಪ್ರಾಣಿಗಳನೆತ್ತರು ತಮಗಾಗಿ ಮಾತ್ರ ದುಡಿಯಬೇಕೆಂದು, ಈ ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ತಾವೇ ಕೊಳ್ಳೆ ಹೊಡೆಯಬೇಕೆಂದು ನಿರಂತರವಾಗಿ ಪ್ರಯತ್ನಿಸುತ್ತಿವೆ. ಹಲವು ಬಾರಿ ಜಯಶೀಲವಾಗಿವೆ. ಇದನ್ನೇ 'ನವ ವಸಾಹತುಶಾಹಿ ಬೆಳವಣಿಗೆ' ಎಂದು ಕರೆಯುವುದು.

ಈ ದೇಶಗಳನ್ನು ಸುಲಿಯುವ ಪ್ರಯತ್ನವನ್ನು ಮುಂದುವರಿಸಬೇಕೆನ್ನುವ ಪ್ರಯತ್ನ ಸ್ವಾತಂತ್ರ್ಯ ನೀಡುವ ಕೇಸರಾಟದಲ್ಲೇ ಆರಂಭವಾಯಿತು. ಸ್ವಾತಂತ್ರ್ಯ ನೀಡಿದ ನಂತರ ಅನೇಕ ಬ್ರಹ್ಮಾಸ್ತ್ರಗಳು, ಷಡ್ಯಂತ್ರಗಳು ಸಿದ್ಧವಾದುವು. ಮಿಲಿಟರಿ ಸಾಲಗಳು, ಧನಸಹಾಯ ಈ ಮೋಹನಾಸ್ತ್ರಗಳೆಲ್ಲಾ ನಿರಂತರವಾಗಿ ಬಳಕೆಯಾಗುತ್ತಿವೆ. ಈ ಅಸ್ತ್ರಗಳ ವಿರುದ್ಧ, ಮತ್ತೆ ತಮ್ಮನ್ನು ಅಡಿಯಾಳಾಗಿಸಿಕೊಳ್ಳುವ ಪ್ರಯತ್ನದ ವಿರುದ್ಧ ನಡೆಯುತ್ತಿರುವ ನಿರಂತರ ಸೆಣಸಾಟವೇ ಅಲಿಪ್ತ ಚಳುವಳಿ ಎಂಬ ಹೆಸರಿನಲ್ಲಿ ಸಾಕಾರವಾಗಿದೆ. ಆಗ ತಾನೇ ಸ್ವಾತಂತ್ರ್ಯ ಪಡೆದ ಈ ದೇಶಗಳನ್ನು ತಮ್ಮ ಹಿಡಿತದಲ್ಲಿರಿಸಿಕೊಳ್ಳಲು ಮಿಲಿಟರಿ ಕೌಲುಗಳೆಂಬ ಅಸ್ತ್ರವನ್ನು ರೂಪಿಸಿದರು. 1954-55ರಲ್ಲಿ ಭಾರತದ ಪೂರ್ವದಲ್ಲಿ ಅಮೇರಿಕಾ, ಬ್ರಿಟನ್, ಫ್ರಾನ್ಸ್, ಥೈಲೆಂಡ್, ಮೊದಲಾದ ದೇಶಗಳ 'ಸೀಟೋ ಮಿಲಿಟರಿ ಒಕ್ಕೂಟ, ಪಶ್ಚಿಮದಲ್ಲಿ ಬ್ರಿಟನ್ ತುರ್ಕಿ ಇರಾಕ್' ಇರಾನ್ ಪಾಕಿಸ್ತಾನಗಳ ಸೆಂಟೋಗಳ ಒಕ್ಕೂಟ ಇವುಗಳ ಕಬಂಧ ಬಾಹುಗಳು ಧೃತರಾಷ್ಟ್ರನ ಅಪ್ಪುಗೆಯಂತೆ ಭಾರತವನ್ನು ಇಂಡೋನೇಷ್ಯಾ, ಈಜಿಪ್ಟ್ ಮೊದಲಾದ ದೇಶಗಳನ್ನು ಅಪ್ಪಿ ಕಬಳಿಸ ಬಂದವು.

ಈ ರಕ್ಕಸ ಹಿಡಿತದಿಂದ ಪಾರಾಗಿ ಸ್ವತಂತ್ರವಾಗಿ ರೂಪುಗೊಳ್ಳಲು ಉದಯವಾದದ್ದೇ ಅಲಿಪ್ತ ದೇಶಗಳ-ಯಾವ ರಾಷ್ಟ್ರದ ಮಿಲಿಟರಿ ಒಕ್ಕೂಟದಲ್ಲಿಯೂ ಭಾಗಿಯಾಗುವುದಿಲ್ಲ ಎಂಬ ಶಪಥ ಮಾಡಿದ-ಚಳುವಳಿ.

ಈ ಅಲಿಪ್ತ ನೀತಿಯನ್ನು, ಶಾಂತಿಗಾಗಿ, ಸ್ವತಂತ್ರ ಬೆಳವಣಿಗೆಗಾಗಿ, ರೂಪುಗೊಂಡ ಚಳುವಳಿಯನ್ನು ಒಡೆಯಲು ಅದರಲ್ಲಿಯೂ, ಈ ಚಳುವಳಿಯ ನಾಯಕ ಸ್ಥಾನದಲ್ಲಿರುವ ಭಾರತವನ್ನು ಅಲುಗಾಡಿಸಲು ಅಮೇರಿಕಾ ಮೊದಲಾದ ಸಾಮ್ರಾಜ್ಯಶಾಹಿ ದೇಶಗಳು ನಿರಂತರವಾಗಿ ಪ್ರಯತ್ನ ನಡೆಸುತ್ತಿವೆ. ಭಾರತದ ಸ್ವಾತಂತ್ರ್ಯ ವಿದೇಶಾಂಗ ನೀತಿಯ ಅಡಿಗಲ್ಲಾದ ಅಲಿಪ್ತ ನೀತಿಯನ್ನು ಕಿತ್ತರೆ ಭಾರತವನ್ನೇ ಅಲುಗಾಡಿಸಬಹುದು ಎಂಬ ಇವರ ತಂತ್ರಕ್ಕೆ ಭಾರತದ ಆಳುವ ವರ್ಗಗಳು ಬಲಿಯಾಗುತ್ತಿವೆ. ಸಾಮ್ರಾಜ್ಯಶಾಹಿ ಬಹುರಾಷ್ಟ್ರೀಯ ಕಂಪನಿಗಳ ಜೊತೆ ಸೇರಿದರೆ ಸಿಗುವ ಎಂಜಲು ಕಾಸಿಗಾಗಿ ಭಾರತ ಆಳುವ ವರ್ಗಗಳ ಅತ್ಯಂತ ಪ್ರತಿಗಾಮೀ ಭಾಗವಾದ ಭಾ.ಜ.ಪ ನೈಜ ಅಲಿಪ್ತ ನೀತಿಯ ಹೆಸರಿನಲ್ಲಿ ಭಾರತವನ್ನು ಅಮೇರಿಕಾದ ಬಾಲವಾಗಿಸುವ ಪ್ರಯತ್ನ ನಡೆಸಿದೆ. ಲಿಪ್ತ ನೀತಿಯನ್ನು ಅನುಸರಿಸುತ್ತಿರುವ ಕಾಂಗ್ರೆಸ್ ಅನೇಕ ಬಾರಿ ಅಕಡೆ ಈ ಕಡೆ ತುಯ್ದಾಡುತ್ತಾ ತಮಗೆ ಲಾಭ ಸಿಕ್ಕಂತೆ ನಡೆಯುತ್ತಿದೆ. ಜನತಾ, ಲೋಕದಳ ಮೊದಲಾದ ಇತರ ಬಂಡವಾಳಶಾಹಿ ವಿರೋಧ ಪಕ್ಷಗಳು ಈ ಬಗ್ಗೆ ತೋರಿಸಬೇಕಾದ ಎಚ್ಚರ ತೋರಿಸದೆ ಅದು ಕೇವಲ ಕಾಂಗ್ರೈ ನೀತಿ ಎನ್ನುವಂತೆ ವರ್ತಿಸಿವೆ.

ಇಂತಹ ಸಮಯದಲ್ಲಿ ಭಾರತ ಆಳುವ ವರ್ಗಗಳ ದೃಢವಾದ ಅಲಿಪ್ತ ನೀತಿಯನ್ನು ಅನುಸರಿಸದಿರುವ ಸಮಯದಲ್ಲಿ ನಮ್ಮ ಬದುಕು ಅಮೇರಿಕಾ ಬ್ರಿಟನ್‌ಗಳ ರಕ್ತದಾಹಕ್ಕೆ ಬಲಿಯಾಗಬೇಕಾದರೆ, ನಮ್ಮ ಸ್ವಾತಂತ್ರ್ಯವನ್ನು ಮತ್ತೆ ಕಳೆದುಕೊಳ್ಳದಿರಬೇಕಾದರೆ ಎಚ್ಚರವಹಿಸಬೇಕಾದವರು ನಾವು ಭಾರತದ ದುಡಿಯುವ ಜನರು-ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಯುವ ಜನರು. ಅಲಿಪ್ತ ನೀತಿ ಭಾರತ ಸ್ವಾತಂತ್ರ್ಯದ ಒಂದು ಅನಿವಾರ್ಯ ಭಾಗವೆಂಬುದನ್ನು ಭಾರತದ ದುಡಿಯುವ ಜನತೆಯ ಹೃದಯದಲ್ಲಿ ಮೂಡಿಸಬೇಕಾಗಿದೆ. ಆಳುವ ವರ್ಗಗಳು ಅದನ್ನು ಮಾಡುವುದಿಲ್ಲ. ಕಾರ್ಮಿಕವರ್ಗವೇ ಕಾರ್ಮಿಕ ವರ್ಗದ ಪಕ್ಷವೇ ಈ ಕೆಲಸ ಮಾಡಬೇಕು ಎಂಬುದು ಸಿ.ಪಿ.ಐ. (ಎಂ)ನ 12ನೇ ಮಹಾಧಿವೇಶನದ ಉದ್ಘೋಷ.

– ಜಿ. ಎನ್. ನಾಗರಾಜ್

ನವ ಆರ್ಥಿಕ ನೀತಿಯು ರಾಜೀವ್ ಪ್ರಣಾಳಿಕೆಯ ಕಾಲದಲ್ಲಿ ಅಲಿಪ್ತ ನೀತಿಗೆ ನವ ಆತಂಕಗಳು ಎದುರಾಗುತ್ತಿವೆ. ಭಾರತದ ಸ್ವಾತಂತ್ರ್ಯ ರಕ್ಷಣೆಯಲ್ಲಿ ಆಸಕ್ತಿಯಿರುವವರೆಲ್ಲಾ ಅಲಿಪ್ತ ನೀತಿಯ ರಕ್ಷಣೆಗೆ ಕಂಕಣಬದ್ಧರಾಗಬೇಕು.

ಛಿದ್ರಕಾರಿ ಶಕ್ತಿಗಳ ವಿರುದ್ಧ ಚಳುವಳಿ ನಡೆಸೋಣ

ಈ ಸುದ್ದಿಗಳನ್ನು ಓದಿ : (1) ಬಿಹಾರದಲ್ಲಿ 6 ಮಂದಿ ಹರಿಜನ ಕೃಷಿ ಕೂಲಿಗಾರ-ಬಡ ರೈತರನ್ನು ಭೂಮಾಲಕ ಭೂಸೇನ್ಯವು ಗುಂಡಿಕ್ಕಿ ಕೊಂದು ಹಾಕಿತು. (2) ಪಂಜಾಬಿನಲ್ಲಿ ಇಂದು 36 ಮಂದಿಯನ್ನು ಸಿಖ್ ಭಯೋತ್ಪಾದಕರು ಬಸ್ಸಿನಿಂದ ಎಳೆದು ಹಾಕಿ ಗುಂಡಿಕ್ಕಿ ಕೊಂದರು. (3) ರಾಜಸ್ಥಾನದಲ್ಲಿ ಒಬ್ಬ ಯುವತಿಯನ್ನು ಅವಳ ಇಚ್ಛೆಗೆ ವಿರುದ್ಧವಾಗಿ ಹಿಂದೂ ಗೂಂಡಾಗಳು ಬಲಾತ್ಕಾರವಾಗಿ ಚಿತೆಯಲ್ಲಿ ದೂಡಿ ದೂಡಿ ಸುಟ್ಟು ಹಾಕಿ 'ಸತಿ' ಆಚರಿಸಿದರು. (4) ಮೀರತ್‌ನಲ್ಲಿ ಪೊಲೀಸು ಮೀಸಲು ಪಡೆಯವರಿಂದಲ್ಲೇ 'ಹತ್ತಾರು ಮಂದಿ ಒಂದು ಕೋಮಿಗೆ ಸೇರಿದ (ಅಲ್ಪಸಂಖ್ಯಾತರು) ವರನ್ನು ಗುಂಡಿಕ್ಕಿ ಕೊಲ್ಲಲಾಯಿತು. (5) ಗೂರ್ಖಾ ರಾಜ್ಯ ರಚಿಸಲ್ಪಡಬೇಕುಎಂದು 15ದಿನಗಳಬಂದ್ ಆಚರಿಸಿ ರಸ್ತೆಗಳಲ್ಲಿರುವ ಸೇತುವೆಗಳನ್ನು ಡೈನಮೇಟ್ ಇಟ್ಟು ಧ್ವಂಸ ಮಾಡಲಾಯಿತು.(6) ತುಂಗೆಯಲ್ಲಿದ್ದ ಮೂರ್ತಿ ಒಡೆದಿವೆ ಎಂದು ನೆಪ ಹೂಡಿ ಒಂದು ಕೋಮಿಗೆ ಸೇರಿದ (ಅಂದರೆ ಮುಸ್ಲಿಂರ ಹಲವಾರು ಅಂಗಡಿಗಳನ್ನು ಒಂದು ಬೀಡಿ ಕಂಪನಿಯನ್ನು ದೋಚಲಾಯಿತು. (7) ಜಾರ್ಖಂಡ್ ರಾಜ್ಯವಾಗಬೇಕೆಂದು ಕ್ರಿಶ್ಚಿಯನ್ ಮಿಶನರಿ ಪ್ರೇರಣೆಗೆ ಒಳಗಾಗಿ ಇಬ್ಬರು ಮೂರು ನಿವಾಸಿಗಳು ಸಂಯುಕ್ತ ರಾಷ್ಟ್ರ ಸಂಘಕ್ಕೆ ಖುದ್ದಾಗಿ ಹೋಗಿ ಭಾರತದ ವಿರುದ್ಧ ದೂರು ಸಲ್ಲಿಸಿದ್ದಾರೆ. (8) ಕಂಚಿ ಕಾಮ ಕೋಟಿ ಸ್ವಾಮಿಗಳು "ಹಿಂದೂ ಸಮಾಜ" ವನ್ನು ಉಳಿಸಿರಿ ಎಂದು ದಿಲ್ಲಿಯಲ್ಲಿ ಸಹಚರರೊಂದಿಗೆ ಕೂಡಿ ಮೆರವಣಿಗೆ ಗೈದರು. 9. "ಶ್ರೀರಾಮ ಜನ್ಮ ಭೂಮಿಯನ್ನು ಉಳಿಸಿರಿ" ಎಂದು ದೇಶದ ಉದ್ಧಗಲಕ್ಕೆ 'ಜಾತ್ರೆ' ಗಳನ್ನು ಸಂಘಟಿಸಲು ಹಿಂದೂ ರಕ್ಷಣಾ ಸಮಿತಿ ಯು ಕರೆ ಕೊಟ್ಟಿತು. 10. "ಬಾಬ್ರಿಮಜ್ಜಿದ್ ನಾಶಮಾಡುತ್ತಾರೆ" ಎಂದು ಮುಸ್ಲಿಂ ಮೂಲ ಭೂತವಾದಿಗಳು ಎಲ್ಲೆಡೆ ದಂಗೆ' ನಡೆಸಿದರು. 11. ಮುಸ್ಲಿಂ, ಲೀಗನ್ನು ಹೊರತು ಪಡಿಸಿ ಕೇರಳದಲ್ಲಿ ಸರ್ಕಾರ ಮಾಡಲು ಯಾರಿಗೂ ಸಾಧ್ಯವಿಲ್ಲ." ವೆಂದು ಪಾಕಿಸ್ತಾನದಲ್ಲಿ ಹೋಗಿ ಮುಸ್ಲಿಂಲೀಗ್ ಅಧ್ಯಕ್ಷ ಸುಲೇಮಾನ್‌ಸೇಟ್ ಭಾಷಣವಿತ್ತರು. 12. ಒಕ್ಕಲಿಗರು ಕೂಡಾ ಎಂದೂ ಹಿಂದುಳಿದವರು ಎಂದು ಸಾರಬೇಕೆಂದು" ಒಕ್ಕಲಿಗರೆಲ್ಲರೂ ಚಳುವಳಿ ಮಾಡಿರಿ ಎಂಬ ಕರೆ. 13. "ಲಿಂಗಾಯಿತರಿಗೂ ಮೀಸಲು ಬೇಕು" ಎಂದು ಚಳುವಳಿಗೆ ಕರೆ .... 14. "ದಲಿತರು ನಾವು ಪ್ರತ್ಯೇಕವಾಗಿ ಹೋರಾಡಿದರೆ ಮಾತ್ರ ನಮ್ಮ ಸಮಸ್ಯೆಗಳಿಗೆ ಪರಿಹಾರ" ಎಂದು ದಲಿತ ಸಂಘರ್ಷ ಸಮಿತಿ ಕರೆ. 15. ಮಾಲೂರಿನಲ್ಲಿ "ನಿರ್ಬಂಧಕಾಜ್ಞೆ 15 ದಿನಕಾಲ 144ನೇ ಕಾಲಂಜ್ಯಾರಿ; ಕಾರಣ, ಕೋಮು ಪುನರಾವರ್ತನೆ ಭಯ. 16. ಗಣಪತಿ ಮೆರವಣಿಗೆಗಳು ನಡೆಯುವ ಸಂದರ್ಭ ಮತೀಯ ಗಲಭೆಗಳಾಗುವ ಸಂಭವ ಜಾಸ್ತಿ ; ಪೊಲೀಸು ವರದಿ. 17. "ನಾವು ಹಿಂದೂ, ನೀವು ಹಿಂದೂ" -ನೀವೂ ನಾವೂ ಬಿ.ಜೆ.ಪಿ.ಗೆ ನೇ ಮತ ನೀಡುವ ....ಇತ್ಯಾದಿ ಇತ್ಯಾದಿ ದಿನ ನಿತ್ಯವೂ ನೀವೂ ನಾವು ಪತ್ರಿಕೆಗಳಲ್ಲಿ ಓದುವ ಸುದ್ದಿಗಳು.

ಇವುಗಳ ಕುರಿತು ಭಾರತದ ಪ್ರಜೆಗಳಾಗಿ ನಾವು "ಜಾತ್ಯಾತೀತ ಸಮಾಜವಾದಿ ಪ್ರಜಾಪ್ರಭುತ್ವ" ಎಂದು ಜಗಜ್ಜಾಹಿರ ಮಾಡಿದ ನಾವು ಸ್ವಲ್ಪ ಚಿಂತನೆ ಮಾಡಿದರೆ ನಮಗೆ ಏನು ಕಟಿತವಾಗುವುದು.

"ಸತಿ" ಎಂಬ ಮಧ್ಯಯುಗದ ಭಯಂಕರ ಪಳೆಯುಳಿಕೆಗಳು ಜಾತಿ, ಧರ್ಮಗಳ ಕಿತ್ತಾಟಗಳನ್ನು ಎಲ್ಲಾ ರೀತಿಯಲ್ಲೂ ದುರುಪಯೋಗಪಡಿಸಿಕೊಳ್ಳಲು ಭಾರತದ ಜನತೆಯ ಶತ್ರುಗಳು ಪಾಳೆಯಗಾರಿ ಭೂಸ್ವಾಮಿಗಳು ಹಿರಿಬಂಡವಾಳಶಾಹಿಗಳು ಎಲ್ಲಕ್ಕಿಂತ ಮಿಗಿಲಾಗಿ ಸಾಮ್ರಾಜ್ಯಶಾಹಿಗಳು ಪ್ರಯತ್ನಿಸುತ್ತಿದ್ದಾರೆ ಇದಕ್ಕೆ ಇಡಿ ಭಾರತದ ಜನ ಸಮುದಾಯ ಮಾನವ ಸರಪಳಿಯಾಗಿ ಎದ್ದು ನಿಲ್ಲಬೇಕಾಗಿದೆ.

– ಪಿ. ರಾಮಚಂದ್ರರಾವ್

ಭಾರತ ದೇಶವು ಕೋಮುವಾದಿ ಮತ್ತು ಛಿದ್ರಕಾರಿ ಶಕ್ತಿಗಳ ಕೈಯಿಂದ ನುಚ್ಚು ನೂರಾಗಿ ಹೋಗುತ್ತಿರುವುದನ್ನು ಕಾಣುತ್ತೇವೆ. ಮತ್ತೂ ಚಿಂತನೆ ಮಾಡಿದರೆ ಈ ಎಲ್ಲಾ ಸುದ್ದಿಗಳು ವ್ಯಕ್ತ ಪಡಿಸುವ ಘಟನೆಗಳ ಹಿಂದೆ ಇರುವ ಕೈಗಳು : ಮತೀಯ ಮೂಲಭೂತ ವಾದಿಗಳದ್ದು. ಎಲ್ಲಾ ಪ್ರಗತಿ ಪರ ಬೆಳವಣಿಗೆಯನ್ನು ತಡೆಹಿಡಿಯುವ ಸ್ಥಾಪಿತ ಹಿತಾಸಕ್ತಿಗಳದ್ದು. ಕೊನೆಯಲ್ಲಿ ಸಾಮ್ರಾಜ್ಯಶಾಹಿಗಳದ್ದು, ಅದರಲ್ಲೂ ಅಮೇರಿಕಾದ್ದು.

ಮತೀಯ ಮೂಲಭೂತವಾದಿಗಳು ಯಾರು ? "ನಮ್ಮ ಮತವೇ ಮತ, ಆ ಮತದ ಶಾಸ್ತ್ರದಲ್ಲಿ ಹೇಳಿದ್ದೇ ಸತ್ಯ. ಉಳಿದ ಮತಗಳು ಶಾಸ್ತ್ರಗಳು ಹೇಳುವುದೆಲ್ಲಾ ಮಿಥ್ಯ" ಎಂದು ಸಾರಿ ತಮ್ಮ ಮತದ ಮತ್ತು ಶಾಸ್ತ್ರದ ಹೇಳಿಕೆಗಳನ್ನೆಲ್ಲಾ........ಎತ್ತಿ ಹಿಡಿಯಲು, ಅದೇ ವೇಳೆ ಸಾಮೂಹಿಕ ಪ್ರಾಣ

(6 ನೇ ಪುಟ ನೋಡಿ)

ಸರ್ವಾಧಿಕಾರದ, ಅಧಿಕಾರ ಕೇಂದ್ರೀಕರಣದ ವಿರುದ್ಧ ಹೋರಾಟ

ದಿನೇ ದಿನೇ ದೆಹಲಿಯಲ್ಲಿ ಕೇಂದ್ರಗೊಳ್ಳುತ್ತಿರುವ ಅಧಿಕಾರ ಒಂದು ಕಡೆ ರಾಜ್ಯ ಸರಕಾರಗಳನ್ನು ನಿಸ್ಸಹಾಯಕವಾಗಿಸಿದರೆ ಮತ್ತೊಂದು ಕಡೆ ಸರ್ವಾಧಿಕಾರಿ ಕೇಂದ್ರವನ್ನು ಸೃಷ್ಟಿಸಿದೆ. ಈ ಸರ್ವಾಧಿಕಾರದ ವಿರುದ್ಧ ಹೋರಾಟ ತೀವ್ರಗೊಳ್ಳಬೇಕಾಗಿದೆ.

"ದೇಶ ಇಂದು ಬಿಕ್ಕಟ್ಟಿನ ದವಡೆಯಲ್ಲಿ ಸಿಲುಕಿದೆ. ನಮ್ಮ ರಾಜಕೀಯ ವ್ಯವಸ್ಥೆಯ ಭವಿಷ್ಯ ಅಪಾಯಕ್ಕೀಡಾಗಿದೆ. ನಮ್ಮ ಸ್ವಾತಂತ್ರ್ಯ ಹೋರಾಟದ ಪ್ರಜಾಪ್ರಭುತ್ವ ಮೌಲ್ಯಗಳು ಹೆಚ್ಚೆಚ್ಚು ಆಕ್ರಮಣಕ್ಕೊಳಗಾಗುತ್ತಿವೆ. ಅಧಿಕಾರದ ಕೇಂದ್ರೀಕರಣ ಸರ್ವಾಧಿಕಾರಕ್ಕೆಡೆ ಮಾಡಿಕೊಟ್ಟು ದೇಶದ ಕೆಲವು ಭಾಗಗಳಲ್ಲಿ ಪರಕೀಯ ಪ್ರಜ್ಞೆ ಬೆಳೆಯುವಂತೆ ಮಾಡುತ್ತಿದೆ" ಹೀಗೆ ಆರಂಭವಾಗುತ್ತದೆ ಸರಿಯಾಗಿ ನಾಲ್ಕು ವರ್ಷಗಳ ಹಿಂದೆ (ಅಕ್ಟೋಬರ್ 5–7) ಶ್ರೀನಗರದಲ್ಲಿ ಸೇರಿದ್ದ ವಿರೋಧ ಪಕ್ಷಗಳ ಸಮ್ಮೇಳನದ ಹೇಳಿಕೆ. ಕೇಂದ್ರ–ರಾಜ್ಯ ಸಂಬಂಧಗಳ ಪ್ರಶ್ನೆಗಳ ಬಗ್ಗೆ ಒಂದು ವ್ಯಾಪಕ ಒಮ್ಮತಾಭಿಪ್ರಾಯವನ್ನು ಕ್ರೋಢೀಕರಿಸಿದ ಈ ಹೇಳಿಕೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಆರೋಗ್ಯಕರ ಸಂಬಂಧ ಸ್ಥಾಪಿಸುವ ಹೋರಾಟದಲ್ಲಿ ಒಂದುಮಹತ್ವದ ದಸ್ತಾವೇಜು.

ಕೆಲವೇ ವರ್ಷಗಳ ಹಿಂದೆ ಕೇಂದ್ರ-ರಾಜ್ಯ ಸಂಬಂಧಗಳ ಪ್ರಶ್ನೆಯನ್ನೆತ್ತುವವರು ನಮ್ಮ ದೇಶದಲ್ಲಿ ಬಹಳ ಮಂದಿಗೆ ಹುಚ್ಚರಂತೆ ಕಾಣುತ್ತಿದ್ದರು. ಸಿ.ಪಿ.ಐ. (ಎಂ) ಈ ಪ್ರಶ್ನೆ ಎತ್ತಿದಾಗಲೆಲ್ಲಾ ಮೂಗು ಮುರಿಯುತ್ತಿದ್ದವರು ಬಹಳ ಮಂದಿ. ಆದರೆ ತುರ್ತು ಪರಿಸ್ಥಿತಿಯಲ್ಲಿ ಸಂವಿಧಾನದ 42ನೇ ತಿದ್ದುಪಡಿ ರಾಜ್ಯಗಳನ್ನು ಪೂರ್ಣವಾಗಿ ಕೇಂದ್ರದ ಆಳುವ ಪಕ್ಷದ ಕೃಪಾ ಕಟಾಕ್ಷಕ್ಕೆ ಒಳಪಡಿಸಿದಾಗ ಇವರೆಲ್ಲಾ ಎಚ್ಚೆತ್ತರು. ಈಗ ಈ ಪ್ರಶ್ನೆ ದೇಶದ ಒಂದು ಅತ್ಯಂತ ಮಹತ್ವದ ಪ್ರಶ್ನೆಯೆಂದು ಎಲ್ಲಾ ಪ್ರಜಾಪ್ರಭುತ್ವವಾದಿಗಳು ಒಪ್ಪಿಕೊಳ್ಳುತ್ತಿದ್ದಾರೆ.

ಏಕೆ ಈ ಸಮಸ್ಯೆ ?

ಎರಡು ದಶಕಗಳಿಗೂ ಹಿಂದೆಯೇ ಪಕ್ಷದ ಕಾರ್ಯಕ್ರಮ ಈ ಬಗ್ಗೆ ಹೀಗೆ ಬರೆದಿತ್ತು-"ಇಂತಹ ಪರಿಸ್ಥಿತಿಯನ್ನು ಕೇಂದ್ರ ಮತ್ತು ರಾಜ್ಯಗಳ ನಡುವಿನ ವೈರುಧ್ಯ ಇನ್ನಷ್ಟು ವಿಷಮಗೊಳ್ಳುವುದು ಸ್ವಾಭಾವಿಕವೇ. ಈ ವೈರುಧ್ಯದ ಕೆಳಗೆ ಇದಕ್ಕೂ ಆಳವಾದ ವೈರುಧ್ಯವೊಂದು ಹುದುಗಿದೆ. ಅದೆಂದರೆ ಹಿರಿ ಬೂರ್ಜ್ವಾ ವರ್ಗ ಒಂದೆಡೆ, ಇನ್ನೊಂದೆಡೆ ಬೇರೆ ಬೇರೆ ರಾಜ್ಯಗಳ ಬೂರ್ಜ್ವಾಗಳ,, ಸೇರಿದಂತೆ ಸಮಸ್ತ ಜನತೆಯ ನಡುವಿನ ವೈರುಧ್ಯ. ಬಂಡವಾಳಶಾಹಿಯ ಅಡಿಯಲ್ಲಿ ಅಸಮಾನ ಬೆಳವಣಿಗೆಯಿಂದಾಗಿ ಈ ವೈರುಧ್ಯ ಹೆಚ್ಚೆಚ್ಚು ವಿಷಮಗೊಳ್ಳುತ್ತದೆ"

ರಾಜಕೀಯ, ಸಂವಿಧಾನಾತ್ಮಕ ಹಾಗೂ ಆರ್ಥಿಕ ಹೀಗೆ ಹಲವಾರು ಅಂಶಗಳು ಅಡಕವಾಗಿರುವ ಪ್ರಶ್ನೆ ಈ ಕೇಂದ್ರ-ರಾಜ್ಯಗಳ ಸಂಬಂಧದ ಪ್ರಶ್ನೆ. ಕೇಂದ್ರ ಸರ್ಕಾರದ ಪಟ್ಟಭದ್ರ ಹಿತಾಸಕ್ತಿಗಳ ಪರವಾದ ಧೋರಣೆಗಳು, ಆರ್ಥಿಕ ಬಿಕ್ಕಟ್ಟು ಮತ್ತು ಜನಸಮೂಹಗಳ ಹೆಚ್ಚುತ್ತಿರುವ ಬಡತನದ ಪರಿಣಾಮವಾಗಿ ಪ್ರಜಾಪ್ರಭುತ್ವ ಹಕ್ಕುಗಳ ಜತೆಗೆ ರಾಜ್ಯಗಳ ಹಕ್ಕುಗಳ ಮೇಲೆಯೂ ಹಲ್ಲೆ ನಡೆಯುತ್ತಿವೆ. ಈ ಪ್ರಕ್ರಿಯೆಯ ಜತೆ-ಜತೆಗೇ ಕೇಂದ್ರದ ಮೇಲೆ ರಾಜ್ಯಗಳ ಪೂರ್ಣ ಆರ್ಥಿಕ ಅವಲಂಬನೆಯ ಹೀನಸ್ಥಿತಿ. ರಾಜ್ಯಗಳು ಸಾರ್ವಜನಿಕ ಸಾಲ ಎಷ್ಟು ಎತ್ತಬೇಕು ಎನ್ನುವುದನ್ನು ನಿರ್ಧರಿಸುವುದೂ ಕೇಂದ್ರವೇ. ಬ್ಯಾಂಕ್‌ಗಳು ನೀಡುವ ಸಾಲದ ಮೇಲೂ ಅದರದೇ ಗುತ್ತೇದಾರಿಕೆ. ರಾಜ್ಯಗಳು ಕೇಂದ್ರದ ತಾತ್ಕಾಲಿಕ ಗ್ರಾಂಟುಗಳಿಗಾಗಿ ಬಾಯಿಬಿಟ್ಟು ಕಾಯುತ್ತಿರಬೇಕು. ಜತೆಗೆ ರಾಜ್ಯಗಳ ಯೋಜನೆಗಳಂತೂ ಹಿರಿ ಬಂಡವಾಳಶಾಹಿಗಳ ಅಗತ್ಯಕ್ಕನುಗುಣವಾಗಿ ಹಿಗ್ಗುವ ಕುಗ್ಗುವ ಕೇಂದ್ರದ ಯೋಜನೆಯ ಬಾಲಂಗೋಚಿಯಷ್ಟೆ.

ಪ್ರಜಾಪ್ರಭುತ್ವದ ರಕ್ಷಣೆ

ಕೇಂದ್ರದಲ್ಲೂ, ಹೆಚ್ಚಿನ ರಾಜ್ಯಗಳಲ್ಲೂ ಒಂದೇ ಪಕ್ಷ ಆಳ್ವಿಕೆ ನಡೆಸುತ್ತಿದ್ದುದರಿಂದಾಗಿ ಕೇಂದ್ರದಲ್ಲಿ ರಾಜಕೀಯ ಮತ್ತು ಆರ್ಥಿಕ ಅಧಿಕಾರಗಳು ಕೇಂದ್ರೀಕರಣಗೊಳ್ಳುತ್ತಾ ಬಂದು ಸಂವಿಧಾನದಲ್ಲಿದ್ದ ಅಲ್ಪ–ಸ್ವಲ್ಪ ಫೆಡರಲ್ ಅಂಶಗಳೂ ನಿಸ್ತೇಜಗೊಂಡಿವೆ. ರಾಜ್ಯಪಾಲರ ಹುದ್ದೆಯನ್ನು ವಿರೋಧ ಪಕ್ಷಗಳ ಸರ್ಕಾರಗಳ ವಿರುದ್ಧ ಎಗ್ಗಿಲ್ಲದೆ ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ; ಜನತೆಯ ತೀರ್ಪನ್ನು ಬದಿಗೊತ್ತಲು ಬಳಸಿಕೊಳ್ಳಲಾಗುತ್ತಿದೆ. ಜನತೆಯ ಪರವಾದ ಪ್ರಗತಿಪರ ಶಾಸನಗಳನ್ನು ತಡೆಯಲು ರಾಷ್ಟ್ರಪತಿಗಳ ಅಂಗೀಕಾರವನ್ನು ವಿಳಂಬಗೊಳಿಸಲಾಗುತ್ತಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಯೋಜನೆ ಒಂದು ರಾಜಕೀಯ ಪ್ರಕ್ರಿಯೆ. ಇದಿಲ್ಲದೆ ದೇಶದ ಯೋಜನಾಬದ್ಧ ಆರ್ಥಿಕ ಬೆಳವಣಿಗೆ, ದೇಶದ ಐಕ್ಯತೆ ಮತ್ತು ಪ್ರಜಾಪ್ರಭುತ್ವದ ರಕ್ಷಣೆ ಅಸಾಧ್ಯ. ಸಮಾನತೆಯ ಭಾವನೆ ಮತ್ತು ರಾಜ್ಯಗಳ ಸ್ವಾಯತ್ತತೆಯಿಲ್ಲದೆ ಭಾರತದ ಐಕ್ಯತೆ ದೃಢಗೊಳ್ಳಲಾರದು. ನಾವು ಒಂದು ದೇಶದ ಜನ ಎಂಬುದು ದುರ್ಬಲಗೊಳ್ಳುತ್ತದೆ, ವಿಚ್ಛಿದ್ರಕಾರೀ ಶಕ್ತಿಗಳಿಗೆ ಮತ್ತು ಸಾಮ್ರಾಜ್ಯಶಾಹೀ ಕುತಂತ್ರಗಳಿಗೆ ಅವಕಾಶವಾಗುತ್ತದೆ.

ಕೇಂದ್ರ – ರಾಜ್ಯ ಸಂಬಂಧಗಳ ಪ್ರಶ್ನೆ ದೇಶದ ಐಕ್ಯತೆಯ ಸಮಸ್ಯೆ ಮಾತ್ರವೇ ಅಲ್ಲ, ಇದು ಸರ್ವಾಧಿಕಾರ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ನಡುವಿನ ಒಂದು ಹೋರಾಟ ಕೂಡಾ. ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳಿರುವಾಗ ಈ ಪ್ರಶ್ನೆ ಇನ್ನಷ್ಟು ತುರ್ತಿನದಾಗುತ್ತದೆ. ಆದರೆ ಪರಿಹಾರ ಅಷ್ಟು ಸುಲಭವೇನಲ್ಲ. ಜನಸಮೂಹಗಳಿಂದ ತೀವ್ರ ಒತ್ತಡವಿಲ್ಲದೆ ಇದು ಸಾಧ್ಯವಾಗಲಾರದು. ಪ್ರಜಾಪ್ರಭುತ್ವವಾದಿಗಳ ಒತ್ತಾಯದಿಂದಾಗಿ ನೇಮಿಸಲ್ಪಟ್ಟ ಸರ್ಕಾರಿಯಾ ಆಯೋಗ ಇನ್ನೂ ವರದಿ ನೀಡದಿರುವುದೇ ಇದಕ್ಕೊಂದು ಉದಾಹರಣೆ. ಕೇಂದ್ರದ ಆಳುವ ಪಕ್ಷ ತನ್ನ ಸರ್ವಾಧಿಕಾರೀ ಶಕ್ತಿ ಮೂಲಗಳನ್ನು ಕಡಿತಗೊಳಿಸುವುದು ಈ ಸಮಸ್ಯೆಯ ಪರಿಹಾರಕ್ಕೆ ಅನಿವಾರ್ಯ. ಆದರೆ ತಾನಾಗಿಯೇ ಕಾಂಗ್ರೆಸ್ (ಐ) ಈ ಅಧಿಕಾರಗಳನ್ನು ಬಿಟ್ಟುಕೊಡುತ್ತದೆಯೇ ?

ಬೇಡಿಕೆಗಳು

ರಾಜ್ಯಗಳ ಅಧಿಕಾರಗಳನ್ನು ಮೊಟಕುಗೊಳಿಸುವ ಅಥವಾ ಅದಕ್ಕೆ ಅವಕಾಶ ನೀಡುವ ಸಂವಿಧಾನದ ಕಲಮುಗಳನ್ನು ಕೈಬಿಡಬೇಕು ಅಥವಾ ಸೂಕ್ತ ತಿದ್ದುಪಡಿ ಮಾಡಬೇಕು, ರಾಜ್ಯಪಾಲ ಹುದ್ದೆಯ ದುರುಪಯೋಗ ನಿಲ್ಲಬೇಕು, ಸಂವಿಧಾನದ ಕಲಮು 265ರ ಪ್ರಕಾರ ಅಂತರ – ರಾಜ್ಯ ಮಂಡಳಿ ರಚಿಸಬೇಕು, ನ್ಯಾಯಾಂಗದಲ್ಲಿ ರಾಜಕೀಯ ಹಸ್ತಕ್ಷೇಪ ತಡೆಯಲು ನ್ಯಾಯಾಂಗ ಮಂಡಳಿಯ ರಚನೆ, ಈ ಮಂಡಳಿಯ ಶಿಫಾರಸಿನ ಪ್ರಕಾರ ಮೂವರು ಸದಸ್ಯರ ಚುನಾವಣಾ ಆಯೋಗದ ರಚನೆ, ರೇಡಿಯೋ ಮತ್ತು ದೂರದರ್ಶನದ ದುರುಪಯೋಗ ತಡೆಯಲು ಕೇಂದ್ರ ಹಾಗೂ ರಾಜ್ಯಗಳಲ್ಲಿ ಸಂಪರ್ಕ ಮಂಡಳಿಗಳ ರಚನೆ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಮತ್ತು ಯೋಜನಾ ಆಯೋಗವನ್ನು ಹೆಚ್ಚು ಪ್ರಾತಿನಿಧಿಕಗೊಳಿಸಲು ಅವುಗಳ ಪುನರ್ರಚನೆ ಮತ್ತು ಇನ್ನೂ ಹಲವಾರು ಆರ್ಥಿಕ ಮತ್ತು ಹಣಕಾಸಿನ ಬೇಡಿಕೆಗಳನ್ನು ಶ್ರೀನಗರ ಸಮ್ಮೇಳನ ಮುಂದಿಟ್ಟಿತ್ತು. ಈ ಬೇಡಿಕೆಗಳ ಆಧಾರದ ಮೇಲೆ ಹೋರಾಟ ಮುಂದುವರಿಯಬೇಕಾಗಿದೆ.

ಇಲ್ಲಿ ಇನ್ನೊಂದು ಗಮನಿಸಬೇಕಾದ ಸಂಗತಿಯಿದೆ. ದೇಶದ ರಕ್ಷಣೆಗಾಗಿ ಬಲಾಢ್ಯ ಕೇಂದ್ರಬೇಕೆಂಬ ನೆಪದಲ್ಲಿ ಕಾಂಗ್ರೆಸ್ (ಐ) ಅಧಿಕಾರಗಳನ್ನು ಕೇಂದ್ರೀಕರಿಸಿಕೊಂಡಂತೆ, ಕೆಲವು ಸಂಕುಚಿತ ದೃಷ್ಟಿಯ ರಾಜಕೀಯ ಶಕ್ತಿಗಳು ಕೇಂದ್ರಕ್ಕೆ ಯಾವ ಅಧಿಕಾರಗಳೂ ಬೇಕಿಲ್ಲವೆಂಬ ಭಾವನೆ ಹೊಂದಿವೆ. ಇವೆರಡೂ ಪ್ರಜಾಪ್ರಭುತ್ವ ವಿರೋಧೀ ನಿಲುವುಗಳು.ದೇಶದ ಐಕ್ಯತೆ ಮತ್ತು ಪ್ರಜಾಪ್ರಭುತ್ವ ರಕ್ಷಣೆಗೆ ಬಲಾಢ್ಯ ಕೇಂದ್ರ ಅಗತ್ಯ. ಆದರೆ ಸ್ವಾಯತ್ತ ಅಧಿಕಾರಗಳನ್ನು ಹೊಂದಿರುವ ಬಲಾಢ್ಯ ರಾಜ್ಯಗಳಿಂದಷ್ಟೇ ಬಲಾಢ್ಯ ಕೇಂದ್ರ ಸಾಧ್ಯ.ಇದು ಸಿ.ಪಿ.ಐ. (ಎಂ)ನ ಹಾಗೂ ಶ್ರೀನಗರ ಸಮ್ಮೇಳನದಲ್ಲಿ ಭಾಗವಹಿಸಿದ್ದ ಇತರ ವಿರೋಧ ಪಕ್ಷಗಳ ಪ್ರಜಾಸತ್ತಾತ್ಮಕ ನಿಲುವು.

– ಕೆ. ವಿ.

> ಕೇಂದ್ರ–ರಾಜ್ಯ ಸಂಬಂಧಗಳ ಪ್ರಶ್ನೆಯ ಸರಿಯಾದ ಪರಿಹಾರ ಮಾತ್ರದಿಂದಲೇ ಭಾರತೀಯ ಜನತೆಯ ಸಮಸ್ಯೆಗಳು ಪರಿಹಾರವಾಗುತ್ತವೆಯೆಂದೆನೂ ಸಿ.ಪಿ.ಐ. (ಎಂ) ಭಾವಿಸುವುದಿಲ್ಲ. ಅದಕ್ಕೆ ಸಮಾಜದ ಮೂಲ ಭೂತ ವ್ಯವಸ್ಥೆಯೇ ಬದಲಾಗಬೇಕು. ಆದರೆ ರಾಜ್ಯಗಳಿಗೆ ಸ್ವಾಯತ್ತ ಅಧಿಕಾರಗಳ ನೀಡಿಕೆ ಮತ್ತು ಕೇಂದ್ರದ ಹಾಗೂ ಆಳುವ ಪಕ್ಷದ ಸರ್ವಾಧಿಕಾರೀ ಬಿಗಿ ಹಿಡಿತದ ಸಡಿಲಿಕೆಯಿಂದ ರಾಜ್ಯಗಳು ಮತ್ತು ಕೇಂದ್ರದ ಸರ್ಕಾರಗಳ ಮೇಲೆ ಪಟ್ಟಭದ್ರ ಹಿತಾಸಕ್ತಿಗಳ ಬಿಗಿ ಹಿಡಿತದ ವಿರುದ್ಧ ಹೋರಾಡಲು ಜನತೆಗೆ ನೆರವು ದೊರೆಯುತ್ತದೆ.
>
> —ಶ್ರೀನಗರ ಸಮ್ಮೇಳನದಲ್ಲಿ ಮಂಡಿಸಿದ ಸಿ.ಪಿ.ಐ. (ಎಂ) ನ ಪ್ರಸ್ತಾಪಗಳಿಂದ.

ಬೋಫೋರ್ಸ್ ಮೊದಲಾದ ಭ್ರಷ್ಟಾಚಾರ ಕಪ್ಪುಹಣದ ಹಾವಳಿ

ಸರಕಾರದ ಉನ್ನತ ವಲಯದಲ್ಲಿ ತುಂಬಿ ತುಳುಕುತ್ತಿರುವ ಭ್ರಷ್ಟಾಚಾರ, ದೇಶವನ್ನೆಲ್ಲ ವ್ಯಾಪಿಸಿರುವ ತೆರಿಗೆಗಳ್ಳತನ ಮತ್ತು ಸಮಾನಾಂತರ ಅರ್ಥ ವ್ಯವಸ್ಥೆಯಾಗಿ ಮುನ್ನಡೆಯುತ್ತಿರುವ ಕಪ್ಪುಹಣದ ಹಾವಳಿಗಳ ವಿರುದ್ಧ ಹೋರಾಟ ನಡೆಸಲು ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ]ದ ಕೇಂದ್ರ ಸಮಿತಿ ಈಗಾಗಲೇ ಕರೆ ನೀಡಿದೆ.

ಕಳೆದ ಏಪ್ರಿಲ್ ತಿಂಗಳಲ್ಲಿ ಬೆಳಕಿಗೆ ಬಂದ ಫೇರ್‌ಫಾಕ್ಸ್ ಹಗರಣ ಅದರ ಬೆನ್ನಹಿಂದೇ ಜರ್ಮನ್ ಸಬ್‌ಮೇರಿನ್‌ಗಳ ಖರೀದಿಯಲ್ಲಿ ಮುವತ್ತು ಕೋಟಿ ರೂಪಾಯಿಗಳಷ್ಟು ಲಂಚ ನೀಡಲಾದ ಪ್ರಕರಣ ಮತ್ತುಸ್ವೀಡನಿನ ನೋಬೆಲ್ ಕಂಪೆನಿಯ ಉಪ ಸಂಸ್ಥೆಯಾದ ಬೋಫೋರ್ಸ್‌ನಿಂದ ಖರೀದಿಸಲಾದ ತುಪಾಕಿಗಳಿಗಾಗಿ ಖಾಸಗೀ ವ್ಯಕ್ತಿಗಳಿಗೆ ನೀಡಲಾದಕಾನೂನುಬಾಹಿರ ಕಮಿಶನ್ ಇವೆಲ್ಲ ದೇಶದ ಆಡಳಿತೆಯ ಉನ್ನತ ವಲಯಗಳಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ಬಯಲು ಮಾಡಿವೆ. ಈ ಎಲ್ಲ ಹಗರಣಗಳಲ್ಲಿ ಕಾಂಗ್ರೆಸ್ [ಐ] ಸರಕಾರ ನಡೆದುಕೊಂಡಿರುವ ರೀತಿ ಲಜ್ಜಾಸ್ಪದವಾದದ್ದು. ಆಡಳಿತ ಪಕ್ಷದ ರಾಜಕಾರಣಿಗಳು, ಅವರ ಸಂಬಂಧಿಕರು, ಸ್ನೇಹಿತರು ಮತ್ತು ಕೇಂದ್ರ ಸರ್ಕಾರದಲ್ಲಿ ಆಯಕಟ್ಟಿನ ಸ್ಥಾನದಲ್ಲಿರುವ ಅಧಿಕಾರಿಗಳು ಸಹ ಲಂಚ ರುಷುವತ್ತುಗಳಿಗಾಗಿ ದೇಶದ ಸುಭದ್ರತೆಗೆ ಗಂಡಾಂತರವುಂಟುಮಾಡುವ ಕೃತ್ಯಗಳಲ್ಲಿ ನಿರತರಾಗಿರುವುದು ಕಂಡು ಬಂದಿದೆ. ಬೋಫೋರ್ಸ್ ಹಗರಣದಲ್ಲಂತೂ ಪ್ರಧಾನಮಂತ್ರಿ ರಾಜೀವ್‌ಗಾಂಧಿಯವರೇ ತನ್ನ ಸ್ನೇಹಿತರನ್ನು ಸಂರಕ್ಷಿಸುವ ಭರದಲ್ಲಿ ಜನತೆಯ ಮುಂದೆ ಸತ್ಯವನ್ನು ಮರೆಮಾಚಿರುವುದು ನಿಚ್ಚಳವಾಗಿ ಗೋಚರಿಸಿದೆ. ತಾನಾಗಲೀ ತನ್ನ ಕುಟುಂಬದವರಾಗಲೀ ಬೋಫೋರ್ಸ್ ಖರೀದಿಯಲ್ಲಿ ಸಂದಾಯವಾದ ಕಮೀಶನನ್ನು ಪಡೆದಿಲ್ಲನೆಂದು ಹೇಳಿಕೆ ಕೊಡುವ ಮೂಲಕ ತನ್ನ ಪಕ್ಷದಲ್ಲಿ ಇತರ ಯಾರಾದರೂ ಅದನ್ನು ಪಡೆದು ಕೊಂಡಿದ್ದರೆ ತಾನು ಅದಕ್ಕೆ ಹೊಣೆಗಾರನಲ್ಲವೆಂಬಂತೆ ಬೇಜವಾಬ್ದಾರಿಯುತ ನೀತಿಯಿಂದ ನಡೆಸಿಕೊಂಡಿರುವುದು ತೀರಾನಾಚುಗೇಡು.

ಗುತ್ತೇದಾರಿ ಬಂಡವಾಳಗಾರ ಸಂಸ್ಥೆಗಳು ಅಕ್ರಮವಾಗಿ ಗಳಿಸಿದ ಆದಾಯದ ಮೇಲೆ ತೆರಿಗೆ ನೀಡದೆ ಅಪಾರ ಮೊತ್ತದ ಕಾಳಧನವನ್ನು ಸಂಗ್ರಹಿಸಿದ್ದು ಇಂತಹಕಪ್ಪುಹಣದ ಪ್ರಮಾಣ ರೂ. 37,000 ಕೋಟಿಯಿಂದ ಸುಮಾರು ರೂ. 80,000 ಕೋಟಿಯವರೆಗಿರಬಹುದೆಂದು ಅಂದಾಜು ಮಾಡಲಾಗಿದೆ.ಈ ಕಪ್ಪುಹಣವನ್ನು ಬಯಲಿಗೆಳೆಯಲು ಸರಕಾರದ ಬಳಿ ಯಾವುದೇ ಅಸ್ತ್ರ ಇಲ್ಲ. ವರ್ಷ ವರ್ಷ ಕೇಂದ್ರ ಸರ್ಕಾರವು ಕಪ್ಪು ಹಣದ ಮಾಲೀಕರಿಗೆ ರಿಯಾಯತಿಗಳನ್ನು ನೀಡಿ ಬೇರರ್ ಬಾಂಡ್ ಮತ್ತಿತರ ಕ್ರಮಗಳ ಮೂಲಕ ಅದನ್ನು ಹೊರಗೆಳೆಯಲು ಬೂಟಾಟಿಕೆಯ ಪ್ರಯತ್ನ ನಡೆಸುತ್ತಿದೆ. ಕಾಳಧನದ ಮಾಲಕರ ಮೇಲೆ ಉಗ್ರಕ್ರಮ ಕೈಗೊಳ್ಳದೆ ಕೇವಲ ಪುಸಲಾಯಿಸುವಿಕೆಯ ಮೂಲಕ ಅಂತಹ ಹಣವನ್ನು ಹೊರಗೆಳೆಯುವುದು ಎಂದೂ ಫಲಕಾರಿಯಾಗಲಾರದು. ಈ ಅಪಾರ ಮೊತ್ತದ ಕಾಳಧನದಲ್ಲಿ ಕಡಿಮೆ ಪಕ್ಷ ರೂ. 10.000 ಕೋಟಿಯನ್ನಾದರೂ ಉಗ್ರಕ್ರಮಗಳ ಮುಖಾಂತರ ಹೊರಗೆಳೆದರೆ ಅದರಿಂದ

(6 ನೇ ಪುಟ ನೋಡಿ)

> ಒಂದು ಕಡೆ ದೇಶದ ರಕ್ಷಣೆಗೆಂದು ಮೀಸಲಿರಿಸಿದ ಬಡ ಭಾರತೀಯರ ದುಡಿಮೆಯ ಹಣ ಲಂಚವಾಗಿ ದೊಡ್ಡವರ ಸ್ವಿಸ್ ಬ್ಯಾಂಕ್ ಖಾತೆಗಳಲ್ಲಿ ಶೇಖರವಾಗುತ್ತಿದೆ. ಮತ್ತೊಂದು ಕಡೆ ಭಾರತದ ಅಭಿವೃದ್ಧಿ ಕಾರ್ಯಗಳು ಹಣವಿಲ್ಲದೆ ಗೋತ ಹೊಡೆದರೆ ತೆರಿಗೆ ವಂಚಿಸಿ ಕೂಡಿಸಿದ ಕಳ್ಳ ಹಣವೂ ಭಾರತದ ಗಡಿ ದಾಟಿ ವಿದೇಶಿ ಬ್ಯಾಂಕ್‌ಗಳಲ್ಲಿ ಸೇರತೊಡಗಿದೆ. ಈ ಲಂಚ, ಕಳ್ಳ ಹಣದ ವಿರುದ್ಧ ಹೊಡೆದಾಡದೆ ಭಾರತದ ಅಭಿವೃದ್ಧಿ ಸಾಧ್ಯವೇ?

ಬೆಂಗಳೂರಿನಲ್ಲಿ ಎಸ್.ಎಫ್.ಐ. ಕೇಂದ್ರ ಕಾರ್ಯಕಾರಿ ಸಭೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.)ನ ಕರ್ನಾಟಕ ರಾಜ್ಯ ಸಮಿತಿಯ ಸಭೆಯು ಇದೇ ಅಕ್ಟೋಬರ್ 4 ಮತ್ತು 5 ರಂದು ಬೆಂಗಳೂರಿನಲ್ಲಿ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಕಾ|| ಎಸ್.ವೈ ಗುರುಶಾಂತ್ ವಹಿಸಿದ್ದರು. ದಿನಾಂಕ 3ರಂದು ಜರುಗಿದ ರಾಜ್ಯ ಕಾರ್ಯದರ್ಶಿ ಮಂಡಳಿ ಸಭೆಗೆ ಅಖಿಲ ಭಾರತ ಅಧ್ಯಕ್ಷರಾದ ಕಾ|| ಎ. ವಿಜಯರಾಘವನ್ ಅವರು ಹಾಜರಾಗಿದ್ದರು.

ಎಸ್. ಎಫ್. ಐ. ಸ್ಥಾಪನೆಯಾದ ನಂತರ ರಾಜ್ಯದಲ್ಲಿ ಪ್ರಥಮ ಬಾರಿಗೆ ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆಯೊಂದನ್ನು ಬೆಂಗಳೂರಿನಲ್ಲಿ ಡಿಸೆಂಬರ್ ತಿಂಗಳ ಮೊದಲನೆಯ ವಾರದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಇದೇ ಸಂದರ್ಭದಲ್ಲಿ ರಾಜ್ಯ ಮಟ್ಟದ ವಿಚಾರ ಗೋಷ್ಠಿಯೊಂದನ್ನು ಏರ್ಪಡಿಸಲಾಗುವುದು. ಎಸ್.ಎಫ್.ಐ.ನ ಪ್ರಾಥಮಿಕ ಶಾಖೆಗಳಿಂದ ರಾಜ್ಯ ಸಮಿತಿಯವರೆಗೆ ಎಲ್ಲಾ ಸಮಿತಿಗಳ ಸದಸ್ಯರು ಕನಿಷ್ಠ ತಲಾ ರೂ.1/- ಸಿ.ಇ.ಸಿ. ಸಭೆಯ ನಿಧಿಗೆ ಪಾವತಿ ಮಾಡಲು ಕರೆ ನೀಡಲಾಗಿದೆ. ಸಭೆಯನ್ನು ಯಶಸ್ವಿಗೊಳಿಸಲು ಇತರ ಸೌಹಾರ್ದ ಸಂಘಟನೆಗಳು ಮತ್ತು ಹಿತೈಷಿಗಳ ಸಹಕಾರವನ್ನು ಸಹ ಕೋರಲಾಗಿದೆ.

5ನೇ ರಾಜ್ಯ ಸಮ್ಮೇಳನ

ಎಸ್.ಎಫ್.ಐ.ನ ಐದನೆಯ ರಾಜ್ಯ ಸಮ್ಮೇಳನವನ್ನು ಜನವರಿ ಮೊದಲನೆಯ ವಾರದಲ್ಲಿ ನಡೆಸಲು ತೀರ್ಮಾನಿಸಲಾಗಿದ್ದು ಸ್ಥಳವನ್ನು ತಿಳಿಸಲಾಗುವುದು. ಇದಕ್ಕೆ ಪೂರ್ವಭಾವಿಯಾಗಿ ಎಲ್ಲಾ ಜಿಲ್ಲಾ ಸಮ್ಮೇಳನಗಳನ್ನು ಡಿಸೆಂಬರ್ 20 ರೊಳಗೆ ನಡೆಸಿ 125 ಸದಸ್ಯರಿಗೆ ಒಬ್ಬರಂತೆ ಪ್ರತಿನಿಧಿಗಳನ್ನು ರಾಜ್ಯ ಸಮ್ಮೇಳನಕ್ಕೆ ಆಯ್ಕೆ ಮಾಡಬೇಕು. ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ಸ್ಮರಣ ಸಂಚಿಕೆಯನ್ನು ಹೊರ ತರಲಾಗುವುದು.

ವಿದ್ಯಾರ್ಥಿ ಚಳುವಳಿಯ ಚರಿತ್ರೆ

ಭಾರತದ ವಿದ್ಯಾರ್ಥಿ ಚಳುವಳಿಯ ಕುರಿತು ಎಸ್.ಎಫ್.ಐ. ಸ್ಥಾಪನಾ ದಿನೋತ್ಸವದ ಸಂದರ್ಭದಲ್ಲಿ ದಾಖಲೆಯೊಂದನ್ನು ಬಿಡುಗಡೆ ಮಾಡಲು ಕೇಂದ್ರ ಸಮಿತಿ ನಿರ್ಧರಿಸಿದೆ. ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳ ಚಳುವಳಿಯ ಬಗ್ಗೆ ಮಾಹಿತಿಗಳನ್ನು ಹಿರಿಯ ಸಂಗಾತಿಗಳಿಂದ ಮತ್ತು ದಾಖಲೆಗಳಿಂದ ಸಂಗ್ರಹಿಸುವುದು.

ಭುವನೇಶ್ವರ್‌ನಲ್ಲಿ ನಡೆದ ಅಖಿಲ ಭಾರತ ವಿ.ವಿ. ಸಮಾವೇಶದ ತೀರ್ಮಾನಗಳನ್ನು ಜಾರಿಗೊಳಿಸಲು, ಅಕ್ಟೋಬರ್ 2ರಿಂದ 24 ರವರೆವಿಗೆ ರಾಜ್ಯದಲ್ಲಿ ಸಂಚರಿಸುವ ಭಾರತ ಜನ ವಿಜ್ಞಾನ ಜಾಥ ಬೆಂಬಲಿಸಲು ಹಾಗೂ ಸಿ.ಪಿ.ಐ.(ಎಂ) ಸಂಘಟಿಸುವ ರಾಜಕೀಯ ಸಮಾವೇಶ ಯಶಸ್ವಿಗೊಳಿಸಲು ಶ್ರಮಿಸುವಂತೆ ರಾಜ್ಯ ಸಮಿತಿ ಕರೆ ನೀಡಿದೆ. ರಾಜಸ್ತಾನದ 'ಸತಿ' ಪ್ರಕರಣದಲ್ಲಿ ಸರ್ಕಾರದ ವೈಪಲ್ಯವನ್ನು ಖಂಡಿಸುವ ನಿರ್ಣಯ ಅಂಗೀಕರಿಸಿದೆ. ವಿ.ವಿ. ಹಾಗೂ ಕಾಲೇಜು ಅಧ್ಯಾಪಕರ ಸಂಘದ ನಾಯಕರು ಕೇಂದ್ರ ಸರಕಾರನೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಅಧ್ಯಾಪಕ ವಿರೋಧಿ ಎಂದು ವಿಶ್ಲೇಷಿಸಿದೆ.

ರಾಮದುರ್ಗ : ರೈತರ ಪಿಕೆಟಿಂಗ್

ಅಖಿಲ ಭಾರತ ಕಿಸಾನ್ ಸಭಾ ಕರೆಯ ಮೇರೆಗೆ ದೇಶದಾದ್ಯಂತ ಹನ್ನೆರಡು ಬೇಡಿಕೆಗಳನ್ನು ಮುಂದಿಟ್ಟು ರೈತಾಪಿ ಜನತೆ ನಡೆಸಿದ ಧೀರ ಹೋರಾಟದ ಭಾಗವಾಗಿ ರಾಮದುರ್ಗದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಮೆರವಣಿಗೆ ಸಭೆ ನಡೆಯಿತು. ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು. ರಾಮದುರ್ಗದಲ್ಲಿ ಮತೀಯ ಶಕ್ತಿಗಳು ಗಣೇಶ ಉತ್ಸವದ ಸಂದರ್ಭದಲ್ಲಿ ಸಾಮಾನ್ಯರ ಜೀವನವನ್ನು ಅಸ್ತವ್ಯಸ್ತಗೊಳಿಸಿದರಿಂದ ನಗರದಲ್ಲಿ 144ನೇ ಸೆಕ್ಷನ್ ಜಾರಿಯಲ್ಲಿದ್ದ ಪ್ರಯುಕ್ತ ಪಿಕೆಟಿಂಗ್ ಕಾರ್ಯಕ್ರಮ ನಡೆಯಲಿಲ್ಲ.

ಮೆರವಣಿಗೆಯ ನೇತೃತ್ವ ವಹಿಸಿದ್ದ ವಿ.ಪಿ. ಕುಲಕರ್ಣಿ ಅವರು ನಂತರ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಹರಪ್ಪನಹಳ್ಳಿ : ಎಸ್. ಎಫ್. ಐ. ಸುದ್ದಿಗಳು

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.), ಬಳ್ಳಾರಿ ಜಿಲ್ಲೆಯ ಹರಪ್ಪನ ಹಳ್ಳಿ ಘಟಕ ಸೆಪ್ಟೆಂಬರ್ ತಿಂಗಳಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಗೊಳಿಸಿದೆ.

ಸೆ. 13 ರಂದು ಸರ್ಕಾರಿ ಪದವೀ ಪೂರ್ವ ಕಾಲೇಜು- ಹೈಸ್ಕೂಲ್ ಹಾಗೂ ಟಿ.ಎಂ.ಎ.ಎಲ್. ಹಾಸ್ಟಲ್ ಮತ್ತು ಬಿ.ಸಿ.ಎಂ. ಹಾಸ್ಟಲ್‌ನಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿ ನಡುವಿನ ಸಂಬಂಧ ಕುರಿತು ಭಾಷಣ ಮತ್ತು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. 200 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸೆ. 20 ರಂದು ಕಬ್ಬಡಿ ಸ್ಪರ್ಧೆ ನಡೆದು 100 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕ್ರೀಡೆಯ ಅವಶ್ಯಕತೆ ಮತ್ತು ಸೌಲಭ್ಯದ ಬಗ್ಗೆ ಎಸ್.ಎಫ್.ಐ. ಮುಖಂಡರು ಮಾತನಾಡಿದರು. ಸೆ. 20ರಂದು ಟಿ.ಎಂ.ಎ.ಇ. ಮತ್ತು ಬಿ.ಸಿ.ಎಂ. ಹಾಸ್ಟಲ್ ಸಮಿತಿ ಸರ್ವ ಸದಸ್ಯರು ಸಭೆ ಸೇರಿ ಕಾ. ಎ.ಹನುಮಂತಪ್ಪ (ಅಧ್ಯಕ್ಷ)ಎಂ. ಮಂಜುನಾಥ (ಕಾರ್ಯದರ್ಶಿ) ಜಿ. ಕೃಷ್ಣ, ಎಸ್.ಶಿವರಾಂ (ಉಪಾಧ್ಯಕ್ಷರು) ಕೆ.ಎಂ. ರಾಜೇಶ್, ಬಿ.ಜಿ. ತಿರುಪತಿನಾಯ್ಕ (ಸಹಕಾರ್ಯದರ್ಶಿಗಳು) ರವರನ್ನೊಳಗೊಂಡ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಬಿ.ಸಿ.ಎಂ. ಹಾಸ್ಟಲ್ ಸಮಿತಿ ಕಾ|| ಎನ್.ಚನ್ನಸ್ವಾಮಿ (ಅಧ್ಯಕ್ಷ) ಲೋಕಪ್ಪ (ಕಾರ್ಯದರ್ಶಿ) ಟಿ.ರಾಕರ್ಯಾನಾಯ್ಕ, ಕೆ.ಬಿ. ಉಜ್ಜಯನಿಮಠ (ಉಪಾಧ್ಯಕ್ಷರು) ಷರೀಪ್, ಟಿ. ಮಂಜುನಾಥ, ಸಹ ಕಾರ್ಯದರ್ಶಿ ಹಾಗೂ 8 ಮಂದಿ ಸದಸ್ಯರ ಸಮಿತಿ ಆಯ್ಕೆ ಮಾಡಲಾಗಿದೆ.

ಎಸ್.ಯು.ಜೆ.ಎಂ. ಕಾಲೇಜು ಸಮಿತಿ : ನಿರಂಜನ (ಅಧ್ಯಕ್ಷ) ನಿಜಗುಣ ಶಿವಯೋಗಿ (ಕಾರ್ಯದರ್ಶಿ) ಡಿ. ಮಂಜುನಾಥ, ಹೆಚ್. ಬಸವರಾಜ (ಉಪಾಧ್ಯಕ್ಷರು) ಕುಮಾರಸ್ವಾಮಿ ಕೆ.ಹನುಮಂತಪ್ಪ ಸಹ ಕಾರ್ಯದರ್ಶಿ ಹಾಗೂ 7 ಜನರ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಅಧ್ಯಯನ ಶಿಬಿರ : ಸೆ. 27 ರಂದು 25 ಮಂದಿ ಕಾರ್ಯಕರ್ತರಿಗೆ ತರಬೇತಿ ಶಿಬಿರ ಏರ್ಪಡಿಸಲಾಗಿತ್ತು. ಪ್ರೊ||ಎಸ್.ಎಸ್.ಹಿರೇಮಠ್, ಕೆ.ಎಸ್. ಹಡಗಲಿಮಠ್, ಎಸ್.ಬಾಲಪ್ಪ, ಶಿಕ್ಷಣ ಪದ್ಧತಿ, ರಾಷ್ಟ್ರೀಯ ಪರಿಸ್ಥಿತಿ, ಸಂಘಟನಾ ಕರ್ತವ್ಯ ಕುರಿತು ಉಪನ್ಯಾಸ ನೀಡಿದರು. ಮೇಲಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಕಾ. ಚನ್ನಬಸಪ್ಪ, ಬಾಲಪ್ಪ, ಮಂಜಪ್ಪ, ಷಡಕಪ್ಪ, ಗೌಸ್ ಭಾಷ, ಮಹಮ್ಮದ್ ಅಲಿ, ಮುಂತಾದರು ಮುಖಂಡತ್ವ ನೀಡಿದ್ದರು.

ಭ್ರಷ್ಟಾಚಾರ, ಕಪ್ಪು ಹಣದ ಹಾವಳಿ

(5ನೇ ಪುಟದಿಂದ)

ಲಕ್ಷಾಂತರ ಜನರಿಗೆ ಉದ್ಯೋಗ, ವಸತಿ ಮತ್ತು ವಿದ್ಯೆ ಮುಂತಾದ ಸೌಕರ್ಯಗಳನ್ನು ನೀಡಬಹುದು, ಮಾರುಕಟ್ಟೆಯಲ್ಲಿ ಚಲಾವಣೆಯಲ್ಲಿರುವ ಕಪ್ಪು ಹಣದ ಹೊಳೆಗೆ ತಡೆ ಹಾಕಿದರೆ ಹಣದುಬ್ಬರ ನಿಯಂತ್ರಣಕ್ಕೆ ಬಂದು ಬೆಲೆಯೇರಿಕೆಯನ್ನು ತಡೆಗಟ್ಟಬಹುದು ಕೇಂದ್ರ ಸರ್ಕಾರಕ್ಕೆ ಇಂತಹ ಕ್ರಮ ಕೈಗೊಳ್ಳುವಷ್ಟು ಪ್ರಾಮಾಣಿಕತೆ ಇಲ್ಲ.

ತೆರಿಗೆ ಗಳ್ಳತನದ ಮೂಲಕ ಕೂಡಿಹಾಕಿದ್ದ ಅಪಾರ ಮೊತ್ತದ ಹಣವನ್ನು ಗುತ್ತೇದಾರಿ ಬಂಡವಾಳಗಾರರು ಸ್ವಿಸ್ ಬ್ಯಾಂಕುಗಳ ಗುಪ್ತ ಖಾತೆಯಲ್ಲಿ ಬಚ್ಚಿಡುತ್ತಿದ್ದಾರೆ ವಿದೇಶೀ ವಿನಿಮಯ ಕಾಯಿದೆಯನ್ನು ಉಲ್ಲಂಘಿಸಿ ಈ ರೀತಿ ಬಚ್ಚಿಡಲಾಗಿರುವ ಮೊತ್ತ ಸ್ವಿಟ್ಜರ್ ಲ್ಯಾಂಡ್ ಒಂದರಲ್ಲೇ ಸುಮಾರು 13 ಸಾವಿರ ಕೋಟಿ ರೂ.ಗಳಷ್ಟಿದೆ. ದೇಶದಲ್ಲಿ ಬಂಡವಾಳದ ಕೊರತೆ ತೀವ್ರವಾಗಿರುವಾಗ ಇಷ್ಟೊಂದು ಪ್ರಮಾಣದ ಹಣವನ್ನು ಕಳ್ಳತನದಿಂದ ಹೊರಗೆ ಸಾಗಿಸಿ ವಿದೇಶೀ ಬ್ಯಾಂಕುಗಳಲ್ಲಿ ಅಡಗಿಸಿಟ್ಟಿರುವ ದೇಶ ದ್ರೋಹಿಗಳ ವಿರುದ್ಧ ಕೇಂದ್ರ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ? ವಿದೇಶಿ ವಿನಿಮಯ ಕಾಯಿದೆಯನ್ನು ಉಲ್ಲಂಘಿಸಿದರ ಬಗ್ಗೆ ಪತ್ತೆ ಹಚ್ಚಲು ಅಮೇರಿಕದ ಗುಪ್ತಚಾರ ಸಂಸ್ಥೆ 'ಫೇರ್ ಫ್ಯಾಕ್ಸ್'ನ್ನು ಕೇಂದ್ರ ಸರ್ಕಾರವೇ ನೇಮಿಸಿ ಕೊಂಡಿದ್ದರೂ ಪ್ರಧಾನಮಂತ್ರಿ ಅದೆಲ್ಲ ತನಗೆ ತಿಳಿದೇ ಇಲ್ಲವೆಂಬಂತೆ ನಟಿಸಿ ವಿ.ಪಿ. ಸಿಂಗ್ ಮತ್ತು ಕೆಲವು ಅಧಿಕಾರಿಗಳ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡಿದರು. ಬೋಫೋರ್ಸ್ ಹಗರಣದಲ್ಲಿ ರೂ. 120 ಕೋಟಿಯಷ್ಟು ದಳ್ಳಾಳಿ ಕಮಿಷನ್ ಪಡೆದರೆಂದು ಆಪಾದನೆಗೊಳಗಾಗಿರುವ ವಿನ್ ಛಡ್ಡ ಮತ್ತು ಅವರ ಮಗ ಅಮೇರಿಕಾದ ಪೌರತ್ವಗಳಿಸಿ ಸುರಕ್ಷಿತವಾಗಿದ್ದಾರೆ. ವಿನ್‌ಛಡ್ಡಾನನ್ನು ಭಾರತಕ್ಕೆ ಕಳುಹಿಸಿಕೊಡಬೇಕೆಂಬ ಭಾರತ ಸರಕಾರದ ಮನವಿಗೆ ಅಮೇರಿಕಾ ತಿರಸ್ಕಾರ ತೋರಿಸಿದೆ. ಜರ್ಮನ್ ಜಲಾಂತರ್ಗಾಮಿಗಳ ಖರೀದಿಯಲ್ಲಿ ನಡೆದ ಭ್ರಷ್ಟಾಚಾರದ ಬಗ್ಗೆ. ವಿ.ಪಿ.ಸಿಂಗ್ ರಕ್ಷಣಾ ಸಚಿವರಾಗಿದ್ದಾಗ ವಿಚಾರಣೆ ನಡೆಸಲು ಮುಂದಾದರೂ ಸಿಂಗ್ ಅವರನ್ನು ಸಚಿವ ಸಂಪುಟದಿಂದಕಿತ್ತೊಗೆದು ವಿಚಾರಣೆ ಮುಂದುವರಿಯದಂತೆ ನೋಡಿಕೊಳ್ಳಲಾಗಿದೆ. ಈ ಭ್ರಷ್ಟಾಚಾರದ ಉದಾಹರಣೆಗಳು ಇನ್ನೂ ಬೆಳಕಿಗೆ ಬರದೇ ಇರುವ ಬೃಹತ್ ಕರ್ಮಕಾಂಡಗಳ ಒಂದು ಪುಟ್ಟ ತುಣುಕು ಅಷ್ಟೆ. ಇವು ಕುಸಿಯುತ್ತಿರುವ ನಮ್ಮ ಅರ್ಥ ವ್ಯವಸ್ಥೆ ಮತ್ತು ಅದರ ಮೇಲೆ ಆಧರಿಸಿ ನಿಂತಿರುವ ರೋಗಿಷ್ಟ ರಾಜಕಾರಣದ ಮೈಮೇಲೆ ಕಾಣಿಸಿಕೊಂಡಿರುವ ಕೆಲವೇ ಬೊಕ್ಕೆಗಳು. ಭ್ರಷ್ಟಾಚಾರ ಮತ್ತು ಕಾಳಧನ ಹಾಗೂ ತೆರಿಗೆಗಳ್ಳತನದ ವಿರುದ್ಧ ಹೋರಾಟವೆಂದರೆ ನಮ್ಮ ಭ್ರಷ್ಟ ವ್ಯವಸ್ಥೆಯ ವಿರುದ್ಧ ಹೋರಾಟ. ಲಂಚ, ರುಷುವತ್ತು ಮತ್ತು ಅನ್ಯಾಯದ ಗಳಿಕೆಯ ಮೇಲೆ ನಿಂತಿರುವ ಕೆಟ್ಟ ರಾಜಕಾರಣದ ವಿರುದ್ಧ ಹೋರಾಟ. ಜನ ಪರವಾದ ಬದಲೀ ಆರ್ಥಿಕ ಧೋರಣೆಗಳನ್ನು ಅನುಷ್ಠಾನಕ್ಕೆ ತರಲು ಸಮರ್ಥವಾಗುವಂತಹ ಪರ್ಯಾಯ ರಾಜಕೀಯ ಶಕ್ತಿಯ ರಚನೆಗೆ ಬೇಕಾಗಿರುವ ಹೋರಾಟ.

ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ

(4ನೇ ಪುಟದಿಂದ)

ಹಾನಿ ಮಾಡಿಯಾದರೂ ಇತರ ಮತ ಮತ್ತು ಶಾಸ್ತ್ರಗಳ ಅನುಯಾಯಿಗಳನ್ನು 'ವೈರಿ' ಎಂದು ಪರಿಗಣಿಸಿ ವರ್ತಿಸುವವರು ಎಲ್ಲಾ ವೈಜ್ಞಾನಿಕ, ಜಾತ್ಯಾತೀತ, ಪ್ರಗತಿ ಪರ ಬೆಳವಣಿಗೆಗಳನ್ನು ಚಾರಿತ್ರಿಕವಾಗಿ ಅನಿವಾರ್ಯವಾದ ನಿಯಮಬದ್ಧ ಬೆಳವಣಿಗೆಗಳನ್ನು ತಡೆಗಟ್ಟಲು ಪ್ರಯತ್ನಿಸುವವರು.

ಮೂರನೇ ಜಗತ್ತಿನ ರಾಷ್ಟ್ರಗಳನ್ನು ತಮ್ಮ ಆರ್ಥಿಕ ಮತ್ತು ರಾಜಕೀಯ ಹಿಡಿತದಲ್ಲಿಡಲು ಸಾಮ್ರಾಜ್ಯಶಾಹಿಗಳು ಈ ಮೂಲಭೂತವಾದಿಗಳನ್ನು ಇಂದು ಎಲ್ಲೆಡೆ ತಮ್ಮ ವಿಚ್ಛಿದ್ರಕಾರಿ ಏಜೆಂಟರುಗಳಾಗಿ ಉಪಯೋಗಿಸುತ್ತಿವೆ. ನಮ್ಮ ದೇಶದಲ್ಲಿ ಕ್ರಿಶ್ಚಿಯನ್, ಮುಸ್ಲಿಂ, ಸಿಖ್, ಮತ್ತು ಹಿಂದೂ ಮೂಲಭೂತವಾದಿಗಳೆಲ್ಲಾ ಇಂದು ವಿಚ್ಛಿದ್ರಕಾರಿ ಶಕ್ತಿಗಳಾಗಿ ಒಂದಲ್ಲ ಒಂದು ರೀತಿ ದೇಶದ ಐಕ್ಯತೆ, ಸಮಗ್ರತೆಗೆ ಸವಾಲು ಹಾಕುತ್ತಿದ್ದಾರೆ ಸಂದರ್ಭವಾದಿ ರಾಜಕೀಯ ಪಕ್ಷಗಳು ಆಳುವ ಕಾಂಗ್ರೆಸ್(ಐ)ಪಕ್ಷದಿಂದ ಹಿಡಿದು ಎಲ್ಲಾ ಬಂಡವಾಳಶಾಹಿ-ಭೂಮಾಲಕ ಪಕ್ಷಗಳು ಕೋಮುವಾದಿ ಶಕ್ತಿಗಳು, ವಿಚ್ಛಿದ್ರಕಾರಿ, ಪ್ರತ್ಯೇಕವಾದಿ ಶಕ್ತಿಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಕುಮ್ಮಕ್ಕು ಕೊಟ್ಟು ತಮ್ಮ ಬಗಲಿಗೆ ಆದಷ್ಟು ಹೆಚ್ಚು ಮತಗಳನ್ನು ಗಳಿಸಲು ಹವಣಿಸುತ್ತಾ ಬರುತ್ತಿರುವುದೂ ಈ ಮತೀಯ ವಿಚ್ಛಿದ್ರಕಾರಿ ಶಕ್ತಿಗಳ ಬೆಳವಣಿಗೆಗೆ ಒಂದು ಪ್ರಮುಖ ಕಾರಣ.

ದೇಶ ಪ್ರೇಮಿಗಳು, ಎಲ್ಲಾ ಎಡ-ಪ್ರಜಾಪ್ರಭುತ್ವ ಶಕ್ತಿಗಳು, ದೇಶದ ಬೆಳವಣಿಗೆಯನ್ನು ನಿಜವಾಗಿ ಅಪೇಕ್ಷಿಸುವವರು ಎಲ್ಲರೂ ಸೇರಿ ಜಾತೀಯವಾದ, ಮತೀಯವಾದ ಮತ್ತು ವಿಚ್ಛಿದ್ರಕಾರಿ ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ಹೋರಾಟ ಮಾಡಲು, ಆ ಮೂಲಕ ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯಲು ರಾಷ್ಟ್ರವ್ಯಾಪಿ ಹೋರಾಡಲು ಸಿದ್ಧವಾಗಬೇಕು.

ಅಣ್ವಸ್ತ್ರ ಒಪ್ಪಂದ – ಸ್ವಾಗತಾರ್ಹ ಕ್ರಮ

[7ನೇ ಪುಟದಿಂದ]

ಏಕೆಂದರೆ ಈ ಸಮಸ್ಯೆಯನ್ನು ಪರಿಹರಿಸಲು ಸೋವಿಯತ್ ಯೂನಿಯನ್ ಅತ್ಯಂತ ಕಳಕಳಿಯಿಂದ ಪ್ರಯತ್ನಿಸಿತ್ತು.

ಷೆವರ್ನಾಡ್ಜೆ ಅವರು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಒಪ್ಪಂದವೇರ್ಪಡುವುದನ್ನು ಖಾತರಿಪಡಿಸಿಕೊಳ್ಳಬೇಕಾದರೆ ಸೋವಿಯತ್ ಯೂನಿಯನ್‌ಗೆ ಸಹಜವಾಗಿಯೇ ಗಂಭೀರ ಬೆದರಿಕೆಯನ್ನೊಡ್ಡುವ ಬ್ರಿಟಿಷ್ ಮತ್ತು ಫ್ರೆಂಚ್ ನ್ಯೂಕ್ಲಿಯರ್ ಸಂಗ್ರಹಗಳ ಪರಿಗಣನೆಯನ್ನು ಪಕಕ್ಕೆ ಸರಿಸಲು ಸೋವಿಯತ್ ಯೂನಿಯನ್ ಸಿದ್ಧವಿದೆಯೆಂದು ತಿಳಿಸಿದರು. ಅದಕ್ಕಿಂತ ಹೆಚ್ಚಾಗಿ ಅಂತಹ ಕ್ಷಿಪಣಿಗಳನ್ನು ಸೋವಿಯತ್ ಯೂನಿಯನ್‌ನ ಏಷ್ಯಾದ ಪ್ರದೇಶಗಳಿಂದಲೂ ತೆಗೆಯಬೇಕಾಗುತ್ತದೆ. ಆದ್ದರಿಂದ ನ್ಯಾಟೋಗಿಂತಲೂ ಹೆಚ್ಚಿನ ಸಂಖ್ಯೆಯ ಸಮಿತಿ ಕೇಂದ್ರಗಳನ್ನು ಸೋವಿಯತ್ ಯೂನಿಯನ್ ವಾಪಸ್ಸು ತೆಗೆಯಬೇಕಾಗುತ್ತದೆ ಎಂದು ಅವರು ಹೇಳಿದರು. ಇಂತಹ ಅಧಿಕ ಪ್ರಮಾಣದ ರಿಯಾಯಿತಿ ತೋರುವುದು ಸೋವಿಯತ್ ಭದ್ರತಾ ಹಿತಕ್ಕಾಗಲೀ ಅಥವಾ ತನ್ನ ಮಿತ್ರ ದೇಶಗಳಿಗೆ ಅಪಾಯವುಂಟಾಗುವುದಕ್ಕೆ ಅನುಮತಿ ನೀಡುವುದೆಂದು ಅರ್ಥವಲ್ಲ ಎಂಬುದಾಗಿ ಅವರು ಒತ್ತಿ ಹೇಳಿದ್ದಾರೆ.

ಇಡೀ ಸಂದರ್ಭದಲ್ಲಿಟ್ಟು ವಿಷಯವನ್ನು ನೋಡಿದರೆ ಒಪ್ಪಂದದ ಉದ್ದೇಶವು ಶಸ್ತ್ರಾಸ್ತ್ರ ಪೈಪೋಟಿಯನ್ನು ತಗ್ಗಿಸುವಲ್ಲಿ ಒಂದು ಅತಿ ಮುಖ್ಯ ಹೆಜ್ಜೆಯೆಂಬುದರಲ್ಲಿ ಸಂದೇಹವಿಲ್ಲ.

ಸಿಪಿಐ (ಎಂ)..................................ಜಿಲ್ಲಾ ರಾಜಕೀಯ ಸಮಾವೇಶ
ಸ್ಥಳ.......................................ತಾ..............................

ರಾಜೀವಗಾಂಧಿ ಸರ್ಕಾರ ರಾಜೀನಾಮೆ ಕೊಡಬೇಕು; ಮಧ್ಯಂತರ ಚುನಾವಣೆ ನಡೆಯಬೇಕು

ರಾಜೀವ್‌ಗಾಂಧಿ ಸರ್ಕಾರದ ನೀತಿಗಳು ದೇಶದಲ್ಲಿ ಸರ್ವತೋಮುಖವಾದ ಬಿಕ್ಕಟ್ಟನ್ನು ಬೆಳೆಸುತ್ತಿದ್ದು ದೇಶದ ಐಕ್ಯತೆ, ಕೋಮು ಸಾಮರಸ್ಯ ಅಪಾಯದಲ್ಲಿವೆ. ಪಂಜಾಬಿನಲ್ಲಿ ಕೋಮು ಸಾಮರಸ್ಯದ ರಕ್ಷಣೆಗಾಗಿ ತೀವ್ರ ಪ್ರಯತ್ನಗಳು ನಡೆಯಬೇಕಿದ್ದಾಗ, ಬರ್ನಾಲಾ ಸರ್ಕಾರವನ್ನು ವಜಾ ಮಾಡಿ ರಾಜೀವ್ ಸರ್ಕಾರವು ಆ ಪ್ರಯತ್ನಗಳಿಗೆ ಕಲ್ಲು ಹಾಕಿತು. ರಾಜೀವ್ ಗಾಂಧಿಯವರ ಸಂಕುಚಿತ ಚುನಾವಣಾ ದೃಷ್ಟಿಯು ಮತೀಯ ಶಕ್ತಿಗಳ ವಿರುದ್ಧ ಹೋರಾಡಲು ಅಡ್ಡಿಯಾಗಿದೆ. ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವ ವಿಷಯದಲ್ಲಿ ಅವರು ದೃಢವಾದ ನಿಲುವನ್ನು ತೆಗೆದುಕೊಳ್ಳುತ್ತಿಲ್ಲ. ಇವುಗಳಿಂದಾಗಿ ರಾಜೀವಗಾಂಧಿ ಸರ್ಕಾರವು ದೇಶದ ಐಕ್ಯತೆ ಸಮಗ್ರತೆಗಳನ್ನು ಕಾಪಾಡುವುದರಲ್ಲಿ ವಿಫಲವಾಗಿದೆ.

ರಾಜೀವ ಗಾಂಧಿಯವರ ನವ ಆರ್ಥಿಕ ನೀತಿ ಮತ್ತು ಈ ವರ್ಷದ ಅವರ ಬಜೆಟ್, ಬೆಲೆಗಳನ್ನು ನಾಗಾಲೋಟದಿಂದ ಗಗನಕ್ಕೇರಿಸುತ್ತಿದ್ದು ಜನಸಾಮಾನ್ಯರ ಜೀವನವು ಬಹಳ ಕಷ್ಟಮಯವಾಗಿದೆ., ಒಂದು ಲಕ್ಷ ಕಾರ್ಖಾನೆಗಳು ಮುಚ್ಚಿಹೋಗಿದ್ದು, ನಿರುದ್ಯೋಗವು ಬೃಹದಾಕಾರವಾಗಿ ಬೆಳೆಯುತ್ತಿದ್ದು, ದೇಶದ ಆರ್ಥಿಕ ಸ್ವಾವಲಂಬನೆಯ ಬುಡಕ್ಕೆ ಈ ನೀತಿಯು ಕೊಡಲಿ ಪೆಟ್ಟು ಹಾಕುತ್ತಿದೆ. ಇದಕ್ಕೆ ಗಣಕೀಕರಣ, ಹೊಸ ತಾಂತ್ರಿಕತೆಯ ಮೇಲಿನ ಕುರುಡು ವ್ಯಾಮೋಹ. ಬಹುರಾಷ್ಟ್ರೀಯ ಸಂಸ್ಥೆಗಳು ನಮ್ಮ ದೇಶವನ್ನು ಕೊಳ್ಳೆ ಹೊಡೆಯಲು ಮುಕ್ತದ್ವಾರವನ್ನು ತೆರೆದಿರುವುದು, ವಿಶ್ವ ಬ್ಯಾಂಕ್, ಆದೇಶದ ಮೇರೆಗೆ ಅನುಸರಿಸುತ್ತಿರುವ ಆಮದು-ರಫ್ತು ಧೋರಣೆ, ತೆರಿಗೆಯ ನೀತಿ ಮುಖ್ಯ ಕಾರಣಗಳಾಗಿವೆ.

ಒಂದೆಡೆ ಒಂದು ಶತಮಾನದಿಂದ ಕಾಣದ ಬರಗಾಲ, ಇನ್ನೊಂದೆಡೆ ಪೂರ್ವಭಾರತದ ರಾಜ್ಯಗಳಲ್ಲಿ ಪ್ರವಾಹಗಳಿಂದ ಗ್ರಾಮೀಣ ಜನರು ಎದುರಿಸುತ್ತಿರುವ ಸಂಕಷ್ಟಗಳನ್ನು ಪರಿಣಾಮಕಾರಿಯಾಗಿ ಎದುರಿಸಿ ಜನರಿಗೆ ಪರಿಹಾರ ನೀಡಲು ಅವರು ಅನುಸರಿಸುತ್ತಿರುವ ಧೋರಣೆಗಳಿಂದಾಗಿ ರಾಜೀವ ಸರ್ಕಾರಕ್ಕೆ ಸಾಧ್ಯವಿಲ್ಲ. ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳು ಸಿಕ್ಕದೆ, ಕೃಷಿ ಕೂಲಿಕಾರರ ಕೂಲಿ ಹೆಚ್ಚದೆ, ಗ್ರಾಮಾಂತರ ಪ್ರದೇಶದ ಜನರ ಕಷ್ಟ ಕಾರ್ಪಣ್ಯಗಳು ವಿಪರೀತವಾಗಿವೆ. ಅವರು ಕೊಳ್ಳುವ ಶಕ್ತಿಯು ಕಡಿಮೆಯಾಗಿ ತಯಾರಾದ ವಸ್ತುಗಳು ಬಿಕರಿಯಾಗುತ್ತಿಲ್ಲ. ಈ ಸರ್ಕಾರದ ಹೊಸ ಜವಳಿ ನೀತಿಯಿಂದಾಗಿ ಲಕ್ಷಾಂತರ ವಿದ್ಯುಚ್ಚಾಲಿತ ಮಗ್ಗಗಳು ಮುಚ್ಚಿ ಹೋಗಿವೆ. ಹತ್ತಿ ಗಿರಣಿಗಳು ಮುಚ್ಚುತ್ತಿವೆ.

ರಾಜೀವ್ ಸರ್ಕಾರದ ಹೊಸ ಶಿಕ್ಷಣ ನೀತಿಯ ವಿರುದ್ಧ ವಿದ್ಯಾರ್ಥಿಗಳು, ಶಿಕ್ಷಕರು ಹೋರಾಡುತ್ತಿದ್ದಾರೆ. ಉನ್ನತ ಹಂತದಲ್ಲಿ ಭ್ರಷ್ಟಾಚಾರವು ಕಂಡು ಬಂದು ಫೇರ್‌ಫ್ಯಾಕ್ಸ್ ಪ್ರಕರಣ, ಪಶ್ಚಿಮ ಜರ್ಮನಿಯಿಂದ ಜಲಾಂತರ್ಗಾಮಿಗಳನ್ನು ಕೊಳ್ಳುವುದರಲ್ಲಿ, ಬೋಫೋರ್ಸ್ ಹಗರಣಗಳಲ್ಲಿ ರಾಜೀವ ಗಾಂಧಿ ಸರ್ಕಾರವು ಸಿಕ್ಕಿಹಾಕಿಕೊಂಡಿದೆ.

ಎಲ್ಲಾ ರಂಗಗಳಲ್ಲಿಯೂ ಸೋಲುತ್ತಿರುವ, ದೇಶವನ್ನು, ಜನರನ್ನು, ಕಷ್ಟದಲ್ಲಿಸಿಕ್ಕಿಸಿರುವ ರಾಜೀವಗಾಂಧಿ ಸರ್ಕಾರವು ರಾಜೀನಾಮೆ ಕೊಡಬೇಕು. ಕೆಳಕಂಡ ಬದಲೀ ಧೋರಣೆಯ ಬೇಡಿಕೆಗಳಿಗಾಗಿ ಚಳುವಳಿ ನಡೆಸಬೇಕು. ಮಧ್ಯಂತರ ಚುನಾವಣೆ ನಡೆಸಬೇಕೆಂದು ಸಿ.ಪಿ.ಐ.(ಎಂ) ಕರೆ ಕೊಡುತ್ತದೆ.

ಬದಲೀ ಧೋರಣೆಯ ಬೇಡಿಕೆಗಳು

1. ಅಲಿಪ್ತ ವಿದೇಶಾಂಗ ನೀತಿಯನ್ನು ಬಲಪಡಿಸುವುದು.
2. ಜಾತ್ಯಾತೀತತೆಯ ರಕ್ಷಣೆ : ಎಲ್ಲಾ ಸ್ವರೂಪದ ಕೋಮುವಾದದ ವಿರುದ್ಧ ಹಾಗೂ ವಿಭಜನಕಾರಿ ಶಕ್ತಿಗಳ ವಿರುದ್ಧ ಹೋರಾಡುವ ಮೂಲಕ ರಾಷ್ಟ್ರೀಯ ಐಕ್ಯತೆಯ ರಕ್ಷಣೆ.
3. ಉನ್ನತ ಹಂತಗಳಲ್ಲಿ ಭ್ರಷ್ಟಾಚಾರವನ್ನು ಅನೂಲಾಗ್ರವಾಗಿ ಶೋಧಿಸಿ ನಿರ್ಮೂಲ ಮಾಡುವುದು. ವಿದೇಶಗಳಿಗೆ ಕಾನೂನು ಬಾಹಿರವಾಗಿ ಹಣ ಹರಿದುಹೋಗುವುದನ್ನು ನಿಲ್ಲಿಸುವುದು, ಕಪ್ಪು ಹಣವನ್ನು ಹೊರ ತೆಗೆಯುವುದು.
4. ರಾಜ್ಯಗಳ ಸ್ವಾಯತ್ತತೆಯನ್ನು ಬಲಪಡಿಸುವ ಮೂಲಕ ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ಸಮತೋಲನವನ್ನು ತಂದು ದೇಶದ ಐಕ್ಯತೆ

(ಪುರವಣಿ 4ನೇ ಪುಟ ನೋಡಿ)

ರಾಜ್ಯಾದ್ಯಂತ ನಡೆಯುವ ರಾಜಕೀಯ ಸಮಾವೇಶಗಳಿಗಾಗಿ ಮಾದರಿ ಕರಪತ್ರ

ಪಂಜಾಬ್ : ಪ್ರಧಾನ ಅರ್ಚಕರುಗಳೇ ಉಗ್ರಗಾಮಿಗಳಾದರೆ ?

ಹರ್‌ಕಿಷನ್‌ಸಿಂಗ್ ಸುರಜೀತ್

ಕಳೆದ ಸೆಪ್ಟಂಬರ್ 9 ರಂದು ನಾಲ್ಕು ಸಿಖ್ ಧರ್ಮ ಪುರೋಹಿತರು ದೇಶದ ಸಮಗ್ರತೆಗೆ ನೇರ ಬೆದರಿಕೆಯೊಡ್ಡುವ ಆತಂಕಕಾರೀ ಹೇಳಿಕೆ ನೀಡಿ ದೇಶವನ್ನು ತಲ್ಲಣಗೊಳಿಸಿದರು. ಅದರ ಹಿನ್ನೆಲೆಯೇನು? ಈ ಘಟನೆಯಿಂದ ಬರ್ನಾಲ ಅಕಾಲಿ ಬಣ ಬಿ.ಜೆ.ಪಿ. ಮತ್ತು ಕೇಂದ್ರ ಸರ್ಕಾರ ಕಲಿಯಬೇಕಾದುದೇನು? ಒಟ್ಟಾರೆ ಸಮಸ್ಯೆಯ ಪರಿಹಾರ ಹೇಗೆ ಸಾಧ್ಯ? ಕಾ|| ಸುರ್ಜಿತ್ ಇಲ್ಲಿ ವಿಶ್ಲೇಷಣೆ ಮಾಡಿದ್ದಾರೆ.

1986 ಜನವರಿ 26ರಂದು ಸ್ವರ್ಣ ಮಂದಿರದ ಆವರಣದಲ್ಲಿ ನಡೆದ 'ಸರ್ಬತ್‌ಖಾಲ್ಸಾ' ದೊಂದಿಗೆ ಉಗ್ರಗಾಮಿಗಳಿಗೆ ನೇರ ಪ್ರೋತ್ಸಾಹ ನೀಡುವ ಒಂದು ಪ್ರಕ್ರಿಯೆ ಆರಂಭವಾಯಿತು. ಅಧಿಕೃತವಾಗಿ ನೇಮಿಸಲ್ಪಟ್ಟ ನಾಲ್ವರು ಧರ್ಮಗುರುಗಳ ಸೆಪ್ಟಂಬರ್ 9ರ ನೇರ ಹೇಳಿಕೆ ಆ ಪ್ರಕ್ರಿಯೆಯ ಅಂತಿಮ ಫಲವೇ ಆಗಿದೆ.

'ಸರ್ಬತ್ ಖಾಲ್ಸಾ'ದಲ್ಲಿ ಒಂದು "ಪಂಥೀಯ ಸಮಿತಿ" ರಚಿಸಿ ಸಿಖ್ಖರ ಎಲ್ಲಾ ಧಾರ್ಮಿಕ ಚಟುವಟಿಕೆಗಳ ಮೇಲೆ ಹತೋಟಿ ಪಡೆಯುವ ಪ್ರಯತ್ನವನ್ನು ಉಗ್ರಗಾಮಿಗಳು ನಡೆಸಿದರು. ಆದರೆ ಆಗ ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾಯಿತವಾದ 'ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ'ಯು ಮುಖಂಡತ್ವ ಲೋಂಗೊವಾಲ್ ಅಕಾಲಿದಳದ ಕೈಯಲ್ಲಿದ್ದುದರಿಂದ ಅದು ಫಲಿಸಲಿಲ್ಲ. ಆದರೆ ನವೆಂಬರ್ 19, 1986ರಂದು ಆ ಸಮಿತಿಗೆ ಚುನಾವಣೆ ನಡೆಯುವ ಹೊತ್ತಿಗೆ ಅಕಾಲಿದಳ ಅಧಿಕಾರಕ್ಕಾಗಿ ನಡೆದ ಕಾದಾಟದಲ್ಲಿ ಎರಡು ಹೋಳಾಗಿದ್ದು ಬಾದಲ್ ಹಾಗೂ ತೋಹ್ರಾ ನೇತೃತ್ವದ ಅಕಾಲಿದಳ ಉಗ್ರಗಾಮಿಗಳ ಬೆಂಬಲದೊಂದಿಗೆ ಸಮಿತಿಯ ಮೇಲೆ ಹತೋಟಿ ಪಡೆಯಿತು.

ತಲೆ ಬಾಗಿದರು

ಅಂದಿನಿಂದಲೇ ಉಗ್ರಗಾಮಿಗಳು ತಮ್ಮ ಬೆಂಬಲಕ್ಕೆ ಪ್ರತಿಯಾಗಿ ಬೆಲೆ ಕೇಳಲಾರಂಭಿಸಿದರು. ಅವರ ಒತ್ತಡದಿಂದಾಗಿ ಅಕಾಲ್ ತಖ್ತ್‌ನ ಮುಖ್ಯ ಧರ್ಮಗುರುಗಳನ್ನು ವಜಾ ಮಾಡಿ ದರ್ಶನ್‌ಸಿಂಗ್‌ರಾಗಿ ಹಾಗೂ ಪೂರಣ್ ಸಿಂಗ್‌ರನ್ನು ಧರ್ಮ ಗುರುಗಳನ್ನಾಗಿ ನೇಮಿಸಲಾಯಿತು. ಕೊನೆಗೆ ಉಗ್ರಗಾಮಿಗಳ ಬಗ್ಗೆ ಸಹಾನುಭೂತಿ ಹೊಂದಿದ್ದ ದರ್ಶನ್ ಸಿಂಗರವರೊಬ್ಬರನ್ನೇ ತಾತ್ಕಾಲಿಕ ಮುಖ್ಯಸ್ಥರಾಗಿ ಅಕಾಲ್ ತಖ್ತ್‌ಗೆ ನೇಮಿಸಲೂ ಪ್ರಬಂಧಕ ಸಮಿತಿ ಒಪ್ಪಬೇಕಾಯಿತು. ಮೂವರು ಬಹಿರಂಗವಾಗಿಯೇ ಖಾಲೀಸ್ತಾನದ ಬೇಡಿಕೆಯನ್ನು ಬೆಂಬಲಿಸುತ್ತಿದ್ದವರನ್ನು ಮೂರು ಗುರುದ್ವಾರಗಳಿಗೆ ಧರ್ಮಗುರುಗಳನ್ನಾಗಿ ನೇಮಿಸಲಾಯಿತು. ಈ ಮೂವರೂ ಉಗ್ರಗಾಮಿಗಳ ಪರವಾಗಿ ಪ್ರಚಾರ ನಡೆಸಲಾರಂಭಿಸಿದ್ದರು. ಧಾರ್ಮಿಕ ಮೂಲಭೂತವಾದದ ಮರೆಯಲ್ಲಿ ಉಗ್ರಗಾಮಿಗಳು ಎಲ್ಲಾ ಅಧಿಕಾರ ನಡೆಸಲಾರಂಭಿಸಿದರು. ಪ್ರಬಂಧಕ ಸಮಿತಿ ಮೂಲೆಗೆ ತಳಲ್ಪಟ್ಟರು. ಸಂಯುಕ್ತ ಅಕಾಲಿದಳಕ್ಕೂ ಅದೇ ಪರಿಸ್ಥಿತಿ ಬಂತು. ಆದರೆ ಇದುವರೆಗೂ ಉಗ್ರಗಾಮಿಗಳು ಇವೆರಡು ಸಂಘಟನೆಗಳೊಂದಿಗೆ ನೇರ ಹಣಾಹಣಿಗೆ ಇಳಿದಿರಲಿಲ್ಲ. ಆದರೆ ದೇಶದ ಐಕ್ಯತೆ ಮುರಿಯುವಲ್ಲಿ ಮತ್ತು

(ಪುರವಣಿ 4ನೇ ಪುಟ ನೋಡಿ)

ಟಿಬೆಟ್‌ನಲ್ಲಿಂದು ನಡೆಯುತ್ತಿರುವುದೇನು ?

ಟಿಬೆಟ್ ರಾಜಧಾನಿ ಲಾಸಾದಲ್ಲಿ ನಡೆದ ಹಿಂಸಾಕಾಂಡಕ್ಕೆ ದಲೈಲಾಮಾ ಕಾರಣವೆಂದು ಚೈನಾ ಸೋಮವಾರ ವಿಮರ್ಶಿಸಿದೆ. ಈ ಹಿಂಸಾ ಕಾಂಡದಲ್ಲಿ ಕನಿಷ್ಠ 6 ಮಂದಿ ಮೃತ ಪಟ್ಟಿದ್ದಾರೆ. ಅಕ್ಟೋಬರ್ 1 ರಂದು ಈ ಹಿಂಸಾ ಕಾಂಡ ನಡೆಯಿತು.

ಇದಕ್ಕೆ ಒಂದು ವಾರದ ಹಿಂದೆ ದಲೈಲಾಮಾ ಅಮೇರಿಕಾದ ಪಾರ್ಲಿಮೆಂಟಿಗೆ ಸೇರಿದ ಒಂದು ಸಮಿತಿಯಲ್ಲಿ ಮುಂದೆ ಮಾತನಾಡುತ್ತಾ ಟಿಬೆಟಿಗೆ ಸ್ವಾತಂತ್ರ್ಯ ಬೇಕೆಂದು ಕೋರಿದರು. ಇದು ನಡೆದ ಒಂದು ವಾರಕ್ಕೇ ಹಿಂಸಾ ಕೃತ್ಯ ನಡೆದದ್ದು ಅಚ್ಚರಿಯೇನಲ್ಲ ಎಂದು 'ಚೈನಾ ಡೈಲಿ' ಪತ್ರಿಕೆ ತನ್ನ ಸಂಪಾದಕೀಯದಲ್ಲ ತಿಳಿಸಿದೆ. ಅಕ್ಟೋಬರ್ 1 ರಂದು ಈ ವಿಚ್ಛಿದ್ರಕಾರಿಗಳು ಹಿಂಸೆಗೂ ಹತ್ಯೆಗಳಿಗೂ ಮುಂದಾದರು. 'ಟಿಬೆಟಿಗೆ ಸ್ವಾತಂತ್ರ್ಯ' ಎಂಬ ಈ ವಿಚ್ಛಿದ್ರಕಾರಿಗಳ ಘೋಷಣೆಯಿಂದ ಪ್ರಜೆಗಳ ಸೌಕರ್ಯಗಳು ಹೇಗೆ ನಾಶಹೊಂದುತ್ತದೆಂದು ಲಾಸಾ ಘಟನೆ ತಿಳಿಸುತ್ತದೆ ಎಂದು ಈ ಪತ್ರಿಕೆ ಹೇಳಿದೆ. ನೂರಾರು ವರ್ಷಗಳಿಂದ ಟಿಬೆಟ್ ಚೀನಾದ ಅವಿಭಾಜ್ಯ ಅಂಗವಾಗಿದೆ. ಚೈನಾ ಜನತಾ ಪ್ರಜಾಪ್ರಭುತ್ವವಾಗಿ ಮಾರ್ಪಾಡಾದಂದಿನಿಂದಲೂ ಈ ವಾಸ್ತವತೆಯನ್ನು ಮುಂದುವರಿಸಿದೆ. ಚೈನಾದೊಡನೆ ರಾಜತಾಂತ್ರಿಕ ಸಂಬಂಧವಿರುವ ಎಲ್ಲಾ ದೇಶಗಳೂ ಟಿಬೆಟ್ ಚೈನಾದ ಅವಿಭಾಜ್ಯ ಅಂಗವೆಂದು ಒಪ್ಪುತ್ತಾರೆ. ದಲೈಲಾಮಾನ ಆಡಳಿತ ಕಾಲದಲ್ಲಿ ಟಿಬೆಟ್‌ನಲ್ಲಿ ಜನ ಸಾಮಾನ್ಯರು ಪ್ರಾಣಿಗಳಿಗಿಂತ ಕಡೆಯಾಗಿ ಕಾಣುತ್ತಿದ್ದ ವ್ಯವಸ್ಥೆ ಇತ್ತು. ಆ ದಿನಗಳಲ್ಲಿ ಮಾನವ ಹಕ್ಕುಗಳು ಎಂಬ ಮಾತಿಗೆ ಸ್ಥಾನವೇ ಇರಲಿಲ್ಲ ಎಂಬುದನ್ನು ಟಿಬೆಟ್ ಎಂಬ ಬೊಬ್ಬೆ ಎಬ್ಬಿಸುವ ಜನ ಮರೆತುಬಿಡುತ್ತಾರೆ. ಕಳೆದ ಅನೇಕ ವರ್ಷಗಳಿಂದ ಟಿಬೆಟಿಗೆ ಸ್ವಾತಂತ್ರ್ಯ ಬೇಕೆಂದು ದಲೈಲಾಮಾ ಕೋರುತ್ತಿದ್ದಾರೆ. ಆದರೆ ಆತನ ಕೋರಿಕೆ ಈಡೇರಲಿಲ್ಲ, ಮುಂದೆ ಈಡೇರುವುದೂ ಇಲ್ಲ. ಆದರೆ ಇಂತಹ ಹಿಂಸಾಕೃತ್ಯಗಳನ್ನು ಪ್ರಚೋದಿಸುವುದರಿಂದ ಅವರಿಗಿರುವ ಅಲ್ಪ ಸ್ವಲ್ಪ ಗೌರವವನ್ನು ಕಳೆದುಕೊಳ್ಳುತ್ತಾರೆ ಎಂದು 'ಚೈನಾಡೈಲಿ' ಹೇಳಿದೆ.

1949 ರಲ್ಲಿ ಚೈನಾ ಕ್ರಾಂತಿ ಸೇನೆ ಟಿಬೆಟ್‌ನ್ನು ಅರ್ಧ ಪಾಳೇಗಾರೀ ವ್ಯವಸ್ಥೆಯಿಂದ ವಿಮುಕ್ತಿಗೊಳಿಸಿತು. 1959ರಲ್ಲಿ ಕುತಂತ್ರ ನಡೆಸಲು ಪ್ರಯತ್ನಿಸಿ ವಿಫಲರಾದ ದಲೈಲಾಮಾ ಭಾರತಕ್ಕೆ ಓಡಿ ಬಂದರು. ಈ ತಿಂಗಳ ಒಂದರಂದು ಕೆಲವರು ಮಂಜುಬೆಟ್ಟಗಳು, ಸಿಂಹಗಳು ಇರುವ ಪತಾಕೆಗಳನ್ನು ಹಿಡಿದು ಟಿಬೆಟಿಗೆ ಸ್ವಾತಂತ್ರ್ಯ ಬೇಕೆಂದು ಪ್ರದರ್ಶನ ನಡೆಸಿದರು. 1949 ಮುಂಚೆ ಅರ್ಧ ಪಾಳೇಗಾರಿ ವ್ಯವಸ್ಥೆಯಲ್ಲಿ ಅಂದಿನ ಶೋಷಣಾ ವ್ಯವಸ್ಥೆಯ ಕಿರಾತ ಪಡೆಗಳು ಇಂತಹುದೇ ಪತಾಕೆಗಳನ್ನು ಹೊಂದಿದ್ದರು. ಪ್ರದರ್ಶಕರು ಒಂದು ಪೋಲೀಸ್ ಸ್ಟೇಷನ್ ಮೇಲೆ ಕಲ್ಲೆಸೆಯಲು ಪ್ರಾರಂಭಿಸಿ ಅರೆಸ್ಟ್ ಮಾಡಿದ್ದ ಗುಂಪು ನಾಯಕನನ್ನು ಬಿಡಿಸಿಕೊಂಡು ಹೋದರು. ಸ್ಟೇಷನ್‌ದಲ್ಲಿದ್ದ 30 ಮಂದಿ ಪೋಲೀಸರನ್ನು ಸುತ್ತುವರಿದು ಸ್ಟೇಷನ್‌ಗೂ ವಾಹನಗಳಿಗೂ ಬೆಂಕಿಯಿಟ್ಟರು. ಈ ಗುಂಪು ಚಿಕ್ಕ ಮಕ್ಕಳಿಗೆ ಒಬ್ಬೊಬ್ಬರಿಗೂ ಅರ್ಧ ಯೆನ್‌ನಂತೆ ಹಣ ಕೊಟ್ಟು ಪೋಲೀಸರ ಮೇಲೆ ಕಲ್ಲೆಸೆಯುವಂತೆ ಮಾಡಿದರು.

ಅವರೊಡನೆ ಸೇರದ ಟಿಬೆಟನ್ನರ ಗೃಹಗಳನ್ನು ನಾಶ ಮಾಡಿದ್ದಾರೆ. ಇದರಲ್ಲಿ ಇಬ್ಬರು ವಿದೇಶಿಯರು ಕೂಡಾ ಕೈ ಮಿಲಾಯಿಸಿದ್ದಾರೆಂದು 'ಚೈನಾ ಡೈಲಿ' ತಿಳಿಸಿದೆ. ಈ ಸಂದರ್ಭದಲ್ಲಿ ಚೈನಾ ಸರ್ಕಾರ ಇಬ್ಬರುಅಮೇರಿಕನ್ ಪ್ರವಾಸಿಗಳಿಗೆ ದೇಶ ಬಿಟ್ಟು ತಕ್ಷಣ ಹೊರಡುವಂತೆ ಆದೇಶ ನೀಡಿದೆ. ಇವರಿಬ್ಬರೂ ಈ ಕೃತ್ಯವನ್ನು ಪ್ರೋತ್ಸಾಹಿಸಿದ್ದಾರೆಂದು ತಿಳಿದುಬಂದಿದೆ. ಈ ಕೃತ್ಯದಲ್ಲಿ 20 ಜನರ ಗುಂಪು "ನವ ಚೈನಾ ವಾರ್ತಾ ಸಂಸ್ಥೆ" ಸೇರಿದ ಇಬ್ಬರು ಫೋಟೋ ಗ್ರಾಫರ್‌ಗಳ ಮೇಲೆ ಹಲ್ಲೆ ಮಾಡಿ ಅವರಲ್ಲಿದ್ದ ಕ್ಯಾಮರಾಗಳನ್ನು ಕಿತ್ತುಕೊಂಡಿದ್ದಾರೆ. ಇಂತಹ ಘರ್ಷಣೆಯ ನಂತರ ಲಾಸಾದಲ್ಲಿ ಕರ್ಫ್ಯೂ ವಿಧಿಸಿದ್ದಾರೆ. ಘರ್ಷಣೆಗೆ ಪ್ರೋತ್ಸಾಹ ಕೊಡುತ್ತಿದ್ದ ಬೌದ್ಧಮತ ಕೇಂದ್ರವಾದ ಜೋಖಾಂಗ್ ಬೌದ್ಧ ದೇವಾಲಯವನ್ನು ಮುಚ್ಚಿದ್ದಾರೆ.

[ಪ್ರಜಾಶಕ್ತಿಯಿಂದ ಅನು : ಅಶ್ವಥ್‌ನಾರಾಯಣ ರೆಡ್ಡಿ.]

17 ಅಂಶಗಳ ಪರ್ಯಾಯ ಕಾರ್ಯಕ್ರಮ

ಕಾಂಗ್ರೆಸ್ (ಐ) ನ ನೀತಿಗಳಿಗೆ ಪರ್ಯಾಯ ನೀತಿಯನ್ನು ನಿರೂಪಿಸುವ ಮೂಲಕ ಕಾಂಗ್ರೆಸ್ (ಐ) ಗೆ ಒಂದು ಸಮರ್ಥ ಬದಲಿಯನ್ನು ರೂಪಿಸಲು ಪ್ರಯತ್ನಿಸುತ್ತಿದೆ ಸಿ. ಪಿ. ಐ. [ಎಂ] "ರಾಜೀವ್ ಗಾಂಧಿಯವರೇ ರಾಜೀನಾಮೆ ಕೊಡಿ" ಎಂದು ಎತ್ತಿರುವ ಧ್ವನಿಯನ್ನು ಗಟ್ಟಿಗೊಳಿಸಲು ಪಕ್ಷ ರೂಪಿಸಿರುವ 17 ಅಂಶಗಳ ಕಾರ್ಯಕ್ರಮವನ್ನು ವಿವರಿಸುತ್ತಾರೆ ಕಾ|| ಎ. ಎಸ್. ಆಚಾರ್ಯ.

5. ಜೀವನಾವಶ್ಯಕ ವಸ್ತುಗಳ ಸಾರ್ವಜನಿಕ ವಿತರಣೆ

ಜೀವನಾವಶ್ಯಕ ವಸ್ತುಗಳನ್ನು ಉತ್ಪಾದಿಸುವ ರೈತರು ಮತ್ತು ಅವುಗಳನ್ನು ಉಪಯೋಗಿಸುವ ಬಳಕೆದಾರರ ಹಿತಾಸಕ್ತಿಗಳು ಪರಸ್ಪರ ವಿರುದ್ಧವಾಗಿವೆಯೆಂದು ಕೆಲವೊಮ್ಮೆ ತಪ್ಪು ಅಭಿಪ್ರಾಯ ನೀಡಲಾಗುತ್ತಿದೆ. ನಿಜ ಸಂಗತಿ ಏನೆಂದರೆ ಅಕ್ಕಿ, ಗೋಧಿ, ರಾಗಿ, ಖಾದ್ಯತೈಲ ಅಥವಾ ಇನ್ನಿತರ ದಿನ ಬಳಕೆಯ ವಸ್ತುಗಳನ್ನು ಉತ್ಪಾದಿಸುವ ರೈತ ತಾನು ನೇರವಾಗಿ ಬಳಕೆದಾರನ ಜೊತೆ ವ್ಯವಹರಿಸುವುದಿಲ್ಲ. ರೈತಾಪಿ ಜನ ಉತ್ಪಾದಿಸಿದ ದಿನ ಬಳಕೆಯ ವಸ್ತುಗಳು ಮಾರುಕಟ್ಟೆಗೆ ಬಂದಾಗ ಮಧ್ಯವರ್ತಿಗಳಾದ ಸಗಟು ವ್ಯಾಪಾರಿಗಳು ಅವನ್ನು ತೀರಾ ಕಮ್ಮಿ ಬೆಲೆಗೆ ಖರೀದಿಸಿ ತಮ್ಮ ದಾಸ್ತಾನಿನಲ್ಲಿರಿಸಿಕೊಂಡು ಬೆಲೆ ವಿಪರೀತ ಏರಿದಾಗ ಗ್ರಾಹಕರಿಗೆ ಮಾರಾಟ ಮಾಡುತ್ತಾರೆ. ಹೀಗೆ ದಿನ ಬಳಕೆಯ ವಸ್ತುಗಳ ಬೆಲೆ ವಿಪರೀತ ಏರಿದಾಗಲೂ ಅದನ್ನು ಉತ್ಪಾದಿಸುವ ರೈತರಿಗೆ ಅದರಿಂದ ಯಾವ ಫಾಯಿದೆಯೂ ಇಲ್ಲ. ಲಾಭವೆಲ್ಲ ಮಧ್ಯವರ್ತಿ ಸಗಟು ವ್ಯಾಪಾರಿಯ ಜೋಕ್ಕಸವನ್ನು ಸೇರುತ್ತದೆ. ಸಗಟು ವ್ಯಾಪಾರಿ ಉತ್ಪಾದಕನಾದ ರೈತನನ್ನೂ ಬಳಕೆದಾರನಾದ ಕಾರ್ಮಿಕನನ್ನೂ ಏಕಕಾಲಕ್ಕೆ ಶೋಷಣೆ ಮಾಡುತ್ತಾನೆ. ಇದನ್ನು ತಡೆಗಟ್ಟಬೇಕಾದರೆ ಕೇಂದ್ರ ಸರ್ಕಾರವು ಭಾರತ ಆಹಾರ ನಿಗಮದ ಮೂಲಕ ಆಹಾರ ಧಾನ್ಯಗಳನ್ನು ಬೆಳೆಗಾರರಿಂದ ಯೋಗ್ಯ ಬೆಲೆಗೆ ಕೊಂಡುಕೊಂಡು ಅವುಗಳನ್ನು ಸುವ್ಯವಸ್ಥಿತವಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮುಖಾಂತರ ಜನಸಾಮಾನ್ಯರಿಗೆ ನ್ಯಾಯ ಬೆಲೆಯಲ್ಲಿ ಹಂಚಬೇಕು.

ಗ್ರಾಮಾಂತರಗಳಲ್ಲಿಯೇ ಆಹಾರದ ಉತ್ಪಾದನೆ ಆಗುತ್ತಿರುವುದರಿಂದ ಅಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಆಹಾರ ವಸ್ತುಗಳನ್ನು ಹಂಚಿಕೊಡಬೇಕಾಗಿಲ್ಲ ಎಂಬುದು ಮತ್ತೊಂದು ನಂಬಿಕೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇಂದು ಭೂಹೀನ ಕೃಷಿ ಕಾರ್ಮಿಕರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಏರುತ್ತಿದೆ. ಈ ಸಂಖ್ಯೆ ಶೇ. 35ರಿಂದ 50ರವರೆಗೂ ಅಂದರೆ ಗ್ರಾಮಾಂತರ ಜನತೆಯ ಅರ್ಧಭಾಗ ಆಹಾರ ಹಾಗೂ ಇತರ ವಸ್ತುಗಳನ್ನು ಕೊಳ್ಳುವವರೇ ಆದುದರಿಂದ ಗ್ರಾಮ-ನಗರ-ಪಟ್ಟಣಗಳೆಂಬ ಯಾವ ವ್ಯತ್ಯಾಸವನ್ನು ಮಾಡದೇ ಪಡಿತರ ವ್ಯವಸ್ಥೆ ಜಾರಿಗೆ ತರಬೇಕು. ಈಗ ದೇಶದಲ್ಲಿರುವ ಒಟ್ಟು 3.30 ಲಕ್ಷ ನ್ಯಾಯ ಬೆಲೆ ಅಂಗಡಿಗಳಲ್ಲಿ ಶೇಕಡಾ 78ರಷ್ಟು ಗ್ರಾಮಾಂತರ ಪ್ರದೇಶದಲ್ಲಿದ್ದರೂ ಅವು ಸರಬರಾಜು ಮಾಡುವ ಜೀವನಾವಶ್ಯಕ ವಸ್ತುಗಳ ಸಂಖ್ಯೆ ತೀರಾ ಕಡಿಮೆ. ಈ ನ್ಯಾಯಬೆಲೆ ಅಂಗಡಿಗಳಿಗೆ ಭಾರತ ಆಹಾರ ನಿಗಮ ಕೇವಲ ಸ್ವಲ್ಪ ಅಕ್ಕಿ, ಗೋಧಿ, ಖಾದ್ಯ ತೈಲ, ಮತ್ತು ಸಕ್ಕರೆ ಇವಿಷ್ಟನ್ನೇ ಸರಬರಾಜು ಮಾಡುತ್ತದೆ. ಈ ಸರಬರಾಜು ಕ್ರಮಬದ್ಧವಾಗಿ ನಡೆಯುವುದಿಲ್ಲ. ಕೆಲವೊಮ್ಮೆ ಗುದಾಮುಗಳಲ್ಲಿ ಕೊಳೆತು ನಾರುತ್ತಿರುವ ಆಹಾರ ಧಾನ್ಯಗಳನ್ನೇ ಸರಬರಾಜು ಮಾಡಲಾಗುತ್ತದೆ. ಈ ಅವ್ಯವಸ್ಥೆ ಕೊನೆಗೊಂಡು ದೇಶದ ಮೂಲೆ ಮೂಲೆಗಳಲ್ಲೂ ನ್ಯಾಯ ಬೆಲೆ ಅಂಗಡಿಗಳನ್ನು ತೆರೆದು ಪ್ರಮುಖ ಆಹಾರ ಧಾನ್ಯಗಳು, ದ್ವಿದಳ ಧಾನ್ಯಗಳು, ಖಾದ್ಯ ತೈಲ, ಉಪ್ಪು, ಸಕ್ಕರೆ, ಸೌದೆ, ಇದ್ದಿಲು, ಸೀಮೆಎಣ್ಣೆ, ಜೀವ ಉಳಿಸುವ ಔಷಧಿಗಳು, ಬೆಂಕಿಪೊಟ್ಟಣ ಮೊದಲಾದ ವಸ್ತುಗಳನ್ನು ಅಗ್ಗದ ಬೆಲೆಯಲ್ಲಿ ದೊರಕಿಸಿಕೊಡಬೇಕು. ಇವುಗಳ ಬೆಲೆಯನ್ನು ಕಮ್ಮಿಗೊಳಿಸಲು ಸರ್ಕಾರವೇ ಸಬ್ಸಿಡಿ ನೀಡಬೇಕು. ಈ ವಸ್ತುಗಳ ಮೇಲಿನ ಅಬಕಾರಿ ಸುಂಕವನ್ನು ತೀವ್ರವಾಗಿ ಕಡಿತಗೊಳಿಸಬೇಕು.

ಸರ್ಕಾರವು ಆಹಾರ ನಿಗಮದ ಮುಖಾಂತರ ಆಹಾರ ಧಾನ್ಯಗಳನ್ನು ಸಂಗ್ರಹಿಸುವಾಗ ಕಂಡು ಬರುವ ಇನ್ನೊಂದು ಮುಖ್ಯ ಅಂಶವಿದೆ. ಈ ಸಂಗ್ರಹದ ಅತಿ ಹೆಚ್ಚಿನ ಪಾಲು ಪಂಜಾಬ್, ಉತ್ತರ ಪ್ರದೇಶ ಹಾಗೂ ಹರಿಯಾಣದಂತಹ ಆಧುನಿಕ ತಂತ್ರಜ್ಞಾನ ಮತ್ತು ಅಧಿಕ ಇಳುವರಿ ಬೀಜಗಳನ್ನು ಬಳಸಿದ, ಕೃಷಿಯಲ್ಲಿ ಮುಂದುವರಿದಿರುವ ರಾಜ್ಯಗಳಿಂದಲೇ ಬರುತ್ತದೆ. ಸಂಗ್ರಹವಾದ ಆಹಾರ ಧಾನ್ಯಗಳನ್ನು ಕ್ಲುಪ್ತಕಾಲದಲ್ಲಿ ಬೇಕಾದ ಕಡೆಗೆ ಸಾಗಿಸಲು ಆಹಾರ ನಿಗಮ ಪರದಾಡಬೇಕಾಗುತ್ತದೆ. ಆಹಾರ ಧಾನ್ಯಗಳನ್ನು ಸಾಗಾಣಿಕೆಗೆ ರೈಲ್ವೇ ವಾಗಿನುಗಳು ದೊರಕುವುದು ದುಸ್ತರವಾಗುತ್ತಿದೆ. ಕೇಂದ್ರ ಸರ್ಕಾರವು ಭಾರತ ಆಹಾರ ನಿಗಮಕ್ಕೆ ಸಾಕಷ್ಟು ವಾಗಿನುಗಳನ್ನು ನೀಡುವಂತೆ ರೈಲ್ವೇ ಇಲಾಖೆಗೆ ನಿರ್ದೇಶಿಸಬೇಕಲ್ಲದೆ ಆಹಾರ ಧಾನ್ಯಗಳ ಸಾಗಾಣಿಕೆಗೆ ಆದ್ಯತೆ ನೀಡಬೇಕು.

6. ಕೃಷಿ ಫಸಲುಗಳಿಗೆ ಸೂಕ್ತ ಬೆಲೆ

ವ್ಯವಸಾಯದ ಮೇಲೆಯೇ ಅವಲಂಬಿತವಾಗಿರುವ ರೈತ ತಾನು ಬೆಳೆದ ಫಸಲನ್ನು ಮಾರಿದಾಗ ಆತನಿಗೆ ಸಿಗುವ ಪ್ರತಿಫಲ ಕಡಿಮೆ ಪಕ್ಷ ಅವನ ಮತ್ತು ಅವನ ಕುಟುಂಬದ ಪೋಷಣೆಗೆ ಸಾಕಾಗುವಂತಿರಬೇಕು. ಅವನ ಶ್ರಮಕ್ಕೆ ತಕ್ಕದಾಗಿರಬೇಕು. ಈ ಪ್ರತಿಫಲ ರೈತನಿಗೆ ದೊರೆಯದಿದ್ದರೆ ಕೃಷಿ ಎನ್ನುವುದು ಕೇವಲ ನಷ್ಟದ ಬಾಬತ್ತಾಗುತ್ತದೆ. ಮೊದಲೇ ಹೇಳಿದಂತೆ ಕೃಷಿಯ ಉತ್ಪನ್ನಗಳು ಮಾರುಕಟ್ಟೆಗೆ ಬಂದಾಗ ಮಧ್ಯವರ್ತಿಗಳೂ, ಸಗಟು ವ್ಯಾಪಾರಿಗಳೂ ಅತಿ ಕಡಿಮೆ ಬೆಲೆಗೆ ಅವನ್ನು ಮಾರಾಟ ಮಾಡುವಂತೆ ರೈತರನ್ನು ಬಲವಂತಕ್ಕೊಳಪಡಿಸುತ್ತಾರೆ. ಆಹಾರ ಧಾನ್ಯಗಳಲ್ಲದೆ ನಗದು ಬೆಳೆಗಳಾದ ಕಬ್ಬು, ಹತ್ತಿ, ಸೆಣಬು, ನೆಲಗಡಲೆ, ಅಡಿಕೆ, ತೆಂಗು ಇತ್ಯಾದಿಗಳನ್ನು ಕೊಂಡುಕೊಳ್ಳುವವರು ಸಾಮಾನ್ಯ ಜನರಲ್ಲ; ಬದಲು ಅವುಗಳನ್ನು ಕಚ್ಚಾ ಮಾಲುಗಳಾಗಿ ಬಳಸುವ ಗುತ್ತೇದಾರಿ ಬಂಡವಾಳಗಾರರು. ಈ ಗುತ್ತೇದಾರ ಬಂಡವಾಳಗಾರರು ತಾವೇ ಒಂದು ಒಕ್ಕೂಟದಂತೆ ವರ್ತಿಸಿ ಈ ಕಚ್ಚಾ ಮಾಲುಗಳ ಬೆಲೆ ಅತ್ಯಂತ ನಿಕೃಷ್ಟ ಮಟ್ಟದಲ್ಲಿರುವಂತೆ ನೋಡಿ ಕೊಳ್ಳುತ್ತಾರೆ. ಆದರೆ ಇದೇ ಗುತ್ತೇದಾರಿ ಬಂಡವಾಳಗಾರರು ರೈತರಿಗೆ ಮಾರುವ ಕೃಷಿಯೇತರ ಸಾಮಗ್ರಿಗಳ ಬೆಲೆಯನ್ನು ದುಬಾರಿಗೊಳಿಸುತ್ತಾರೆ. ಇದಕ್ಕೆ ಕೇಂದ್ರ ಸರಕಾರ ತನ್ನ ಬೆಲೆ ಆಯೋಗಕ್ಕೆ ಬೆಂಬಲ ನೀಡುತ್ತದೆ. ಇದರ ಜೊತೆಗೆ ಸರಕಾರವೂ ಡೀಸಲ್, ವಿದ್ಯುತ್ ಮತ್ತು ನೀರಿನ ಶುಲ್ಕವನ್ನು ಏರಿಸುತ್ತಲೇ ಇದೆ. ಈ ಬೆಲೆಯೇರಿಕೆಗೆ ಅನುಗುಣವಾದ ಪ್ರಮಾಣದಲ್ಲಿ ರೈತರ ಉತ್ಪನ್ನಗಳ ಬೆಲೆ ಹೆಚ್ಚಾಗಿಲ್ಲ. ರೈತರು ತಮಗೆ ಬೇಕಾದ ಸಾಮಗ್ರಿಗಳಿಗೆ ಯಾವ ಪ್ರಮಾಣದ ಬೆಲೆ ತೆರಬೇಕಾಗುತ್ತದೋ ಅದೇ ಪ್ರಮಾಣದ ಬೆಲೆ ತಮ್ಮ ಉತ್ಪನ್ನಗಳಿಗೂ ದೊರೆಯಬೇಕೆಂದು ಕೇಳುವುದು ತೀರಾ ಸಹಜವಾದ ಬೇಡಿಕೆ. ಕೇಂದ್ರ ಸರಕಾರ ತನ್ನ ಸಂಸ್ಥೆಗಳಾದ ಆಹಾರ ನಿಗಮ, ಹತ್ತಿ ನಿಗಮ ಮುಂತಾದವುಗಳ ಮೂಲಕ ಕೃಷಿ ಉತ್ಪನ್ನಗಳು ಮಾರುಕಟ್ಟೆಗೆ ಬರುವ ಆರಂಭದಲ್ಲಿಯೇ ನಿಶ್ಚಿತವಾದ ಲಾಭಕರವಾದ ಬೆಂಬಲ ಬೆಲೆಗೆ ಇವನ್ನು ಕೊಳ್ಳಬೇಕು. ಇದಕ್ಕಾಗಿ ಸರಕಾರ ಈ ಸಂಸ್ಥೆಗಳಿಗೆ ಹಣ ಒದಗಿಸಬೇಕು. ಕೃಷಿ ಫಸಲಿನ ಬೆಲೆ ಕೃಷಿಗಾಗಿ ತಗಲುವ ವೆಚ್ಚದ ಏರಿಕೆಗೆ ತಕ್ಕಂತೆ ಏರಬೇಕು.

7. ಆರ್ಥಿಕ ಧೋರಣೆಗಳ ಆಮೂಲಾಗ್ರ ಪರಿವರ್ತನೆ

ಏಳು ಪಂಚ ವಾರ್ಷಿಕ ಯೋಜನೆಗಳು ಕಳೆದು ಎಂಟನೆಯ ಯೋಜನೆ ಇನ್ನೇನು ಆರಂಭವಾಗುವ ಹೊತ್ತಿಗೆ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಭೂತಾಕಾರವಾಗಿ ಬೆಳೆದಿದೆ. 'ದಿ ಇಕನಾಮಿಕ್ ಸರ್ವೆ' ನಡೆಸಿರುವ ಸಮೀಕ್ಷೆಯಂತೆ ದೇಶದಲ್ಲಿ ಒಟ್ಟು ಉದ್ಯೋಗಿಗಳ ಸಂಖ್ಯೆ ಮಾರ್ಚ್ 1976 ರಲ್ಲಿ 201.66 ಲಕ್ಷದಷ್ಟಿದ್ದುದು ಮಾರ್ಚ್ 1985 ರಷ್ಟಕ್ಕೆ 246.22 ಲಕ್ಷದಷ್ಟಾಗಿದೆ. ಇದು ಖಾಸಗಿ ಕ್ಷೇತ್ರದಲ್ಲಿನ ಉದ್ಯೋಗಿಗಳ ಸಂಖ್ಯೆಯನ್ನು ಒಳಗೊಂಡಿದೆ. ಅಂದರೆ ಒಂಬತ್ತು ವರ್ಷಗಳ ಅವಧಿಯಲ್ಲಿ ಕೇವಲ 45 ಲಕ್ಷ ಉದ್ಯೋಗಗಳು ಹೊಸದಾಗಿ ನಿರ್ಮಾಣವಾಗಿವೆ. ಪ್ರತಿವರ್ಷ ಹೆಚ್ಚಾಗುವ ಉದ್ಯೋಗಾವಕಾಶಗಳ ಪ್ರಮಾಣ ಶೇ. 2.2. ಇದೇ ಅವಧಿಯಲ್ಲಿ ಜನಸಂಖ್ಯೆ ಪ್ರತಿ ವರ್ಷ ಶೇ.2 24ರ ಪ್ರಮಾಣದಲ್ಲಿ ಅಧಿಕಗೊಂಡಿದೆ. ಹಾಗಾಗಿ ಹೊಸದಾಗಿ ನಿರ್ಮಾಣಗೊಂಡ ಉದ್ಯೋಗಾವಕಾಶಗಳು ನಿರುದ್ಯೋಗ ಸಮಸ್ಯೆಯನ್ನು ಕಿಂಚಿತ್ತಾದರೂ ಪರಿಹರಿಸಲು ವಿಫಲವಾಗಿವೆ. ಇದಕ್ಕೆ ಮೂಲಕಾರಣ ಉತ್ಪಾದನೆ ಮತ್ತು ಉದ್ಯೋಗಾವಕಾಶಗಳಿಗೆ ಸಂಬಂಧಿಸಿದಂತೆ ನಮ್ಮ ಸರಕಾರದ ದೋಷಪೂರಿತ ನೀತಿ 40 ವರ್ಷಗಳಿಂದಲೂ ಅನುಸರಿಸುತ್ತಿರುವ ಈ ನೀತಿ ಹೊಸ ಆರ್ಥಿಕ ನೀತಿಯ ರಾಜೀವ್‌ಗಾಂಧಿ ಕಾಲದಲ್ಲಿ ಬಹಳ ತೀವ್ರ ಸ್ಥಿತಿಯನ್ನು ತಲುಪಿದೆ. ನಮ್ಮ ಯೋಜನೆಗಳೆಲ್ಲ ಶ್ರೀಮಂತ ವರ್ಗದ ಉಪಭೋಗಕ್ಕೆ ಬೇಕಾದ ಐಷಾರಾಮದ ವಸ್ತುಗಳ ಉತ್ಪಾದನೆಯ ಕಡೆಗೆ ಲಕ್ಷ್ಯವಿರಿಸಿಕೊಂಡಂಥವುಗಳು. ಉನ್ನತ ತಾಂತ್ರಿಕತೆಯ ನೆರವಿನಿಂದ ಉತ್ಪಾದನೆಯಾಗುವ ಇಂತಹ ಐಷಾರಾಮದ ವಸ್ತುಗಳ ತಯಾರಿಕೆಯಲ್ಲಿ ಉದ್ಯೋಗಗಳನ್ನು ಹೆಚ್ಚಿಸುವ ಅವಕಾಶವೇ ಇಲ್ಲ. ಇವಕ್ಕೆ ಬೇಕಾದ ಸಲಕರಣೆಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತದೆ. ಹಾಗೆಯೇ ತಂತ್ರಜ್ಞಾನ ಮತ್ತು ಯಂತ್ರ ಸಾಮಗ್ರಿಗಳೂ ವಿದೇಶದಿಂದ ಆಮದಾಗುವ ಕಾರಣ ಇಂತಹ ಶ್ರೀಮಂತರ ವಿಲಾಸೀ ಸಾಮಗ್ರಿಗಳ ಉತ್ಪಾದನೆಯಿಂದಾಗಿ ಉದ್ಯೋಗಾವಕಾಶ ಕುಂಠಿತವಾಗುತ್ತವೆ. ಇದಕ್ಕೆ ವಿರುದ್ಧವಾಗಿ ಸಾಮಾನ್ಯ ಜನರ ದಿನ ಬಳಕೆಯ ವಸ್ತುಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಿದರೆ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ವಿದೇಶೀ ತಂತ್ರಜ್ಞಾನ ಮತ್ತು ಉಪಕರಣಗಳನ್ನು ಆಮದು ಮಾಡಿಕೊಳ್ಳಬೇಕಾಗಿಯೂ ಇಲ್ಲ. ಆದುದರಿಂದ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಾಮೂಹಿಕ ಬಳಕೆಯ ಸರಕುಗಳ ಉತ್ಪಾದನೆಯನ್ನು ವೃದ್ಧಿಗೊಳಿಸಬೇಕು.

ನಮ್ಮ ಸರಕಾರದ ಸಡಿಲು ಕೈಗಾರಿಕಾ ಮತ್ತು ಲೈಸೆನ್ಸಿಂಗ್ ನೀತಿಯಿಂದಾಗಿ ಗುತ್ತೇದಾರಿ ಬಂಡವಾಳಗಾರರು ಸಣ್ಣ ಪುಟ್ಟ ಕ್ಷೇತ್ರಗಳಿಗೂ ಒಳನುಗ್ಗಿ ಲಕ್ಷಾಂತರ ಕಸುಬುದಾರರು, ಗುಡಿ ಕೈಗಾರಿಕೆಗಾರರು ಮುಂತಾದವರ ಉದ್ಯೋಗಗಳನ್ನು ಕಿತ್ತುಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿದ್ದ ಕಮ್ಮಾರರು, ಕುಂಬಾರರು, ಕೈಮಗ್ಗ ನೇಯ್ಗೆಗಾರರು ಮುಂತಾದವರೆಲ್ಲ ದೊಡ್ಡ ಕೈಗಾರಿಕೋದ್ಯಮಿಗಳ ಹೊಡೆತ ತಾಳಲಾರದೆ ತಮ್ಮ ಸಾಂಪ್ರದಾಯಿಕ ಕಸಬಿನಿಂದ ವಂಚಿತರಾಗುತ್ತಿದ್ದಾರೆ, ನಿರುದ್ಯೋಗಿಗಳಾಗುತ್ತಿದ್ದಾರೆ, ಕೃಷಿ ಕಾರ್ಮಿಕರಾಗುತ್ತಿದ್ದಾರೆ. ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಸಾವಿರಾರು ಕುಟುಂಬಗಳು ತಲೆತಲಾಂತರದಿಂದ ಸಮುದ್ರದ ನೀರಿನಿಂದ ಉಪ್ಪು ತಯಾರಿಸುವ ಕಸುಬಿಗೆ ಅಂಟಿಕೊಂಡಿದ್ದರು. ಇವತ್ತು ನಮ್ಮ ದೇಶದ ದೊಡ್ಡ ಗುತ್ತೇದಾರಿ ಬಂಡವಾಳಗಾರರಾದ ಟಾಟಾಗಳು ಉಪ್ಪಿನ ಪಾಕೆಟ್‌ಗಳನ್ನು ಮಾರುಕಟ್ಟೆಯಲ್ಲಿ ರಾಶಿ ಹಾಕಲಾರಂಭಿಸಿದ್ದಾರೆ. ಕಡಲ ತೀರದಲ್ಲಿ ಉಪ್ಪಿನ ಆಗರದಲ್ಲಿ ದುಡಿದು ಬದುಕುತ್ತಿದ್ದವರು ಟಾಟಾ ಜೊತೆಗೆ ಸ್ಪರ್ಧಿಸಲು ಸಾಧ್ಯವೇ? ಬ್ರೂಕ್ ಬಾಂಡ್, ಲಿಪ್ಟನ್ ಮುಂತಾದ ಗುತ್ತೇದಾರರು ಉಪ್ಪಿನಕಾಯಿ, ಸಾರಿನಪುಡಿ, ಶಾವಿಗೆ ಮುಂತಾದುವನ್ನೂ ಉತ್ಪಾದಿಸಲಾರಂಭಿಸಿದ್ದಾರೆ. ಹೀಗಾದರೆ ಈ ಸರಕುಗಳನ್ನು ಗೃಹಕೈಗಾರಿಕೆಯಾಗಿ ಉತ್ಪಾದಿಸುತ್ತಿದ್ದ ಸಾವಿರಾರು ಕುಟುಂಬಗಳ ಗತಿ ಏನು? ಹಿರಿಯ ಮತ್ತು ಗುತ್ತೇದಾರಿ ಬಂಡವಾಳಗಾರರು ಹೀಗೆ ಎಗ್ಗಿಲ್ಲದೆ ಬಿರ್ರಿಯಾಗಿ ಯಾವುದೇ ಕ್ಷೇತ್ರಕ್ಕೆ ನುಗ್ಗದಂತೆ ಕೇಂದ್ರ ಸರಕಾರ ಅವರ ಮೇಲೆ ನಿಯಂತ್ರಣ ಹೇರಬೇಕು. ಸಣ್ಣ ಪ್ರಮಾಣದ ಉದ್ಯಮಗಳಿಗೆ ಗುಡಿಕೈಗಾರಿಕೆಗಳಿಗೆ ಮತ್ತು ಸಾಂಪ್ರದಾಯಿಕ ಕೈಗಾರಿಕೆಗಳು ಹಾಗೂ ಕಸುಬುದಾರರಿಗೆ ನಿರ್ದಿಷ್ಟವಾದ ಕ್ಷೇತ್ರಗಳನ್ನು ಮೀಸಲಾಗಿಡಬೇಕು. ಈ ದಿಸೆಯಲ್ಲಿ ಸರಕಾರದ ಕೈಗಾರಿಕಾ ಮತ್ತು ಲೈಸೆನ್ಸಿಂಗ್ ನೀತಿಯನ್ನು ಒಳಗೊಂಡಂತೆ ಸಮಗ್ರ ಆರ್ಥಿಕ ಧೋರಣೆಗಳ ಪುನಾರಚನೆಯಾಗಬೇಕು.

8. ಕೂಲಿಗಾಗಿ ಕಾಳು

[illegible] ಪಶ್ಚಿಮ ಬಂಗಾಳದ ಎಡರಂಗ ಸರಕಾರವು ಮೊದಲ ಬಾರಿಗೆ ಹಮ್ಮಿಕೊಂಡ 'ಕೂಲಿಗಾಗಿ ಕಾಳು' ಯೋಜನೆ ದೇಶದ ಹಲವಾರು ರಾಜ್ಯಗಳಲ್ಲಿ ಜನಪ್ರಿಯವಾಗಿತ್ತು. ಬರ ಮತ್ತು ಪ್ರವಾಹ ಪೀಡಿತ ಪ್ರದೇಶದ ಜನರಿಗೆ ಒದಗಿಸಲಾಗುವ ಕಾಮಗಾರಿಯಲ್ಲಿ ದುಡಿಯುವ ಸಂತ್ರಸ್ತ ಜನತೆಗೆ ಕೊಡಬೇಕಾದ ಕೂಲಿಯಲ್ಲಿ ಒಂದು ಭಾಗವನ್ನು ಆಹಾರ ಧಾನ್ಯದ ರೂಪದಲ್ಲಿ ನೀಡಲಾಗುತ್ತದೆ. ಆಹಾರ ಧಾನ್ಯಗಳ ಬೆಲೆ ಮುಕ್ತ ಮಾರುಕಟ್ಟೆಯಲ್ಲಿ ಏರುವಾಗ ಕೂಲಿಯ ಒಂದು ಭಾಗವನ್ನು ಧಾನ್ಯದ ರೂಪದಲ್ಲಿ ನೀಡುವುದು, ಬಡಜನತೆಯ ಪಾಲಿಗೆ ಒಂದು ದೊಡ್ಡ ನೆರವು. ದೇಶದ ಹೆಚ್ಚಿನ ರಾಜ್ಯಗಳಲ್ಲಿ ಭೀಕರ ಬರ ಪರಿಸ್ಥಿತಿಯಿರುವ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಮತ್ತೊಮ್ಮೆ ಜ್ಯಾರಿಗೆ ತಂದು ಅದನ್ನು ಇನ್ನೂ ಹೆಚ್ಚಿನ ಪ್ರದೇಶಗಳಿಗೆ ವಿಸ್ತರಿಸಬೇಕಾದ ಅಗತ್ಯವಿದೆ. ವಿವಿಧ ರಾಜ್ಯಗಳು ಹಮ್ಮಿಕೊಳ್ಳುವ ಈ ಯೋಜನೆಗೆ ಆಹಾರ

[ಪುರವಣಿ 3ನೇ ಪುಟ ನೋಡಿ]

ಪಾರ್ಟಿ ಸದಸ್ಯತ್ವ ಮತ್ತು ಧಾರ್ಮಿಕ ನಂಬಿಕೆಗಳು

ಪ್ರಶ್ನೆ 1.

ಮಾರ್ಕ್ಸ್‌ವಾದ– ಲೆನಿನ್‌ವಾದಗಳೇ ನಮ್ಮ ಪಕ್ಷದ ಮೂಲ ತತ್ವ. ಭೌತಿಕ ವಾದವೇ ಅದರ ತಿರುಳು. ಹೀಗಿರುವಾಗ ಪಕ್ಷದ ಆದರ್ಶದಲ್ಲಿ ಮತ್ತು ತತ್ವದಲ್ಲಿ ನಂಬಿಕೆಯಿರುವ ಒಬ್ಬ ವ್ಯಕ್ತಿ ದೇವರ ಪೂಜೆ ಮಾಡುವುದು ಸಾಧ್ಯವೇ?

–ಮುಹಮ್ಮದ್ ಕೋಯಾ

–(ಕೋಳಿ ಕೋಡ್)

ಪ್ರಶ್ನೆ 2.

ರಶ್ಯಾದಲ್ಲಿ ಧಾರ್ಮಿಕ ನಂಬಿಕೆ ಇರುವವರಿಗೆ ಪಕ್ಷದಸದಸ್ಯತ್ವ ನೀಡಲಾಗುತ್ತದೆಯೇ ? ಧರ್ಮದಲ್ಲ ನಂಬಿಕೆಯಿರುವವನಿಗೆ ನಿಜವಾದ ಕಮ್ಯುನಿಸ್ಟಾಗಲು ಸಾಧ್ಯವಿಲ್ಲವೆಂದು ಮಾರ್ಕ್ಸ ಅಥವಾ ಲೆನಿನ್ ಹೇಳಿದ್ದಾರೆಯೇ ?

–ಮೊಯಿದೀನ್ ಕುಟ್ಟಿ

ಉತ್ತರ

ಕಮ್ಯುನಿಸ್ಟ್ ಪಕ್ಷದ ಮೂಲ ಸಿದ್ಧಾಂತ ಭೌತಿಕವಾದವೆಂಬುದರಲ್ಲಿ ಸಂಶಯವಿಲ್ಲ. ಆದರೆ ಪ್ರಶ್ನೆ ಕೇಳಿದವರು ಭಾವಿಸಿರುವಂತೆ ಭೌತಿಕವಾದದಲ್ಲಿ ಪ್ರಾರಂಭವಾಗಿ ಭೌತಿಕವಾದದಲ್ಲೇ ಕೊನೆಗಾಣುವುದಷ್ಟೇ ಮಾರ್ಕ್ಸ್‌ವಾದವಲ್ಲ. ಭೌತಿಕವಾದದಂತೆಯೇ ದ್ವಂದ್ವವಾದಕ್ಕೆ ಮಾರ್ಕ್ಸ್‌ವಾದದಲ್ಲಿ ಪ್ರಾಶಸ್ತ್ಯವಿದೆ. ಭೌತವಾದ ಮತ್ತು ದ್ವಂದ್ವವಾದ ಎರಡೂ ಒಂದುಗೂಡಿರುವುದೇ ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದ. ಆದ್ದರಿಂದಲೇ ಇದು ಸಿದ್ಧಾಂತಗಳಿಗಿಂತ ಶ್ರೇಷ್ಠ ತರದ್ದಾಗಿದೆ.

ದ್ವಂದ್ವವಾದ ಎಂದರೇನು? ದ್ವಂದ್ವವಾದ ಮತ್ತು ಭೌತವಾದ ಹೇಗೆ ಹೊಂದಿಕೊಳ್ಳುತ್ತದೆ ? ಅಥವಾ ಇವೆರಡಕ್ಕೂ ಇರುವ ಸಂಬಂಧವೇನು ? ಈ ಪ್ರಶ್ನೆಗಳಿಗೆ ಉತ್ತರಿಸಿದ ನಂತರ ಮಾತ್ರ ಮುಖ್ಯ ಪ್ರಶ್ನೆಗಳಿಗೆ ಉತ್ತರಿಸುವುದು ಸಾಧ್ಯವಾಗುತ್ತದೆ.

ಭೌತವಾದದ ಗಟ್ಟಿಯಾದ ಹೆಜ್ಜೆಯೂರಿದ ಮಾರ್ಕ್ಸ್‌ವಾದೀ–ಲೆನಿನ್‌ವಾದೀ ಪಕ್ಷ, ಮೂಲಭೂತವಾಗಿ ಕಾರ್ಮಿಕ ವರ್ಗದ ಕ್ರಾಂತಿಕಾರೀ ಪಕ್ಷ. ಆದ್ದದರಿಂದ ರೈತರು ಜನಸಾಮಾನ್ಯರು ಸೇರಿದಂತಹ ದುಡಿಯುವ ಜನ ವಿಭಾಗಗಳೆಲ್ಲಾ ಸೇರಿರುವಂತಹ ಒಂದು ಪಕ್ಷವಾಗಿದೆ. ಬಂಡವಾಳಶಾಹೀ ಭೂಮಾಲಿಕ ವರ್ಗಗಳ ವಿರುದ್ಧವೂ, ಸಾಮ್ರಾಜ್ಯಶಾಹಿಗಳ ವಿರುದ್ಧವೂ, ಶೋಷಣೆಗೆ ವಿರುದ್ಧವಾಗಿ ನಿಂತು ವಿಮೋಚನೆಗಾಗಿ ಶ್ರಮಿಸುವ ಎಲ್ಲಾ ಜನವಿಭಾಗಗಳ ಪಕ್ಷವಾಗಿದೆ.ಪಾರ್ಟಿಯ ಮೂಲ ಸಿದ್ಧಾಂತವಾಗಿರುವ ಭೌತವಾದ ಮತ್ತು ದ್ವಂದ್ವವಾದಗಳಿರುವ ಸಂಬಂಧವನ್ನು ಗ್ರಹಿಸಲು ಸಾಧ್ಯವಾಗದೇ ಇರುವುದೇ ಈ ಎರಡೂ ಪ್ರಶ್ನೆಗಳನ್ನು ಹಾಕುವುದಕ್ಕೆ ಕಾರಣವಾಗಿದೆ.

ಮಾರ್ಕ್ಸ್‌ವಾದದ ಮೂಲ ಸಿದ್ಧಾಂತವೇ ಭೌತವಾದ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಅದರ ರಾಜಕೀಯ ಅಭಿಪ್ರಾಯ ಕಾರ್ಮಿಕ ವರ್ಗದ ನೇತೃತ್ವದಲ್ಲಿ ದುಡಿಯುವ ಸಾಮಾನ್ಯ ಜನತೆಯ ಸಂಘಟಿತ ಪ್ರಯತ್ನಗಳೇ. ಈ ಹೋರಾಟದಲ್ಲಿ ಭಾಗವಹಿಸುವ ಜನ ಕೋಟಿಯ ಬಹುಸಂಖ್ಯಾತರು, ಧಾರ್ಮಿಕ ನಂಬಿಕೆಯುವರೇ ಆಗಿರುತ್ತಾರೆ.

ಆದ್ದರಿಂದಲೇ ರಾಜಕೀಯವಾಗಿ ಮತ್ತು ಸಂಘಟನಾತ್ಮಕವಾಗಿ ಮಾರ್ಕ್ಸ್‌ವಾದಿ–ಲೆನಿನ್‌ವಾದೀ ಪಕ್ಷದ ನೇತೃತ್ವದಲ್ಲಿ ಅಣಿ ನೆರೆಯುವ ಜನ ಸಮೂಹದ ದೊಡ್ಡ ವಿಭಾಗ ದೇವಸ್ಥಾನ, ಚರ್ಚ್, ಮಸೀದಿ ಮತ್ತಿತರ ಧಾರ್ಮಿಕ ಕ್ಷೇತ್ರಗಳಿಗೆ ಹೋಗುತ್ತಾರೆ. ಕೇರಳದಲ್ಲಿ ಶಬರಿಮಲೈಗೆ ಹೋಗುವ ಯಾತ್ರಾರ್ಥಿಗಳಲ್ಲಿ ಸಾವಿರಾರು ಮಂದಿ ಎಡ ಮನೋಭಾವದವರು ಎಂಬುದು ಎಲ್ಲರೂ ಹೇಳುವ ಸತ್ಯ ಸಂಗತಿಯಲ್ಲವೇ ? ಇದೊಂದು ವೈರುಧ್ಯವಲ್ಲವೇ ?

ಒಂದೆಡೆ ಮಾರ್ಕ್ಸ್‌ವಾದಿಗಳ ಭೌತವಾದೀ ಸಿದ್ಧಾಂತ ಮತ್ತೊಂದೆಡೆ ರಾಜಕೀಯ ಸಂಘಟನಾ ಮಟ್ಟದಲ್ಲಿ ಪಕ್ಷದ ಮುಖಂಡತ್ವವನ್ನು ಅಂಗೀಕರಿಸುವ ಜನ ಸಾಮಾನ್ಯರ ಧಾರ್ಮಿಕ ನಂಬಿಕೆಗಳು ಪರಸ್ಪರ ಹೊಂದಿಕೊಳ್ಳುವುದಿಲ್ಲ. ಆದರೆ ಈ ಕೊರತೆಯನ್ನು ನೀಗಿಸುವುದು ಹೇಗೆ? ಇಲ್ಲಿದೆ, ಮಾರ್ಕ್ಸ್‌ವಾದಿಗಳಿಗೂ ಹಾಗೂ ನಾಸ್ತಿಕವಾದಿಗಳಿಗೂ ಇರುವ ವ್ಯತ್ಯಾಸ ಅಥವಾ ವೈರುಧ್ಯ.

ದಿನನಿತ್ಯ ಜೀವನದ ಪ್ರಶ್ನೆಗಳಿಗಾಗಿ ನಡೆಯುವ ಪ್ರಕ್ಷೋಭೆ ಮತ್ತು ಹೋರಾಟಗಳಲ್ಲಿ ಆಸ್ತಿಕರೂ ನಾಸ್ತಿಕರೂ ಇಬ್ಬರೂ ಭಾಗವಹಿಸುತ್ತಾರಲ್ಲವೇ? ಈ ಹೋರಾಟಗಳಿಂದಲೇ ಸಮಾಜವಾದೀ ಪ್ರಜಾಪ್ರಭುತ್ವದ ಕಡೆಗೆ ಪರಿವರ್ತನೆ ಸಾಧ್ಯವಾಗುತ್ತದೆ. ಯುದ್ಧ ವಿಪತ್ತಿನಿಂದ ಇಡೀಜಗತ್ತನ್ನು ಮುಕ್ತಗೊಳಿಸಬೇಕೆನ್ನುವ ಪ್ರತಿಯೊಂದು ರಾಜಕೀಯ ಹೋರಾಟಗಳಲ್ಲಿಯೂ ನಾಸ್ತಿಕರೂ ಹಾಗೂ ಆಸ್ತಿಕರೂ ಹೆಗಲಿಗೆ ಹೆಗಲು ಕೊಟ್ಟು ಹೋರಾಟ ಮಾಡುತ್ತಿದ್ದಾರೆ.

ಆಗಲೇ ದುಡಿಯುವ ಜನ ಸಮೂಹಗಳ ಐಕ್ಯತೆ, ವರ್ಗ ಐಕ್ಯತೆಯಾಗಿ ರೂಪುಗೊಳ್ಳುವಾಗಲೇ ಧರ್ಮಗಳಲ್ಲಿ ನಂಬಿಕೆಯಿರುವ ಜನರ ತಿಳುವಳಿಕೆ, ನಿಲುವುಗಳು ಉನ್ನತ ಮಟ್ಟಕ್ಕೇರಲು ಸಾಧ್ಯ ಎಂಬುದು ಮಾರ್ಕ್ಸ್‌ವಾದಿ–ಲೆನಿನ್‌ವಾದಗಳ ತಿಳುವಳಿಕೆ. ಲೆನಿನ್ನರ ಮಾತುಗಳಲ್ಲಿ ಹೇಳುವುದಾದರ ಪರಲೋಕದಲ್ಲಿ ಸ್ವರ್ಗವನ್ನು ಕಟ್ಟುವುದರ ಬಗ್ಗೆ ವಿಧವಿಧವಾದ ದೃಷ್ಟಿಯುಳ್ಳವರೂ ಈ ಲೋಕದಲ್ಲಿ ಸ್ವರ್ಗವನ್ನು ನಿರ್ಮಿಸಲು ಒಗ್ಗಟ್ಟಾಗಿ ನಡೆಸುವ ಪ್ರಯತ್ನವನ್ನೇ ಮಾರ್ಕ್ಸ್‌ವಾದಿ–ಲೆನಿನ್‌ವಾದಿಗಳು ಪ್ರಮುಖವೆಂದು ಪರಿಗಣಿಸುತ್ತಾರೆ.

ಇಂದಿನ ಜಗತ್ತಿನ ರಾಜಕೀಯದ, ಭಾರತದ ರಾಜಕೀಯದ ಅನುಭವಗಳನ್ನು ಪರಿಶೀಲಿಸಿದರೆ ಈ ಧೋರಣೆ ಸಂಪೂರ್ಣವಾಗಿ ಸರಿಯೆಂಬುದು ವ್ಯಕ್ತವಾಗುತ್ತದೆ.

ಇಂದು ಜಗತ್ತಿನೆಲ್ಲಾ ಜನತೆ ಮುಂದೆ ಇರುವ ಏಕ ಮಾತ್ರ ಪ್ರಶ್ನೆ ಅಣು ಯುದ್ಧದ ಪ್ರಶ್ನೆ. ಇದರ ವಿರುದ್ಧದ ಹೋರಾಟಗಳಲ್ಲಿ ಜಗತ್ತಿನೆಲ್ಲಾ ಮಾರ್ಕ್ಸ್‌ವಾದಿ–ಲೆನಿನ್‌ವಾದಿಗಳ ಜೊತೆಯಲ್ಲಿ ಧಾರ್ಮಿಕ ಮುಖಂಡರು ಒಂದು ವಿಭಾಗ ಭಾಗವಹಿಸುತ್ತಿದ್ದಾರೆ. ಕೋಮುವಾದಿ ಸೇರಿ ಧಾರ್ಮಿಕ ರಾಜಕೀಯ ರಂಗದಲ್ಲಿ ಒಟ್ಟಾರೆ ರಾಜೀವ್ ಕಾಂಗ್ರೆಸ್‌ನ ದುರಾಡಳಿತ ಹಾಗೂ ಬಿ.ಜೆ.ಪಿ. ಮುಸ್ಲಿಂಲೀಗ್ ಮೊದಲಾದ ಜಾತೀಯ ಮತೀಯ ಶಕ್ತಿಗಳ, ಛಿದ್ರಕಾರಿ ಚಟುವಟಿಕೆಗಳಿಗೆ ಎದುರಾಗಿ ಜನಗಳನ್ನು ಅಣಿ ನೆರೆಸುವುದರಲ್ಲಿ ಮಾರ್ಕ್ಸ್‌ವಾದಿ – ಲೆನಿನ್‌ವಾದಿಗಳೂ ಧಾರ್ಮಿಕ ನಂಬಿಕೆಯುಳ್ಳವರೂ ಸೇರುತ್ತಾರೆ.

ಅದಕ್ಕೊಂದು ಉದಾಹರಣೆ ಕೇರಳದಲ್ಲಿ ಇತ್ತೀಚಿಗೆ ನಡೆದ "ಮಾನವ ಸಂಪಳಿ" ನಾಸ್ತಿಕರು ಮತ್ತು ಆಸ್ತಿಕರ ನಡುವಿನ ಭಿನ್ನತೆ, ಆಸ್ತಿಕರೊಳಗೆ ಇರುವ ಧಾರ್ಮಿಕ ನಂಬಿಕೆಗಳ ಭಿನ್ನತೆ ಈ ಜನಸಮೂಹದ ಐಕ್ಯತೆಗೆ ಅಡ್ಡಿಯಿಲ್ಲ.

ಇದರ ಆಧಾರದ ಮೇಲೆಯೇ ಮಾರ್ಕ್ಸ್‌ವಾದಿ – ಲೆನಿನ್‌ವಾದಿಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುವುದು. ನಾಸ್ತಿಕವಾದಿಗಳಂತೆ ಆಸ್ತಿಕರ ವಿರುದ್ಧ ಯಾವ ಹೋರಾಟವನ್ನು ಅವರು ನಡೆಸುವುದಿಲ್ಲ. ಆದರೆ ಧಾರ್ಮಿಕ ನಂಬಿಕೆಗಳ ಬಗ್ಗೆ ಬಹಿರಂಗವಾಗಿ ಸೈದ್ಧಾಂತಿಕ ಸಮರವನ್ನು ಸಂಘಟಿತ ಪ್ರಚಾರವನ್ನು ನಡೆಸುತ್ತಾರೆ.

ಭಾರತದಂತಹ ಜಾತ್ಯತೀತ ಪ್ರಜಾಪ್ರಭುತ್ವ ಸಮಾಜದಲ್ಲಿ ವಿವಿಧ ಧರ್ಮಗಳು ತಮ್ಮ ತತ್ವಗಳನ್ನು ಪ್ರಚಾರ ಮಾಡುವಂತೆಯೇ ನಾಸ್ತಿಕರೂ ಭೌತಿಕವಾದದ ತಿಳುವಳಿಕೆಗಳನ್ನು ಪ್ರಚಾರ ಮಾಡಲು ಈ ವ್ಯವಸ್ಥೆಯಲ್ಲಿರುವ ಅವಕಾಶಗಳನ್ನು ಉಪಯೋಗಿಸುತ್ತಾರೆ.

ಎಲ್ಲಾ ಧರ್ಮಗಳಿಗೆ ಸೇರಿದ ಕೋಟ್ಯಂತರ ಜನಗಳನ್ನು ಒಟ್ಟುಗೂಡಿಸಿ ದಿನನಿತ್ಯದ ಹೋರಾಟಗಳಲ್ಲಿ ಅಣಿ ನೆರೆಸುವುದರ ಜೊತೆಯಲ್ಲಿಯೇ ಇವರ ಮಧ್ಯೆ ಧಾರ್ಮಿಕ ಸಿದ್ಧಾಂತಗಳ ವಿರುದ್ಧವಾಗಿ ಸೈದ್ಧಾಂತಿಕ ಪ್ರಚಾರವನ್ನು ನಡೆಸುತ್ತಾ ಈ ಎರಡನ್ನೂ ಕೂಡಿಸುವ ಚಳುವಳಿಯೇ ಮಾರ್ಕ್ಸ್‌ವಾದ–ಲೆನಿನ್‌ವಾದ.

ಸೋವಿಯತ್ ಒಕ್ಕೂಟವೇ ಆಗಲಿ, ಭಾರತವೇ ಆಗಲಿ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳಲ್ಲಿಯೂ ಪಕ್ಷದ ಕಾರ್ಯಕ್ರಮ ಹಾಗೂ ಸಂವಿಧಾನವನ್ನು ಒಪ್ಪಿಕೊಳ್ಳುವವರೆಲ್ಲರೂ ಪಕ್ಷದ ಸದಸ್ಯತ್ವಕ್ಕೆ ಅರ್ಜಿ ಹಾಕಬಹುದು. ಸಂಬಂಧಪಟ್ಟ ಪಕ್ಷದ ಘಟಕಕ್ಕೆ ಹೀಗೆ ಅವರು ಕಾರ್ಯಕ್ರಮ, ಸಂವಿಧಾನವನ್ನು ಒಪ್ಪುತ್ತಾರೆಂಬ ನಂಬಿಕೆ ಬಂದರೆ ಪಕ್ಷದ ಸದಸ್ಯತ್ವ ನೀಡುತ್ತಾರೆ. ಈ ಸದಸ್ಯತ್ವಕ್ಕೆ ಧಾರ್ಮಿಕ ನಂಬಿಕೆಯನ್ನು ಬಿಡಬೇಕೆಂಬ ಷರತ್ತಿಲ್ಲ.

ಆದರೆ ಆರಂಭದಲ್ಲಿ ಧಾರ್ಮಿಕ ನಂಬಿಕೆಯುಳ್ಳವನಾಗಿದ್ದರೂ ದ್ವಂದ್ವಮಾನ ಭೌತಿಕವಾದದಲ್ಲಿ ಗಟ್ಟಿಯಾಗಿ ನಿಂತ ಈ ಪಕ್ಷದ ಸದಸ್ಯತ್ವ ಅವನಿಗೆ ಸಿಗುವುದಾದರೂ ಭೌತಿಕವಾದದ ಸೈದ್ಧಾಂತಿಕ ತಿಳುವಳಿಕೆ ಪಡೆಯುವುದಕ್ಕಾಗಿ,ಪಕ್ಷದ ಪ್ರತಿ ಸದಸ್ಯನೂ ಶ್ರಮಿಸಬೇಕು. ಈ ಬಗ್ಗೆ ಪಕ್ಷ ಯಾವಾಗಲೂ ಎಚ್ಚರದಿಂದಿರುತ್ತದೆ. ಎಂದರೆ ಧಾರ್ಮಿಕ ನಂಬಿಕೆಯಿಂದ ಮಾರ್ಕ್ಸ್‌ವಾದದ ಕಡೆಗೆ ಹೆಜ್ಜೆ ಹಾಕುವ ಪ್ರಕ್ರಿಯೆ ಪೂರ್ಣವಾಗಲು ಸದಸ್ಯತ್ವ ಪಡೆದ ವ್ಯಕ್ತಿಯೂ, ಪಕ್ಷವೂ ಪರಸ್ಪರ ಸಹಕರಿಸಬೇಕು ಎಂದರ್ಥ. ○

17 ಅಂಶಗಳ ಪರ್ಯಾಯ ಕಾರ್ಯಕ್ರಮ

(ಪುರವಣಿ 2ನೇ ಪುಟದಿಂದ)

ಧಾನ್ಯ ಮತ್ತು ಹಣಕಾಸಿನ ನೆಲವನ್ನು ಕೇಂದ್ರ ಸರಕಾರ ನೀಡಬೇಕು.

9. ದುಡಿಯುವ ಹಕ್ಕು ಮೂಲಭೂತ ಹಕ್ಕು

ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ದಾಖಲಾತಿ ಮಾಡಿಕೊಂಡ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯೇ 3.50 ಕೋಟಿಯಷ್ಟಿದೆಯಂತೆ. ಅಂದರೆ ದೇಶದಲ್ಲಿ ಸಂಘಟಿತ ಕ್ಷೇತ್ರದಲ್ಲಿ ಉದ್ಯೋಗದಲ್ಲಿರುವವರ ಸಂಖ್ಯೆಗಿಂತ ನಿರುದ್ಯೋಗಿಗಳ ಸಂಖ್ಯೆಯೇ ಜಾಸ್ತಿ. ಇದರ ಜೊತೆಗೆ ಗ್ರಾಮಾಂತರ ಪ್ರದೇಶದ ನಿರುದ್ಯೋಗಿಗಳು ಮತ್ತು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸದಿರುವವರು ಹಾಗೂ ಅಲ್ಪಕಾಲೀನ ಉದ್ಯೋಗಿಗಳ ಸಂಖ್ಯೆಯನ್ನು ಸೇರಿಸಿದರೆ ಅದುಒಟ್ಟು ಹತ್ತು ಕೋಟಿಗೂ ಮೀರಬಹುದು. ದೈಹಿಕವಾಗಿಯೂ ಮಾನಸಿಕವಾಗಿಯೂ ಸ್ವಸ್ಥರಾಗಿರುವ ಮತ್ತು ದುಡಿಯುವ ಸಾಮರ್ಥ್ಯ ಇರುವ ಈ ಅಪಾರ ಸಂಖ್ಯೆಯ ಯುವ ಜನತೆಯನ್ನು ಯಾವುದೇ ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸದೆ ಕೊಳೆಯಿಸುತ್ತಿರುವ ಈ ಯುವ ಜನರ ಮನಸ್ಸಿನಲ್ಲಿ ತಾವು ಪರಾವಲಂಬಿಗಳೆಂಬ ಅಪರಾಧ ಪ್ರಜ್ಞೆಯನ್ನು ಬಲವಂತವಾಗಿ ತುರುಕುತ್ತಿರುವ ನಮ್ಮ ರಾಜಕೀಯ, ಸಾಮಾಜಿಕ ವ್ಯವಸ್ಥೆ ಎಷ್ಟು ಕ್ರೂರವಾಗಿದೆ! ಆದುದರಿಂದಲೇ ಉದ್ಯೋಗದ ಹಕ್ಕನ್ನು ಸಂವಿಧಾನದ ಮೂಲಭೂತ ಹಕ್ಕುಗಳ ಪರಿಚ್ಛೇದದಲ್ಲಿ ಸೇರಿಸಬೇಕೆನ್ನುವುದು ನಮ್ಮ ಬೇಡಿಕೆ. ಉದ್ಯೋಗ ನೀಡುವ ತನಕ ನಿರುದ್ಯೋಗ ಭತ್ಯೆಯನ್ನು ನೀಡುವುದು ಸರಕಾರದ ಹೊಣೆಗಾರಿಕೆ. ಆಸ್ತಿಯ ಹಕ್ಕು ಮೂಲಭೂತ ಹಕ್ಕು ಎಂದು ಪರಿಗಣಿಸಿ ಟಾಟಾ ಬಿರ್ಲಾಗಳ ಆಸ್ತಿಯನ್ನು ಸಂರಕ್ಷಿಸುವ ಸರ್ಕಾರ ಉದ್ಯೋಗವನ್ನು ಮೂಲಭೂತ ಹಕ್ಕಾಗಿ ಪರಿಗಣಿಸಬೇಕು. ಎಂದರೆ ದುಡಿಯುವ ವಯೋಮಾನ ತಲುಪಿ, ಶಿಕ್ಷಣ ಮುಂದುವರೆಸಲಾಗದ ಅಥವಾ ಶಿಕ್ಷಣ ಮುಗಿಸಿದ ಪ್ರತಿಯೊಬ್ಬರಿಗೂ ಅವರು ಶಾಲೆ ಕಾಲೇಜು ಬಿಟ್ಟೊಡನೆಯೇ ಕೆಲಸ ಸಿಗಬೇಕು. ಎಂದರ್ಥ.

10. ಸರ್ವರಿಗೂ ಶಿಕ್ಷಣ

ಹೊಸ ಆರ್ಥಿಕ ನೀತಿಯ ಕೈಗೂಸಾಗಿರುವ ನೂತನ ಶಿಕ್ಷಣ ನೀತಿಯನ್ನು ಕೈ ಬಿಟ್ಟು ಸರ್ವರಿಗೂ ಶಿಕ್ಷಣ ದೊರಕಿಸುವತ್ತ ಸರಕಾರವು ಕ್ರಮಗಳನ್ನು ಕೈಗೊಳ್ಳಬೇಕು. ಆಪರೇಷನ್ ಬ್ಲಾಕ್ ಬೋರ್ಡ್, ನವೋದಯ ಶಾಲೆಗಳು, ಸೆಂಟರ್ ಆಫ್ಎಕ್ಸಲೆನ್ಸ್ ಕಲ್ಪನೆಯ ಪ್ರತಿರೂಪವಾಗಿರುವ ಸ್ವಾಯತ್ತ ಕಾಲೇಜುಗಳಂತಹ ಬೂಟಾಟಿಕೆಯ ಕಾರ್ಯಕ್ರಮಗಳನ್ನು ಕೈ ಬಿಟ್ಟು ಪ್ರಾಥಮಿಕ ಶಿಕ್ಷಣವನ್ನು ಪಸರಿಸುವತ್ತ ಗಮನ ಹರಿಸಬೇಕಾಗಿದೆ. ಇಥಿಯೋಪಿಯಾ, ನಿಕರಾಗುವಾದಂತಹ ಹಿಂದುಳಿದಿದ್ದ ರಾಷ್ಟ್ರಗಳೂ ಅಲ್ಪ ಕಾಲದಲ್ಲೇ ಶಿಕ್ಷಣ ಪ್ರಸಾರದಲ್ಲಿ ಮಹತ್ವಪೂರ್ಣ ಪ್ರಗತಿ ಸಾಧಿಸಿ, ನಿರಕ್ಷರತೆಯನ್ನು ಹೊಡೆದೋಡಿಸಲು ಸಾಧ್ಯವಾಗಿದ್ದರೆ, ಇಂಡಿಯಾ ದೇಶದಲ್ಲಿ ಅದು ಯಾಕಾಗಿಲ್ಲ? ವಯಸ್ಕರ ಶಿಕ್ಷಣ ಕಾರ್ಯಕ್ರಮ ವ್ಯಾಪಕವಾಗಿ ಜಾರಿಯಾದಾಗ ಮಾತ್ರ ನಿರಕ್ಷರತೆ ನಿವಾರಣೆಯಾದೀತು. ○

ಬರ ಪರಿಹಾರಕ್ಕಾಗಿ ಹಣ ಸಂಗ್ರಹಿಸುವುದು ಹೇಗೆ ?

ಬರ ಪರಿಹಾರಕ್ಕೆ ಹಣ ಕೂಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆ ವಿಧಿಸಿ, ಅದರ ಮೂಲಕ ರೂ: 550 ಕೋಟಿ ಸಂಗ್ರಹಿಸುವ ನೀತಿಯನ್ನು ಸಿ.ಪಿ.ಐ. (ಎಂ) ಸೆಕ್ರೆಟಾರಿಯೆಟ್ ಸದಸ್ಯರಾದ ಎನ್.ಕೆ. ಉಪಾಧ್ಯಾಯರು ಬಲವಾಗಿ ಖಂಡಿಸಿ, ಈ ಕ್ರಮ ಸರಿಯಲ್ಲೆಂದು ದೂರಿದ್ದಾರೆ. ಹೊಸ ಪೇಟೆಯಲ್ಲಿ ಅವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತಡುತ್ತಾ, ಚಾಲನೆಯಲ್ಲಿರುವ ಕೋಟ್ಯಾವಧಿ ಕಪ್ಪುಹಣ ಪತ್ತೆಮಾಡಿ ಅಭಿವೃದ್ಧಿಯೇತರ ಖರ್ಚು ಕಡಿಮೆಮಾಡಿ,ಗುತ್ತೇದಾರಿ ಬಂಡವಾಳದಾರರಿಂದ ಬರತಕ್ಕ ಬಾಕಿ ತೆರಿಗೆ ವಸೂಲು ಮಾಡುವ ಮೂಲಕ ಬರ ಪರಿಹಾರಕ್ಕೆ ಸಹಾಯ ಮಾಡಬಹುದಲ್ಲ ಎಂಬ ಪ್ರಶ್ನೆ ಹಾಕಿದ್ದಾರೆ. ○

ಪಕ್ಷದ ಘಟಕಗಳ ಕರಪತ್ರ ಮಾದರಿ

(ಪುರವಣಿ 1ನೇ ಪುಟದಿಂದ)

ಯನ್ನು ಬಲಪಡಿಸುವುದು. ರಾಜ್ಯಪಾಲರ ಪಾತ್ರ ಮತ್ತು 365ನೆಯ ನಿಬಂಧನೆಗಳ ದುರುಪಯೋಗವನ್ನು ತಡೆಯಲು ಸಂವಿಧಾನಕ್ಕೆ ಅಗತ್ಯವಾದ ತಿದ್ದುಪಡಿಗಳನ್ನು ಮಾಡಿ ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನರ್ರಚಿಸುವುದು: ಕೇಂದ್ರ ಮತ್ತು ರಾಜ್ಯಗಳ ನಡುವೆ ಈಗಿರುವ ಹಣಕಾಸಿನ ಏರ್ಪಾಡುಗಳನ್ನು ರಾಜ್ಯಗಳಿಗೆ ರಾಷ್ಟ್ರದ ಸಂಪನ್ಮೂಲಗಳ ನ್ಯಾಯವಾದ ಪಾಲು ಸಿಕ್ಕುವಂತೆ ಬದಲಾವಣೆ ಮಾಡುವುದು.

5. ಸಗಟು ವ್ಯಾಪಾರಿಗಳ ಲಾಭಗಳನ್ನು ತೀವ್ರವಾಗಿ ನಿರ್ಬಂಧಿಸಿ, ಬಹು ವ್ಯಾಪಕವಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಜಾಲವನ್ನು ಸಂಘಟಿಸಿ, ಕೇಂದ್ರ ಸರ್ಕಾರವು ಬಳಕೆದಾರರಿಗೆ ನ್ಯಾಯವಾದ ಬೆಲೆಗಳಲ್ಲಿ ಅಗತ್ಯ ವಸ್ತುಗಳ ಸಾಕಷ್ಟು ಸರಬರಾಜನ್ನು ಖಾತರಿ ಪಡಿಸಬೇಕು. ಇದಾಗಬೇಕಾದರೆ,ಉತ್ಪಾದನೆಯ ಆದ್ಯತೆಗಳು ಬಡ ಮತ್ತು ಮಧ್ಯಮ ವರ್ಗಗಳು ಬಳಸುವ ವಸ್ತುಗಳ ಪರವಾಗಿ ಬದಲಾಗಬೇಕು, ಹಾಗೂ ಪ್ರಮುಖ ಆಹಾರ ಧಾನ್ಯಗಳು, ದ್ವಿದಳ ಧಾನ್ಯಗಳು, ಖಾದ್ಯತೈಲ, ಉಪ್ಪು, ಸಕ್ಕರೆ, ಮನೆ ಬಳಕೆಯ ಕಲ್ಲಿದ್ದಲು, ಸೀಮೆಎಣ್ಣೆ, ಸಾಮಾನ್ಯ ಬಟ್ಟೆ, ಕಾಗದ, ಜೀವಉಳಿಸುವ ಔಷಧಿಗಳು, ಬೆಂಕಿಪೊಟ್ಟಣ ಇತ್ಯಾದಿ ವಸ್ತುಗಳನ್ನು ಸಬ್ಸಿಡೈಸ್ ಬೆಲೆಗಳಿಗೆ ಸರಬರಾಜು ಮಾಡಬೇಕು. ಇಂತಹ ಎಲ್ಲಾ ವಸ್ತುಗಳ ಮೇಲೆ ಇರುವ ಅಬ್ಕಾರಿ ಸುಂಕಗಳನ್ನು ತೀವ್ರವಾಗಿ ಕಡಿಮೆ ಮಾಡಬೇಕು ಮತ್ತು ಅವುಗಳ ಸಾಗಾಣಿಕೆಗೆ ಹೆಚ್ಚು ಆದ್ಯತೆಯನ್ನು ಕೊಡಬೇಕು.

6. ಸರ್ಕಾರಿ ಸಂಸ್ಥೆಗಳು ಸಾಕಷ್ಟು ಕೊಡಕೊಳ್ಳುವ ಮೂಲಕ ಕೃಷಿ ಉತ್ಪನ್ನಕ್ಕೆ ಲಾಭದಾಯಕ ಬೆಲೆಗಳನ್ನು ಖಾತರಿ ಪಡಿಸುವುದು.

7. ಸಮೂಹ ಬಳಕೆಯ ವಸ್ತುಗಳ ಉತ್ಪಾದನೆಗಳನ್ನು ಹೆಚ್ಚಿಸಲು, ಸಣ್ಣ ಕುಶಲ ಕರ್ಮಿಗಳು ಮತ್ತು ಕಸುಬುದಾರರು ಸೇರಿದಂತೆ ಎಲ್ಲಾ ವಿಭಾಗಗಳಿಗೂ ಉದ್ಯೋಗಾವಕಾಶಗಳನ್ನು ವಿಸ್ತರಿಸುವುದು ಮತ್ತು ಸಾಂಪ್ರದಾಯಕ ಕೈಗಾರಿಕೆಗಳಿಗೆ ರಕ್ಷಣೆ ಕೊಡುವ ಮೂಲಕ ಆರ್ಥಿಕ ನೀತಿಗಳನ್ನು ಸಂಪೂರ್ಣವಾಗಿ ಪುನರ್ರಚಿಸುವುದು.

8. "ಕೂಲಿಗಾಗಿ ಕಾಳು" ಕಾರ್ಯಕ್ರಮವನ್ನು ಮತ್ತೆ ಪ್ರಾರಂಭಿಸಿ ವಿಸ್ತರಿಸುವುದು.

9. ಕೆಲಸದ ಹಕ್ಕನ್ನು ಸಂವಿಧಾನದ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸೇರಿಸುವುದು.

10. ಶಿಕ್ಷಣದ ಹಕ್ಕು.

11, ಈಗಿರುವ ಭೂಸುಧಾರಣಾ ಶಾಸನಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ವೇಗವಾಗಿ ಅನುಷ್ಠಾನ ಮಾಡುವುದು, ರಾಜ್ಯ ಶಾಸನ ಸಭೆಗಳು ಸ್ವೀಕರಿಸಿದ ಭೂಸುಧಾರಣಾ ಮಸೂದೆಗಳಿಗೆತೂಡಲೇ ರಾಷ್ಟ್ರಾಧ್ಯಕ್ಷರ ಅಂಗೀಕಾರ ಮುದ್ರೆಕೊಡುವುದು.

12. ರೈತರಿಗೆ ಅಗ್ಗದ ಸಾಲವನ್ನು ಬೇಸಾಯದ ಸಾಮುಗ್ರಿಗಳ ಸರಬರಾಜನ್ನು ಖಾತರಿ ಪಡಿಸುವುದು.

13. ಕೃಷಿ ಕಾರ್ಮಿಕರಿಗೆ ಕನಿಷ್ಟಕೂಲಿ ಜಾರಿಗೆ ತರುವುದು, ಗ್ರಾಮೀಣ ಜನತೆಯ ಜೀವನ ಮತ್ತು ಕೆಲಸದ ಪರಿಸ್ಥಿತಿಗಳನ್ನು ಸುಧಾರಿಸಲು ಇತರ ಕ್ರಮಗಳನ್ನು ತೆಗೆದುಕೊಳ್ಳುವುದು.

14. ಶಾಶ್ವತ ಬರ ಪರಿಹಾರ ಕ್ರಮಗಳು, ಬರ ಪೀಡಿತ ಪ್ರದೇಶಗಳಲ್ಲಿ ಪರಿಹಾರಕ್ರಮಗಳಿಗಾಗಿ ಆಹಾರ ಧಾನ್ಯಗಳ ದಾಸ್ತಾನುಗಳ ಸಂಪೂರ್ಣ ಬಳಕೆ.

15. ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಹಿಂತೆಗೆದುಕೊಳ್ಳುವುದು, ರಾಷ್ಟ್ರೀಯ ಭದ್ರತಾ ಶಾಸನ, ಅಗತ್ಯ ಸೇವಾ ನಿರ್ವಹಣಾ ಶಾಸನದಂತಹ ಅನಿಷ್ಟ ಶಾಸನಗಳನ್ನು ರದ್ದುಮಾಡುವುದು, ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಲನ ಸಮಿತಿಯು ರೂಪಿಸಿರುವ ಬೇಡಿಕೆಗಳನ್ನು ಒಪ್ಪಿಕೊಳ್ಳುವುದು ಮತ್ತು ಕೈಗಾರಿಕೆಗಳ ಮುಚ್ಚುವಿಕೆ ಹಾಗೂ ಬೀಗ ಮುದ್ರೆಗಳನ್ನು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವುದು.

16. ಆರ್ಥಿಕ ಸ್ವಾವಲಂಬನೆಯ ರಾಷ್ಟ್ರೀಯ ನೀತಿಯನ್ನು ಪುನರ್‌ಸ್ಥಾಪಿಸುವುದು, ಬಡಜನರ ಮತ್ತು ಕಾರ್ಮಿಕ ವರ್ಗದ ವೆಚ್ಚದಲ್ಲಿ ಹಿರಿಯ ಏಕಸ್ವಾಮ್ಯ ಸಂಸ್ಥೆಗಳು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಆರ್ಥಿಕ ನೀತಿ, ಹಣಕಾಸಿನ ಮತ್ತು ಬಂಡವಾಳ ಹೂಡುವ ನೀತಿಗಳನ್ನು ತೊರೆಯುವುದು.

17. ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳ ಜನರ ಮೇಲೆ, ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ, ಮಹಿಳೆಯರು ಮತ್ತು ಸಮಾಜದ ಇತರ ದುರ್ಬಲ ವಿಭಾಗಗಳ ಮೇಲೆ ನಡೆಯುವ ದೈಹಿಕ ಧಾಳಿಯನ್ನು ಮತ್ತು ಮುಂದುವರಿಯುತ್ತಿರುವ ಆರ್ಥಿಕ ಅನ್ಯಾಯಗಳನ್ನು ಕೊನೆಗೊಳಿಸಲುಪರಿಣಾಮಕಾರೀ ಕ್ರಮಗಳನ್ನು ಆರಂಭಿಸುವುದು.

............(ಊರು ಸ್ಥಳ)ದಲ್ಲಿ 10-1987ರಂದು ನಡೆಯುವ ರಾಜಕೀಯ ಸಮಾವೇಶಕ್ಕೆ ತಮ್ಮ ಸಹಾಯ, ಸಹಕಾರಗಳನ್ನು ಕೋರುತ್ತೇವೆ.

ಕಾರ್ಯದರ್ಶಿ,
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
....ಸಮಿತಿ ಶಾಖೆ,
....ಊರು

ಪಂಜಾಬ್ : ಅರ್ಚಕರುಗಳೇ ಉಗ್ರಗಾಮಿಗಳಾಗಿ

[ಪುರವಣಿ 1ನೇ ಪುಟದಿಂದ]

ಖಾಲಿಸ್ತಾನದ ಘೋಷಣೆಗೆ ಸಿಖ್ಖ ಜನಸಮೂಹದ ಬೆಂಬಲ ಕಂಡುಬರದಿದ್ದಾಗ, ಉಗ್ರಗಾಮಿಗಳನ್ನು ಬೇರೆ ಬೇರೆ ನೆವ ಹೇಳಿ ಬೆಂಬಲಿಸುತ್ತಿದ್ದ ಸಂಯುಕ್ತ ಅಕಾಲಿದಳ ಕೂಡಾ ಖಾಲಿಸ್ತಾನಕ್ಕೆ ಬೆಂಬಲ ನೀಡದಿದ್ದಾಗ ಇವರ ನಡುವಿನ ಘರ್ಷಣೆ ಸ್ಪಷ್ಟರೂಪ ಪಡೆಯಿತು.

ನೇರ ಹಣಾಹಣಿ

ಆಗಸ್ಟ 4ರಂದು ಅಕಾಲ್‌ತಖ್ತನ ತಾತ್ಕಾಲಿಕ ಮುಖ್ಯ ಪುರೋಹಿತರಾದ ಅದೇ ದರ್ಶನ್‌ಸಿಂಗ್‌ರಾಗಿ ವಿಶ್ವ ಸಿಖ್ಖ ಸಮಾವೇಶ ನಡೆಸಬೇಕಾಯಿತು. ಉಗ್ರಗಾಮಿಗಳು ದರ್ಶನ್‌ಸಿಂಗ್‌ರವರಿಗೆ ಬೆದರಿಕೆಯೊಡ್ಡಿದರೂ ಸಮಾವೇಶದಲ್ಲಿ ಅವರಿಗೆ ಭಾರೀ ಬೆಂಬಲ ದೊರೆಯಿತು. ಖಾಲಿಸ್ತಾನದ ಘೋಷಣೆ ಮತ್ತು ಪ್ರತ್ಯೇಕತಾವಾದಕ್ಕೂ ತಮಗೂ ಏನೂ ಸಂಬಂಧವಿಲ್ಲ ಎಂಬ ಠರಾವನ್ನು ಸಮಾವೇಶ ಅಂಗೀಕರಿಸಿತು. ಉಗ್ರಗಾಮಿಗಳು ಮತ್ತು ಅವರ ಮೂವರು ಸಹ ಧರ್ಮ ಗುರುಗಳು ದರ್ಶನ್ ಸಿಂಗರನ್ನು ಬೆದರಿಸಿದರು. ಹಿಂದೆ ಉಗ್ರಗಾಮಿಗಳು ಸಂಯುಕ್ತ ಅಕಾಲಿದಳ ಮುಂತಾಗಿ ಎಲ್ಲರೂ ಹಾಡಿಹೊಗಳುತ್ತಿದ್ದ ದರ್ಶನ್ ಸಿಂಗ್ ತಾತ್ಕಾಲಿಕವಾಗಿ ತಮ್ಮ ಸ್ಥಾನದಿಂದ ನಿವೃತ್ತರಾದರು.

ಅತ್ತ ಎಡ ಶಕ್ತಿಗಳ ಪ್ರಚಾರ-ಪ್ರಕ್ಷೋಭೆಗಳಿಂದಾಗಿ ಜನಸಾಮಾನ್ಯರ ಭಾವನೆಗಳು ದಿನೇ ದಿನೇ ಬದಲಾಗುತ್ತಿದ್ದವು. ಉಗ್ರಗಾಮಿಗಳು ಜನರಿಂದ ದೂರವಾಗುತ್ತಿದ್ದರು. ಜತೆಗೆ ಹರ್ಜಿಂದರ್‌ಸಿಂಗ್ ಜಿಂದಾ ಮುಂತಾದ ಪ್ರಮುಖ ಉಗ್ರಗಾಮಿಗಳ ಬಂಧನ ಅಥವಾ ಸಾವುಗಳಿಂದ ಉಗ್ರಗಾಮಿಗಳ ಬೆಂಬಲಿಗರ ಉತ್ಸಾಹ ಉದುಗಲಾರಂಭಿಸಿತು. ತಮ್ಮ ಆಟ ಸಾಗಲಾರದು ಎಂಬ ಭಾವನೆ ಉಗ್ರಗಾಮಿಗಳಲ್ಲಿ ಬರಲಾರಂಭಿಸಿತು

ಈ ಹಿನ್ನೆಲೆಯಲ್ಲಿಯೇ ಸಿಖ್ಖ ಉಗ್ರಗಾಮಿಗಳಿಗೆ ನೈತಿಕ ಬಲ ನೀಡಲೆಂದೇ ಸಾಮ್ರಾಜ್ಯಶಾಹಿಗಳ ಆದೇಶದ ಮೇರೆಗೆ ಸೆಪ್ಟೆಂಬರ್ 9 ರಂದು ನಾಲ್ಕು ಧರ್ಮಗುರುಗಳು ಆ ಘೋರ ಹೇಳಿಕೆ ನೀಡಿದರು.(ಅವರಲ್ಲಿ ಒಬ್ಬರು ಆ ಮೇಲೆ ಈ ಹೇಳಿಕೆಗೂ ತನಗೂ ಏನೂ ಸಂಬಂಧವಿಲ್ಲ ಎಂದು ಹೇಳಿದ್ದಾರೆ)

ಈ ಹೇಳಿಕೆ ದೇಶಾದ್ಯಂತ ತೀವ್ರ ಖಂಡನೆಗಳನ್ನು ಎದುರಿಸಬೇಕಾಗಿ ಬಂದಿದೆ. ಪ್ರಬಂಧಕ ಸಮಿತಿ ಮತ್ತು ಸಂಯುಕ್ತ ಅಕಾಲಿದಳ ಕೂಡಾ ಅಕಾಲ್‌ತಖ್ತನ ತಾತ್ಕಾಲಿಕ ಧರ್ಮಗುರುವಿನ ಮೇಲೆ ಉಗ್ರಗಾಮಿಗಳ ಹಲ್ಲೆಯಿಂದಾಗಿ ಅದನ್ನು ಖಂಡಿಸಬೇಕಾಯಿತು. ಆದರೆ ಮತ್ತೆ ಉಗ್ರಗಾಮಿಗಳ ಬೆದರಿಕೆಯಿಂದಾಗಿ ಪ್ರಬಂಧಕ ಸಮಿತಿಯ ತಾತ್ಕಾಲಿಕ ಅಧ್ಯಕ್ಷರು ಚಂಚಲತೆ ತೋರ್ಪಡಿಸುತ್ತಿದ್ದಾರೆ.

ಈ ಅನುಭವದ ಪಾತ್ರವೇನು ?

ಇವರೆಲ್ಲಾ ಈಗ ಈ ಅನುಭವಗಳಿಂದ ಪಾಠ ಕಲಿಯುವರೇ ? ಅಕಾಲಿದಳದ ಪರಂಪರೆಗಳೆಲ್ಲಾ ಮೂಲೆಗೆ ತಳ್ಳಲ್ಪಡುತ್ತಿವೆ. ಚುನಾಯಿತ ಸಂಸ್ಥೆಗಳನ್ನೂ ನಿರರ್ಥಕಗೊಳಿಸಲಾಗುತ್ತಿದೆ. ಕೆಲವೇ ಉಗ್ರಗಾಮಿಗಳು ಇಡೀ ಸಿಖ್ಖ ಜನ ಸಮುದಾಯಕ್ಕೆ ಮಾರ್ಗದರ್ಶನ ನೀಡುವ ಅಧಿಕಾರ ಕಸಿದು ಕೊಂಡಿದ್ದಾರೆ. ಒತ್ತಡ ತಂತ್ರವಾಗಿ, ತಾತ್ಕಾಲಿಕ ಪ್ರಯೋಜನಕ್ಕೆ ಉಗ್ರಗಾಮಿಗಳ ನೆರವು ಪಡೆದುದರಿಂದ, ಅವರಿಗೆ ತಲೆಬಾಗಿದುದರಿಂದ, ಆಂದೋಲನದ ಮೇಲಿನ ಹತೋಟಿಯನ್ನೇ ತಾವು ಕಳಕೊಳ್ಳಬೇಕಾಯಿತು ಎಂಬುದನ್ನು ಈಗಲಾದರೂ ಅವರು ಅರಿಯುವರೇ ? ಕನಿಷ್ಟ ಈಗಲಾದರೂ ಸಾವಿರಾರು ಅಕಾಲಿಗಳ ತ್ಯಾಗ ಬಲಿದಾನಗಳಿಂದ ಕಟ್ಟಲ್ಪಟ್ಟ ಚುನಾಯಿತ ಸಂಸ್ಥೆಗಳ ರಕ್ಷಣೆಗಾಗಿಯಾದರೂ ಉಗ್ರಗಾಮಿಗಳಿಂದ ಬಹಿರಂಗವಾಗಿಯೇ ತಮ್ಮನ್ನು ಪ್ರತ್ಯೇಕಿಸಿ ಕೊಳ್ಳುತ್ತಾರೆಯೋ ?

ಲೋಂಗೋವಾಲ್ ಅಕಾಲಿದಳ ಉಗ್ರಗಾಮಿಗಳ ವಿರುದ್ಧಸ್ಥೈರ್ಯದ ನಿಲುವು ತಳೆದಿದೆ. ಆದರೆ ಅವರೂ ಕೂಡಾ ದೇಶದ ರಕ್ಷಣೆ ಬೇಕಾದರೆ ರಾಜಕೀಯ ಮತ್ತು ಧರ್ಮವನ್ನು ಪ್ರತ್ಯೇಕಿಸುವುದು ಅಗತ್ಯ ಎಂದು ಇದರಿಂದ ಮನಗಾಣಬೇಕಾಗಿದೆ.

ಕಳೆದ ಆರು ವರ್ಷಗಳಲ್ಲಿ ಸಿಖ್ಖ ಜನ ತಮಗೆ ಶಾಂತಿ ಮತ್ತು ದೇಶದ ಐಕ್ಯತೆಬೇಕೆಂದು ತೋರಿಸಿಕೊಟ್ಟಿದ್ದಾರೆ ಸಿಖ್ಖ ಉಗ್ರಗಾಮಿಗಳು ಎಷ್ಟೇ ಕುಮ್ಮಕ್ಕು ನೀಡಿದರೂ ರಾಜ್ಯದಲ್ಲಿ ಎಲ್ಲೂ ಒಂದೂ ದಂಗೆ ನಡೆದಿಲ್ಲವೆಂಬುದು ಗಮನಾರ್ಹ. ಎಲ್ಲಾ ಬಣಗಳ ಅಕಾಲಿ ಮುಖಂಡರು ಸಿಖ್ಖರ ಈ ಆರೋಗ್ಯಕರ ಭಾವನೆಗಳನ್ನು ಒಗ್ಗೂಡಿಸ ಬೇಕು.ಉಗ್ರಗಾಮಿಗಳ ಬೆದರಿಕೆಗೆ ತಲೆ ಬಾಗಿಸದೆ, ತಮ್ಮ ಜವಾಬ್ದಾರಿಯನ್ನು ಅರಿಯಬೇಕು.

ಅತ್ತ ರಾಜ್ಯಪಾಲ ಸಿದ್ಧಾರ್ಥ ಶಂಕರ್‌ರಾಯ್ ಕೂಡಾ ಪಂಜಾಬಿನ ಸಮಸ್ಯೆಯ ಆಳವನ್ನು ಅರಿತಂತೆ ಕಾಣಿಸುತ್ತಿಲ್ಲ. ಜನ ಉಗ್ರಗಾಮಿಗಳನ್ನು ಬೆಂಬಲಿಸದಿದ್ದರೂ ಕೇಂದ್ರದ ಸರ್ಕಾರದ ವಿರುದ್ಧ ಏಕೆ ದೊಡ್ಡದೊಂದು ದ್ವೇಷ ಬೆಳೆಯುತ್ತಿದೆ ಎಂಬುದು ಅವರಿಗೆ ಅರ್ಥವಾಗುತ್ತಿಲ್ಲ. ಉಗ್ರಗಾಮಿಗಳ ವಿರುದ್ಧ ಪಂಜಾಬಿನ ಜನತೆಯನ್ನು ಜಾಗೃತಗೊಳಿಸಲು ಅವರಿಗೇಕೆ ಸಾಧ್ಯವಾಗುತ್ತಿಲ್ಲ? ಕಾಂಗ್ರೆಸ್ಸಿಗೇಕೆ ಈ ಅಪಾಯದ ವಿರುದ್ಧ ಹೋರಾಡಲು ಆಗುತ್ತಿಲ್ಲ?

ರಾಜಕೀಯ ಪರಿಹಾರ

ಜನತೆಯ ನಿಷ್ಕ್ರಿಯತೆಗೆ ಕಾರಣ ಕಳೆದ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರ ಪಂಜಾಬೀ ಜನತೆಯ ಬೇಡಿಕೆಗಳಿಗೆ ನ್ಯಾಯ ಒದಗಿಸಿಲಿಲ್ಲ ಎಂಬ ಭಾವನೆ ಬೇರೂರಿದೆ. ಎರಡು ವರ್ಷಗಳ ನಂತರವೂ ಜೋಧಪುರದ ಬಂಧಿತರನ್ನೇಕೆ ಬಿಡುಗಡೆ ಮಾಡಿಲ್ಲವೆಂಬ ಪ್ರಶ್ನೆಗೆ ರಾಯ್ ಮತ್ತು ಕೇಂದ್ರದ ಮುಖಂಡರು ಉತ್ತರಿಸ ಬೇಕಾಗಿದೆ. ಪಂಜಾಬ್ ಒಪ್ಪಂದದ ಒಂದಾದರೂ ಪ್ರಮುಖ ಅಂಶವನ್ನು ಸಮಯಕ್ಕೆ ಸರಿಯಾಗಿ ಅನುಷ್ಠಾನಕ್ಕೆ ತಂದಿಲ್ಲವೇಕೆ ಎಂಬುದಕ್ಕೂ ಉತ್ತರಿಸ ಬೇಕಾಗಿದೆ. ಸಾವಿರ ಸಾವಿರ ಸಂಖ್ಯೆಯಲ್ಲಿ ಸರ್ಕಾರವೇ ಮುದ್ರಿಸಿದ ಒಪ್ಪಂದದ ಒಕ್ಕಣಿಕೆ ಬಹಳ ಸ್ಪಷ್ಟವಾಗಿಯೇ ಇತ್ತು ಆದರೂ ಒಂದಾದಮೇಲೊಂದು ನೇಮಿಸಲ್ಪಟ್ಟ ಆಯೋಗಗಳು ತಮಗೆ ವಿಧಿಸಿದ ಕೆಲಸದ ಬದಲು ಬೇರೆ ವಿಷಯಗಳ ಮೇಲಷ್ಟೇ ಏಕೆ ತೀರ್ಪು ನೀಡಿದವು? ಈ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡಿದಷ್ಟೇ ಪಂಜಾಬಿನ ಸಮಸ್ಯೆಗೆ ಪರಿಹಾರದ ಸುಳಿವು ಸಿಗಬಲ್ಲುದು.

ಬಿ.ಜೆ.ಪಿ.ಗಂತೂ ಆರಂಭದಿಂದಲೂ ಕಾಣುತ್ತಿರುವುದು ಒಂದೇ ಪರಿಹಾರ–ಪಂಜಾಬಿನಲ್ಲಿ ಮಿಲಿಟರಿ ನಿಲ್ಲಿಸುವುದು ಮತ್ತು ಒಂದು ಭದ್ರತಾ ಪಟ್ಟಿಯ ರಚನೆ, ಸಿಖ್ಖ ಜನ ಸಮೂಹಗಳನ್ನು ಅಣಿ ನೆರೆಸುವ ಉದ್ದೇಶವೇ ಅವರಿಗಿದ್ದಂತಿಲ್ಲ. ಬದಲಿಗೆ ರಾಜ್ಯದ ಜನಗಳ ನಡುವೆ ಮತ್ತಷ್ಟು ಕಂದಕ ಏರ್ಪಡಿಸಿ ರಾಜಕೀಯ ಲಾಭ ಪಡೆಯುವುದೇ ಅದರ ಉದ್ದೇಶವಿದ್ದಂತಿದೆ.

ಅಕಾಲಿದಳ, ಬಿ.ಜೆ.ಪಿ. ಮತ್ತು ಕೇಂದ್ರ ಸರ್ಕಾರ ಒಂದು ಮುಖ್ಯ ಅಂಶವನ್ನು ಮರೆಯುತ್ತವೆ. ಅದೆಂದರೆ ಸಾಮ್ರಾಜ್ಯಶಾಹಿಗಳ ಪಾತ್ರ. ಬಂಧಿತ ಉಗ್ರಗಾಮಿಗಳ ಹೇಳಿಕೆಗಳಿಂದ ಇದು ಸ್ಪಷ್ಟಗೊಂಡಿದೆ. ಈ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಎಡಶಕ್ತಿಗಳು ಹಲವಾರು ಬಲಿದಾನಗಳನ್ನು ನೀಡಿ ನಡೆಸುತ್ತಿರುವ ಪ್ರಚಾರ ಪ್ರಕ್ಷೋಭೆ ಹೆಮ್ಮೆಯ ವಿಷಯ. ಇದಕ್ಕೆ ಜನತೆಯಿಂದ ಉತ್ತಮ ಪ್ರತಿಕ್ರಿಯೆಯೂ ದೊರೆಯುತ್ತಿದೆ.

ಪಂಜಾಬಿನ ಪರಿಸ್ಥಿತಿ ಕೇವಲ ಆ ರಾಜ್ಯದ ಜನತೆಗಷ್ಟೇ ಆತಂಕವುಂಟು ಮಾಡಿಲ್ಲ, ಇಡೀ ದೇಶದ ಮೇಲೂ ಅದರ ಪರಿಣಾಮ ಬೀರುತ್ತದೆ. ಉಗ್ರಗಾಮಿಗಳ ವಿರುದ್ಧ ಜನತೆಯನ್ನು ಸಕ್ರಿಯಗೊಳಿಸಿ, ಪಂಜಾಬಿನ ಜನತೆಯಲ್ಲಿ ಐಕ್ಯತೆಯನ್ನು ಮತ್ತೆ ಮೂಡಿಸುವ ರಾಜಕೀಯ ಪರಿಹಾರವೊಂದನ್ನು ಕೇಂದ್ರ ಸರ್ಕಾರ ದೇಶದ ಮುಂದಿಡಬೇಕು ಕೇಂದ್ರ ಸರ್ಕಾರ ಅದನ್ನರಿಯುವಂತೆ ಮಾಡಲು ದೇಶದ ಎಲ್ಲಾ ರಾಜಕೀಯ ಶಕ್ತಿಗಳು ಮುಂದಾಗಬೇಕು.

ಬೀಡಿ ಕಾರ್ಮಿಕರ ಸಭೆ

ಕುಪ್ಪೆ ಪದವು ಪ್ರದೇಶ ಬೀಡಿ ಕಾರ್ಮಿಕರ ಸಂಘದ ಆಶ್ರಯದಲ್ಲಿ ಬಂಟ್ವಾಳ ತಾಲ್ಲೋಕಿನ ಮಿಯಾಲ ಪ್ರದೇಶ ಬೀಡಿ ಕಾರ್ಮಿಕ ಸಭೆ ಸೆ. 20ರಂದು ಕಾ. ಎಂಕಪ್ಪ ಮಲೆತ್ತಾಯರವರ ಅಧ್ಯಕ್ಷತೆಯಲ್ಲಿ ಜರುಗಿತು.

ಕುಪ್ಪೆ ಪದವು ಬೀಡಿ ಯೂನಿಯನ್ ಕಾರ್ಯದರ್ಶಿ ಕಾ.ವಾಸುದೇವ ಆಚಾರಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಸಭೆಯು ಕಾ. ಎಂಕಪ್ಪ ಮಲೆತ್ತಾಯ(ಕಾರ್ಯದರ್ಶಿ)ರಮೇಶ್ ಶೆಟ್ಟಿ ಹೊನ್ನಯಗೌಡ (ಜೊತೆ ಕಾರ್ಯದರ್ಶಿಗಳು) ಯವರನ್ನೊಳಗೊಂಡ 11 ಮಂದಿಯ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಅಸ್ಸಾಂ ಸರ್ಕಾರ : ಎಂತಹದು ?

– ಕಾ|| ಇ. ಎಂ. ಎಸ್.

ಇತ್ತೀಚೆಗೆ ಅಸ್ಸಾಂಗೆ ಭೇಟಿ ನೀಡಿದ ಕಾ. ಇ. ಎಂ. ಎಸ್. ನಂತರ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಅಸ್ಸಾಂ ಸರ್ಕಾರದ ಅಲ್ಪಸಂಖ್ಯಾತ ವಿರೋಧಿ ನಿಲುವನ್ನು ಖಂಡಿಸಿದ್ದಾರೆ.

ಅಸ್ಸಾಂ ಸರ್ಕಾರದ 20 ತಿಂಗಳುಗಳ ಆಡಳಿತವು ಅಲ್ಲಿನ ಜನತೆಯನ್ನು ಒಗ್ಗೂಡಿಸುವ ಬದಲು ಅವರಲ್ಲಿ ಒಡಕುಂಟು ಮಾಡುತ್ತಿರುವುದನ್ನು ತೋರಿಸಿದೆ. ಈ ರಾಜ್ಯದಲ್ಲಿ ಅಸ್ಸಾಮಿಗಳಲ್ಲದ ಜನ ಅತ್ಯಂತ ಪ್ರಬಲ ಅಲ್ಪಸಂಖ್ಯಾತರಾಗಿದ್ದಾರೆ. ಅಲ್ಪಸಂಖ್ಯಾತರಿಗೆ ತೋರಿಸುತ್ತಿರುವ ಭೇದ ಭಾವನೆಯೇ ಎಲ್ಲಾ ತೊಂದರೆಗಳಿಗೂ ಕಾರಣವಾಗಿದೆ. ಈ ಭೇದವನ್ನು ತೊಡೆದು ಬಹುಸಂಖ್ಯಾತರನ್ನು ಮತ್ತು ಅಲ್ಪಸಂಖ್ಯಾತರನ್ನು ಸಮಾನವಾಗಿ ಪರಿಗಣಿಸದಿದ್ದಲ್ಲಿ ಸರ್ಕಾರವು ಒಳ್ಳೆಯ ಆಡಳಿತವನ್ನು ನೀಡುವುದಾಗಲೀ ಅಥವಾ ರಾಷ್ಟ್ರದ ರಾಜಕೀಯದಲ್ಲಿ ಪರಿಣಾಮಕಾರಿ ಪಾತ್ರ ವಹಿಸುವುದಾಗಲೀ ಸಾಧ್ಯವಾಗುವುದಿಲ್ಲ ಎಂಬುದಾಗಿ ಕಾ. ಇ. ಎಂ. ಎಸ್. ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ವಿಷಯದಲ್ಲಿ ಅಸ್ಸಾಂನ ಎ.ಜಿ.ಪಿ. ಪಕ್ಷವು ಪ್ರಾದೇಶಿಕ ಪಕ್ಷಗಳೆಂದು ಹೇಳಿಕೊಳ್ಳುವ ಇತರ ಪಕ್ಷಗಳಿಗಿಂತ ಭಿನ್ನವಾಗಿದೆ. ಜಮ್ಮು ಕಾಶ್ಮೀರದ ನ್ಯಾಶನಲ್ ಕಾನ್‌ಫರೆನ್ಸ್ ಆಗಲಿ, ತಮಿಳುನಾಡಿನ ಎ.ಡಿ.ಎಂ.ಕೆ. ಆಗಲೀ ಆಂಧ್ರ ಪ್ರದೇಶದ ತೆಲುಗುದೇಶಂ ಆಗಲೀ ಅವು ಪ್ರಾದೇಶಿಕ ಪಕ್ಷವಾಗಿದ್ದರೂ ಕೂಡ ಅವು ತಂತಮ್ಮ ರಾಜ್ಯಗಳಲ್ಲಿ ಯಾವುದೇ ಒಂದು ಜನ ವಿಭಾಗದ ವಿರುದ್ಧ ನಿಂತಿಲ್ಲ. ಎಲ್ಲಕ್ಕೂ ಹೆಚ್ಚಾಗಿ ಈ ಪಕ್ಷಗಳೆಲ್ಲಾ ರಾಷ್ಟ್ರೀಯ ಐಕ್ಯತೆಯೊಂದಿಗೆ ರಾಜ್ಯದ ಸ್ವಾಯತ್ತತೆಯನ್ನು ಸಂಯೋಗ ಗೊಳಿಸುವ ಮನೋಧರ್ಮವನ್ನು ಹೊಂದಿವೆ.

ಎ. ಜಿ. ಪಿ. ಯ ಅಲ್ಪಸಂಖ್ಯಾತ ವಿರೋಧಿ ನಿಲುವು ರಾಷ್ಟ್ರೀಯವಿರೋಧ ಪಕ್ಷಗಳ (ಮೇಲೆ ಹೇಳಿದ ಪ್ರಾದೇಶಿಕ ಪಕ್ಷಗಳನ್ನೊಳಗೊಂಡಂತೆ) ಒಮ್ಮತಾಭಿಪ್ರಾಯಕ್ಕೆ ತದ್ವಿರುದ್ಧವಾಗಿದೆ. ರಾಜ್ಯದ ಜನತೆಯ ಐಕ್ಯತೆ ಮತ್ತು ಸಮಗ್ರತೆಗೆ ನೆರವಾಗುವುದರ ಬದಲು ಎ.ಜಿ.ಪಿ. ಸರ್ಕಾರ ರಾಜ್ಯದ ಒಳಗಿನ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಐಕ್ಯತೆಯನ್ನು ಭಂಗಪಡಿಸಲು ನೆರವಾಗುತ್ತಿದೆ.

ಈಗ ಸರ್ಕಾರ ನಡೆಸುತ್ತಿರುವ ಎ. ಜಿ. ಪಿ. ಗೂ ಮತ್ತು ಇವರೇ ನಡೆಸಿದ ಹಿಂದಿನ ಚಳವಳಿಗೂ ತುಂಬಾ ವ್ಯತ್ಯಾಸವಿರುವುದು ನಿಜ. ಚಳವಳಿಗಾರರಾಗಿದ್ದಾಗ ಇವರಿಗೆ ಅಖಿಲಭಾರತದ ದೃಷ್ಟಿಕೋನವಿರಲಿಲ್ಲವಾದರೂ ಈಗ ಅಸ್ಸಾಂ ಭಾರತದ ಒಂದು ಅವಿಭಾಜ್ಯ ಅಂಗವೆಂಬುದನ್ನು ಸರ್ಕಾರ ನಡೆಸುತ್ತಿರುವವರು ಒಪ್ಪಿಕೊಂಡಿದ್ದಾರೆ. ಅಖಿಲ ಭಾರತ ಪಕ್ಷಗಳು ಅಸ್ಸಾಮಿನಲ್ಲಿ ಅಸಂಬದ್ಧವಾದವುಗಳೆಂದು ಚಳುವಳಿ ನಡೆಸುತ್ತಿದ್ದಾಗ ಹೇಳಿದಂತೆ ಈಗ ಇವರು ಹೇಳುತ್ತಿಲ್ಲ. ಅಲ್ಲದೆ ಎ.ಜಿ.ಪಿ. ಸರ್ಕಾರ ಈಗ ರಾಷ್ಟ್ರೀಯ ಮಟ್ಟದಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಜೊತೆ ವ್ಯವಹರಿಸುತ್ತಿದೆ. ಜುಲೈನಲ್ಲಿ ನಡೆದ ರಾಷ್ಟ್ರಪತಿ ಚುನಾವಣೆಯಲ್ಲಿ ಎ. ಜಿ. ಪಿ. ವಿರೋಧ ಪಕ್ಷಗಳ ಅಭ್ಯರ್ಥಿಗೆ ಮತ ನೀಡಿತು.

ರಾಷ್ಟ್ರ ರಾಜಕಾರಣದ ಮುಖ್ಯ ಪ್ರವಾಹದಲ್ಲಿ ಸೇರುವಂತೆ ಮಾಡುವ ಈ ಬೆಳವಣಿಗೆ ಸ್ವಾಗತಾರ್ಹವೆನಿಸಿದರೂ ಅದು ವಿದೇಶಾಂಗ ನೀತಿ, ಸಾಮಾಜಿಕ, ಆರ್ಥಿಕ ಬೆಳವಣಿಗೆಗಳ ಹಾದಿ, ರಾಷ್ಟ್ರೀಯ ಐಕ್ಯತೆಗೆ ಉಂಟಾಗಿರುವ ಆತಂಕ ಮುಂತಾದ ಪ್ರಶ್ನೆಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು ಇನ್ನು ಸರಿಪಡಿಸಿಕೊಂಡಿಲ್ಲ.

ರಾಷ್ಟ್ರೀಯ ಐಕ್ಯತೆ ಪ್ರಶ್ನೆ ಕುರಿತಂತೆ ವಾಸ್ತವವಾಗಿ ಎ. ಜಿ. ಪಿ. ಯ ಅಲ್ಪಸಂಖ್ಯಾತ ವಿರೋಧಿ ನಿಲುವನ್ನು ರಾಷ್ಟ್ರೀಯ ಐಕ್ಯತೆಗಾಗಿ ಹೋರಾಡುವ ಯಾವುದೇ ರಾಷ್ಟ್ರೀಯ ಪಕ್ಷ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬುದಾಗಿ ಕಾ. ಇ. ಎಂ. ಎಸ್. ಅಭಿಪ್ರಾಯಪಟ್ಟಿದ್ದಾರೆ. ●

ಪ. ಬಂಗಾಳ

ಎಡರಂಗಕ್ಕೆ ಪತ್ರಿಕೆಗಳಿಂದ ಪ್ರಶಂಸೆ

ಜಾತ್ಯಾತೀತ ನೀತಿಗೆ ಮತ್ತು ಕೋಮು ಗಲಭೆಯನ್ನು ತಪ್ಪಿಸಲು ಸಿ.ಪಿ.ಐ. (ಎಂ) ನೇತೃತ್ವದ ಎಡರಂಗ ಸರ್ಕಾರ ತೋರಿಸಿರುವ ಬದ್ಧತೆಗಾಗಿ ಪತ್ರಿಕೆಗಳು ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿವೆ. ಸೆಪ್ಟೆಂಬರ್‌ನ ಆದಿ ಭಾಗದಲ್ಲಿ ಮೊಹರಂ ಹಬ್ಬದ ಸಂದರ್ಭದಲ್ಲಿ ಕೋಮು ಗಲಭೆಗಳು ಸ್ಫೋಟಗೊಳ್ಳುವ ಸಾಧ್ಯತೆಯನ್ನರಿತ ಎಡರಂಗ ಸರ್ಕಾರ ಬಿಗಿ ಕ್ರಮಗಳನ್ನು ಅನುಸರಿಸಿ ಅತ್ಯಂತ ಸಮಯೋಚಿತವಾಗಿ ವರ್ತಿಸಿ ಆಗಬಹುದಾದ ಭಾರಿ ಪ್ರಮಾಣದ ಅನಾಹುತಗಳನ್ನು ತಪ್ಪಿಸಿತು.

ಎಡರಂಗ ಸರ್ಕಾರದ ಮೇಲೆ ಬಯ್ಗುಳದ ಮಳೆ ಸುರಿಸುವ ಅನೇಕಪತ್ರಿಕೆಗಳು ಕೂಡ ಈ ವಿಷಯದಲ್ಲಿ ಸರ್ಕಾರದ ಕ್ರಮವನ್ನು ಶ್ಲಾಘಿಸಿ ಬರೆದಿವೆ.

ಉರ್ದು ದಿನ ಪತ್ರಿಕೆ ಇಖ್ರಾ ಸೆ.7ರ ಸಂಚಿಕೆಯಲ್ಲಿ ಮುಖಪುಟದ ಪ್ರಮುಖ ಸುದ್ದಿಯನ್ನಾಗಿ ವಿಷಯವನ್ನು ಅಚ್ಚು ಮಾಡಿತು. ಅದು ಸರ್ಕಾರದ ದಕ್ಷತೆಯನ್ನು, ಪೊಲೀಸ್ ಕಮಿಷನರ್ ಅವರನ್ನು ಪ್ರಶಂಸಿಸಿದೆ. ಮತ್ತೊಂದು ಉರ್ದುದಿನಪತ್ರಿಕೆ ಅಖಬಾರೆಮಶ್ರಿಖ್ ಕೋಮು ಗಲಭೆಗೆ ಪ್ರಚೋದಿಸುವವರನ್ನು ನಿರ್ದಾಕ್ಷಿಣ್ಯವಾಗಿ ದಮನ ಮಾಡಲಾಗುವುದೆಂಬ ಮುಖ್ಯ ಮಂತ್ರಿಯವರ ಎಚ್ಚರಿಕೆಗೆ ತನ್ನ ಸಂತಸ ವ್ಯಕ್ತ ಪಡಿಸಿದೆ. ಆಜಾದ್ ಹಿಂದ್ ಎಂಬ ಮತ್ತೊಂದು ಉರ್ದು ದಿನ ಪತ್ರಿಕೆ ಮೊಹರಂ ಮೆರವಣಿಗೆಗೆ ಸೂಕ್ತ ಪೊಲೀಸ್ ರಕ್ಷಣೆ ನೀಡಿದ್ದರಿಂದಾಗಿಯೇ ನಡೆಯಬಹುದಾಗಿದ್ದ ಭಾರೀ ಕೋಮು ಗಲಭೆ ಸಂಭವಿಸಲಿಲ್ಲವೆಂದು ಬರೆದಿದೆ.

ಕಮ್ಯುನಿಸ್ಟ್ ವಿರೋಧಿ ಪ್ರಚಾರಕ್ಕೆ ಹೆಸರಾದ 'ದಿ ಟೆಲಿಗ್ರಾಫ್' ಪತ್ರಿಕೆ ಎಡರಂಗ ಸರ್ಕಾರವನ್ನು ಮುಖ್ಯ ಮಂತ್ರಿ ಜ್ಯೋತಿಬಸು ಅವರನ್ನು ಮುಕ್ತ ಕಂಠದಿಂದ ಪ್ರಶಂಸಿಸಿದೆ.

ಸ್ಟೇಟ್ಸ್‌ಮನ್ ಪತ್ರಿಕೆಯಂತೂ ದೀರ್ಘವಾದ ಸಂಪಾದಕೀಯದ ಮೂಲಕ ಎಡರಂಗ ಸರ್ಕಾರದ ದಕ್ಷತೆಯನ್ನು ಹೊಗಳಿದೆ. ಸರ್ಕಾರದ ಜಾತ್ಯಾತೀತ ನೀತಿಯಿಂದಾಗಿಯೇ ಕಳೆದ ವರ್ಷ ಭಾರೀ ವಿವಾದ ಎಬ್ಬಿಸಿದ ರಾಮ ಜನ್ಮ ಭೂಮಿ ಪ್ರಶ್ನೆ ಕುರಿತಂತೆ ಉತ್ತರ ಪ್ರದೇಶ ಮತ್ತಿತರ ಅನೇಕ ರಾಜ್ಯಗಳಲ್ಲಿ ಗಲಭೆಗಳು ನಡೆದರೂ ಪ.ಬಂಗಾಳದಲ್ಲಿ ಸಂಪೂರ್ಣ ಕೋಮು ಸೌಹಾರ್ದತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಅಲ್ಲದೆ ಈಚೆಗೆ ಮೀರತ್ ಮತ್ತು ದೆಹಲಿಗಳಲ್ಲಿ ನಡೆದ ಗಲಭೆಗಳಿಗೆ ಪ.ಬಂಗಾಳದಲ್ಲಿ ಯಾವುದೇ ಪ್ರತಿಕ್ರಿಯೆ ಉಂಟಾಗಲಿಲ್ಲ ಎಂಬುದಾಗಿ ಅಭಿಪ್ರಾಯ ಪಟ್ಟಿದೆ. ○

ಫಿಜಿಯಲ್ಲಿ 2ನೇ ಸೇನಾ ಕ್ರಾಂತಿ

ಸೇನೆಯು ಮತ್ತೊಮ್ಮೆ ಫಿಜಿಯಲ್ಲಿ ಅಧಿಕಾರ ವಶಪಡಿಸಿಕೊಂಡಿರುವುದಕ್ಕೆ ಸಿ. ಪಿ. ಐ. (ಎಂ) ನ ಪೊಲಿಟ್‌ಬ್ಯೂರೋ ತನ್ನ ದಿಗ್ಭ್ರಮೆಯನ್ನು ವ್ಯಕ್ತಪಡಿಸಿದೆ. ಒಡಂಬಡಿಕೆಯ ನಂತರವೂ ಅಲ್ಲಿ ಮತ್ತೊಮ್ಮೆ ಕ್ಷಿಪ್ರಕ್ರಾಂತಿಯಾಗಿರುವುದನ್ನು ನೋಡಿದರೆ, ಈ ದ್ವೀಪದಲ್ಲಿ ಯಾವುದೇ ರೂಪದ ಪ್ರಜಾಸತ್ತಾತ್ಮಕ ಆಡಳಿತಕ್ಕೆ ಅಲ್ಲಿನ ಸೇನೆ ಸಂಪೂರ್ಣ ವಿರೋಧವಾಗಿರುವುದು ಸ್ಪಷ್ಟಗೊಳ್ಳುತ್ತಿದೆ. ಪೆಸಿಫಿಕ್ ಪ್ರದೇಶದಲ್ಲಿ ಅಮೇರಿಕ ಯೋಜಿಸಿರುವ ಮಿಲಿಟರಿ ತಂತ್ರದ ಬಾಲವಾಗುವ ಮಿಲಿಟರಿ ಸರ್ವಾಧಿಕಾರಕ್ಕೆ ದೇಶವನ್ನು ನೂಕುವ ಒಂದು ಸ್ಪಷ್ಟ ಪ್ರಯತ್ನ ಇದಾಗಿದೆ. ಅಲ್ಲದೆ ಬಹುಸಂಖ್ಯಾತರ ಮೇಲೆ ಅಲ್ಪಸಂಖ್ಯಾತರ ಆಡಳಿತವನ್ನು ಹೇರುವ ಪ್ರಯತ್ನ ಇದಾಗಿದ್ದು ಇದರಿಂದ ಭಾರತೀಯ ಮೂಲದ ಫಿಜಿಯನ್ನರಿಗೂ ಮತ್ತು ಮಲೇಶಿಯನ್ ಮೂಲದವರಿಗೂ ನಡುವೆ ದೀರ್ಘಕಾಲಿಕ ಉದ್ವಿಗ್ನ ಪರಿಸ್ಥಿತಿಯನ್ನು ಉಂಟು ಮಾಡುತ್ತದೆ.

ಫಿಜಿಯ ಇತ್ತೀಚಿನ ಬೆಳವಣಿಗೆಗಳ ಬೆನ್ನ ಹಿಂದೆ ಅಮೇರಿಕದ ಕೈವಾಡವಿರುವುದು ಎದ್ದು ಕಾಣುತ್ತಿದೆ. ಫಿಜಿಯಲ್ಲಿ ಪ್ರಜಾಸತ್ತಾತ್ಮಕ ಆಡಳಿತವನ್ನು ಪುನರ್‌ಸ್ಥಾಪನೆ ಮಾಡಿದ್ದರಿಂದಾಗಿ, ನ್ಯೂಕ್ಲಿಯರ್ ಮಿಲಿಟರಿ ನೆಲೆಯನ್ನು ಸ್ಥಾಪಿಸುವ ಅಮೇರಿಕದ ಯೋಜನೆಗೆ ಪ್ರತಿಕೂಲ ಪರಿಸ್ಥಿತಿಯೊದಗಿತ್ತು. ಬಾವದ್ರ ನೇತೃತ್ವದ ಪ್ರಜಾಪ್ರಭುತ್ವ ಸರ್ಕಾರ ಅಲಿಪ್ತ ವಿದೇಶಾಂಗ ನೀತಿಯನ್ನು ತಾನು ಅನುಸರಿಸುವುದಾಗಿ ಘೋಷಿಸಿತ್ತು. ಮೊದಲ ಕ್ಷಿಪ್ರಕ್ರಾಂತಿಯನ್ನು ಬೆಂಬಲಿಸಿದ ಬ್ರಿಟಿಷರ ಖಂಡನೀಯ ಕೃತ್ಯವು ಸೇನೆಯನ್ನು ಮತ್ತು ಈಗಿನ ಕ್ಷಿಪ್ರಕ್ರಾಂತಿಯ ನಾಯಕ ಕರ್ನಲ್ ರಬೂಕರವರನ್ನು ಮಾತ್ರವೇ ಬಲಪಡಿಸಿತು. ಈಗಿನ ಬೆಳವಣಿಗೆಯ ಬಗ್ಗೆ ತೋರಿಕೆಯ ಕಳವಳ ವ್ಯಕ್ತಪಡಿಸಿರುವ ಬ್ರಿಟನ್ ವಾಸ್ತವವಾಗಿ ಅಮೆರಿಕದ ಮಿಲಿಟರಿ ಯೋಜನೆಗಳ ಏಜೆಂಟನಾಗಿ ವರ್ತಿಸುತ್ತಿದೆ. ಸಾಮ್ರಾಜ್ಯಶಾಹಿ ಮಿಲಿಟರಿ ಯೋಜನೆಗಳು ಶಾಂತಿಪ್ರಿಯ ಫಿಜಿಯನ್ನರನ್ನು ದುರಂತಕ್ಕೆ ತಳ್ಳಿ ಅವರ ಮೂಲಭೂತ ಸ್ವಾತಂತ್ರ್ಯವನ್ನೇ ನಿರಾಕರಿಸುತ್ತಿವೆ.

ಪ್ರಜಾಪ್ರಭುತ್ವವನ್ನು ಮರಳಿ ಗಳಿಸುವತ್ತ ಹೋರಾಡುತ್ತಿರುವ ಫಿಜಿ ಜನತೆಗೆ ಸಿ. ಪಿ. ಐ. [ಎಂ] ನ ಪೊಲಿಟ್ ಬ್ಯೂರೋ ತನ್ನ ಸೌಹಾರ್ದತೆಯನ್ನು ವ್ಯಕ್ತಪಡಿಸಿದೆ. ಅಮೆರಿಕದ ಮಿಲಿಟರಿ ನೆಲೆಯಾಗಿಸಲು ಫಿಜಿಯನ್ನು ಪರಿವರ್ತಿಸುವ ಸಾಮ್ರಾಜ್ಯಶಾಹಿಗಳ ಯತ್ನವನ್ನು ಮಣ್ಣುಗೂಡಿಸಲು ಫಿಜಿಯ ಪ್ರಜಾಸತ್ತಾತ್ಮಕ ಶಕ್ತಿಗಳು ತಮ್ಮ ಬಲವನ್ನು ಹೆಚ್ಚಿಸಿಕೊಳ್ಳುತ್ತವೆಂಬ ಆಸೆಯನ್ನು ಪಿ. ಬಿ. ವ್ಯಕ್ತಪಡಿಸಿದೆ. ○

ಬ್ರಿಟನ್ನಿನ ಗಣಿ ಕಾರ್ಮಿಕರ ಹೋರಾಟ

1985 ರಲ್ಲಿ ಆರು ತಿಂಗಳ ಕಾಲ ಧೀರ್ಘಹೋರಾಟ ನಡೆಸಿದ ಬ್ರಿಟನ್ನಿನ ಕಲ್ಲಿದ್ದಲು ಗಣಿ ಕಾರ್ಮಿಕರು ಮತ್ತೊಮ್ಮೆ ಹೋರಾಟಕ್ಕೆ ಅಣಿಯಾಗುತ್ತಿದ್ದಾರೆ. ಕಲ್ಲಿದ್ದಲು ಗಣಿ ಮಂಡಳಿಯು ಹೇರಲಿರುವ ಹೊಸ ಶಿಸ್ತು ಸಂಹಿತೆಯ ವಿರುದ್ಧ ಈ ಹೋರಾಟ. ಹೊಸ ಸಂಹಿತೆಯ ಕುರಿತು ಮತಸಂಗ್ರಹ ನಡೆದಾಗ ಆಗಸ್ಟ 24ರಂದು ಶೇ. 77.5 ರಷ್ಟು ಕಾರ್ಮಿಕರು ಅದನ್ನು ವಿರೋಧಿಸಿದರು. ಕಾರ್ಮಿಕರ ಯಾವುದೇ ಪ್ರಮುಖ ಬೇಡಿಕೆಯನ್ನು ಅಂಗೀಕರಿಸಲು ಆಡಳಿತ ವರ್ಗ ಒಪ್ಪದಿದ್ದ ಕಾರಣ ಸೆಪ್ಟೆಂಬರ್ ಮಧ್ಯಭಾಗದಲ್ಲಿ ಆರಂಭವಾಗಿದ್ದ ಮಾತುಕತೆಗಳು ನೆನೆಗುದಿಗೆ ಬಿದ್ದಿತ್ತು. ಇದರ ಪರಿಣಾಮವಾಗಿ ಯಾರ್ಕ್‌ಷೈರ್‌ನ 34000 ಕಾರ್ಮಿಕರು ಓವರ್ ಟೈಂ ಕೆಲಸವನ್ನು ಸೆಪ್ಟೆಂಬರ್ 14 ರಿಂದ ನಿಲ್ಲಿಸಿದ್ದಾರೆ.

ಅಮೇರಿಕಾದ ಸಾವಿನ ದೂತರು

ಅಮೇರಿಕಾದ ಶಸ್ತ್ರಾಸ್ತ್ರ ತಯಾರಿಕಾ ಕಂಪೆನಿಗಳು ಅಧಿಕ ಲಾಭವನ್ನು ಸಂಪಾದಿಸುತ್ತಿವೆ. ಈ ಕಂಪೆನಿಗಳಲ್ಲಿ ಹಣ ಹೂಡಿರುವವರಿಗೆ 1974 ರಿಂದ 1984ರ 10 ವರ್ಷಗಳ ಅವಧಿಗೆ ನೀಡಿರುವ ಸರಾಸರಿ ಶೇಖಡಾವಾರು ಲಾಭವೇ ಇದಕ್ಕೆ ನಿದರ್ಶನವಾಗಿದೆ. ಈ ವಿವರಗಳನ್ನು ಫಾರ್ಚೂನ ಪತ್ರಿಕೆ ಪ್ರಕಟಿಸಿದೆ. 500 ಬೃಹತ್ ಕೈಗಾರಿಕಾ ಕಾರ್ಪೊರೇಶನುಗಳ ಮಧ್ಯಮ ದರ ಶೇ.18.65 ಇತ್ತು. 17 ಏರೋಸ್ಪೇಸ್ ಕಂಪೆನಿಗಳ ದರವಂತೂ ಶೇ. 26.76 ಆಗಿದೆ. ಈ ಅಪಾರ ಲಾಭದ ಆಸೆಯಿಂದ ಬಂಡವಾಳಶಾಹಿಗಳು ಭ್ರಷ್ಟಾಚಾರ ಕಳ್ಳತನ, ಕೊಲೆ ಕೊನೆಗೆ ಮಿಲಿಯಾಂತರ ಅಮೇರಿಕನ್ ಪ್ರಜೆಗಳನ್ನು ಬಲಿ ಕೊಡಲು ತಯಾರಾಗುತ್ತಾರೆ. ಸೋವಿಯೆತ್ ಯೂನಿಯನ್ ಮತ್ತು ಸಮಾಜವಾದಿ ಜಗತ್ತನ್ನು ನಾಶಮಾಡಿ ಅಮೇರಿಕಾದಲ್ಲಿ ಮಾತ್ರ ಜೀವಗಳು ಉಳಿಯುವಂತೆ ಮಾಡಲು ಅಮೇರಿಕವನ್ನು ರಕ್ಷಿಸುವ ಹುಚ್ಚು ಆಸೆಯನ್ನು ಇರಿಸಿ ಕೊಂಡಿದ್ದಾರೆ. ○

ಅಣ್ವಸ್ತ್ರ ಒಪ್ಪಂದ – ಸ್ವಾಗತಾರ್ಹ ಕ್ರಮ

ಸೋವಿಯತ್ ಯೂನಿಯನ್ ಮತ್ತು ಅಮೇರಿಕ ದೇಶಗಳು ಮಧ್ಯಮ ವ್ಯಾಪ್ತಿಯ ಅಂತರ ಸಂಪರ್ಕ ಮತ್ತು ಸಮೀಪಗಾಮೀ ಕ್ಷಿಪಣಿಗಳನ್ನು ನಾಶ ಮಾಡಲು ಒಂದು ಒಪ್ಪಂದಕ್ಕೆ ಸಹಿ ಹಾಕಲು ಪರಸ್ಪರ ತಾತ್ವಿಕವಾಗಿ ಒಪ್ಪಿಕೊಂಡಿವೆ. ಅಲ್ಲದೆ ಜಿನೇವಾದಲ್ಲಿ ನಡೆದ ನ್ಯೂಕ್ಲಿಯರ್ ಮತ್ತು ಬಾಹ್ಯಾಕಾಶ ಕುರಿತ ಮಾತುಕತೆಯ ಚೌಕಟ್ಟಿನೊಳಗೆ ಅಪಾಯಕಾರಿ ಶಸ್ತ್ರಾಸ್ತ್ರಗಳನ್ನು ಶೇಖಡಾ 50 ರಷ್ಟು ಕಡಿತ ಮಾಡಲು ಸಾಧ್ಯವಾಗುವಂತೆ ಒಂದು ಒಪ್ಪಂದಕ್ಕೆ ಬರಲು ತೀವ್ರ ಪ್ರಯತ್ನ ನಡೆಸಬೇಕೆಂದು ಸಹ ಎರಡೂ ದೇಶಗಳು ಒಮ್ಮತಕ್ಕೆ ಬಂದಿವೆ. ಸೋವಿಯತ್ ವಿದೇಶಾಂಗ ಮಂತ್ರಿ ಎಡ್ವರ್ಡ್ ಷೆವರ್ನಾಡ್ಜೆ ಅಮೇರಿಕದ ಸ್ಟೇಟ್ ಕಾರ್ಯದರ್ಶಿ ಜಾರ್ಜ್ ಷುಲ್ಟ್ಜ ಅವರುಗಳ ನಡುವೆ ಇತ್ತೀಚೆಗೆ ನಡೆದ ಅನೇಕ ಸುತ್ತಿನ ಮಾತುಕತೆಗಳ ನಂತರ ಒಪ್ಪಂದ ಮೇರ್ಪಡಿಸಿಕೊಳ್ಳಲು ಎರಡೂ ದೇಶಗಳು ತೀರ್ಮಾನ ಕೈಗೊಂಡವು.

ಶಸ್ತ್ರಾಸ್ತ್ರ ಸ್ಪರ್ಧೆಯನ್ನು ತಗ್ಗಿಸುವಲ್ಲಿ ಈಗ ನಡೆದಿರುವ ಪ್ರಯತ್ನಗಳು ಒಂದು ಪ್ರಾರಂಭಿಕ ಹೆಜ್ಜೆಯಾಗಿವೆ. ಕೆಲವು ನಿರ್ದಿಷ್ಟ ಶಸ್ತ್ರಗಳನ್ನು ನಾಶಪಡಿಸಲು ಒಪ್ಪಂದವೇರ್ಪಟ್ಟಲ್ಲಿ, ಅದು ನಂತರ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳನ್ನು ಸಂಪೂರ್ಣ ನಾಶ ಮಾಡುವ ಒಂದು ಒಪ್ಪಂದಕ್ಕೆ ದಾರಿಯಾಗಬಹುದಾಗಿದೆ. ಈ ದಿಕ್ಕಿನಲ್ಲಿ ಕಾರ್ಯಾರಂಭ ಮಾಡಲು ಎರಡೂ ದೇಶಗಳು ಶೇ. 50 ರಷ್ಟು ಆಕ್ರಮಣಕಾರೀ ಅಸ್ತ್ರಗಳನ್ನು ಕಡಿತಗೊಳಿಸಲು ತಾವು ಸಿದ್ಧರಿರುವುದಾಗಿ ಪ್ರಕಟಿಸಿವೆ. ಈ ವಿಷಯದ ಕುರಿತು ಅಮೆರಿಕ ಆಸಕ್ತಿ ವಹಿಸಿದ್ದಲ್ಲಿ ಬಹು ಹಿಂದೆಯೇ ಒಪ್ಪಂದವೇರ್ಪಡುವ ಸಾಧ್ಯತೆಯಿತ್ತು.

ಒಪ್ಪಂದಗಳು ಯಶಸ್ವಿಯಾದರೆ ಅದರ ಬಹುಪಾಲು ಯಶಸ್ಸು ಸೋವಿಯತ್ ಯೂನಿಯನ್‌ಗೆ ಸಲ್ಲುತ್ತದೆ.

(6ನೇ ಪುಟ ನೋಡಿ)

REG No. BGW-148 MAG (2) PRB DECR 319/78-79

ಒಂದು ಹೆಜ್ಜೆ ಮುಂದಿಟ್ಟ ವಿ. ಪಿ. ಸಿಂಗ್

(1ನೇ ಪುಟದಿಂದ)

ಬೇಕು ಮತ್ತೆ ಜನತೆಯ ಆದೇಶ ಪಡೆಯ ಬೇಕು ಎಂಬ ಚಳುವಳಿಗೂ ಬಲ ಬಂದಿದೆ. ಮೊದಲಿನಿಂದಲೂ ಸಿ.ಪಿ.ಐ.(ಎಂ) ಈ ಚಳುವಳಿಯ ಜೊತೆಗೂಡಿದೆ.

ಸಚಿವ ಸಂಪುಟದ ಸದಸ್ಯರಾಗಿ–ಎರಡು ವರ್ಷ ಅರ್ಥ ಸಚಿವರಾಗಿ ಕಾಂಗ್ರೆಸ್ಸಿನೊಡನೆ ವಿ.ಪಿ ಸಿಂಗ್‌ರವರ ಹಿಂದಿನ ಸಂಬಂಧ ಅನೇಕರಲ್ಲಿ ಸಂಶಯಕ್ಕೆ ಕಾರಣವಾಗಿದೆ. ರಾಜೀವ್‌ಗಾಂಧಿಯವರು ಅನುಸರಿಸುತ್ತಿರುವ ಆರ್ಥಿಕ ನೀತಿಗೆ ಸಂಬಂಧಿಸಿ ಅವರ ನಿಲುವಿನ ಬಗ್ಗೆ ಒಂದು ವಿಭಾಗದ ಜನರಿಂದ ಪ್ರಶ್ನೆಗೊಳಗಾಗಿದೆ. ಇಂದು ದೇಶಕ್ಕೆ ದೊಡ್ಡ ಬೆದರಿಕೆಯನ್ನೊಡ್ಡಿರುವ ಕೋಮುವಾದ ಹಾಗೂ ರಾಷ್ಟ್ರೀಯ ಐಕ್ಯತೆಯ ಬಗ್ಗೆ ಅವರ ದೃಷ್ಟಿಕೋನದ ಬಗ್ಗೆಯೂ ಪ್ರಶ್ನೆಗಳನ್ನೆತ್ತಲಾಗಿತ್ತು. ವಿ.ಪಿ. ಸಿಂಗ್‌ರವರು ಒಂದು ಭೂಮಾಲಕ ಕುಟುಂಬದಲ್ಲಿಂದ ಬಂದವರಾದ್ದರಿಂದ ಭೂ ಸುಧಾರಣೆ ಹಾಗೂ ಕೃಷಿ ಕಾರ್ಮಿಕರ ಬಗ್ಗೆ ಪ್ರಶ್ನೆಗಳೆದ್ದದ್ದೂ ಸ್ವಾಭಾವಿಕವೇ ಇತ್ತೀಚಿನವರೆಗೂ ನಿರ್ಣಾಯಕವಾದ ಅನೇಕ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಹಾಗೂ ಯಾವುದೇ ಪಕ್ಷವನ್ನು ಇನ್ನೂ ಸ್ಥಾಪಿಸಿಲ್ಲ ಎಂದು ಹೇಳುತ್ತಿದ್ದರು.

ವಿ.ಪಿ. ಸಿಂಗ್ ಹಾಗೂ ಅವರ ಸಹೋದ್ಯೋಗಿಗಳು ಅಕ್ಟೋಬರ್ ಎರಡರಂದು ರೂಪಿಸಿದ "ಜನಮೋರ್ಚಾ" ಈ ಪ್ರಶ್ನೆಗಳಲ್ಲಿ ಕೆಲವಕ್ಕೆ ಉತ್ತರ ನೀಡಿದೆ. ಇದು ಒಂದು ರಾಜಕೀಯ ಪಕ್ಷ ಎಂದು ಹೇಳಿಕೊಳ್ಳದಿದ್ದರೂ ತನ್ನದೇ ಆದ ಬಾವುಟ, ಪ್ರತಿಜ್ಞೆ ಹಾಗೂ ಕ್ರಮಬದ್ಧವಾದ ಸ್ವತ್ವವನ್ನು ಮಾತ್ರವೇ ಅಲ್ಲ, ಒಂದು ರಾಜಕೀಯ ಘೋಷಣೆಯನ್ನೂ ರೂಪಿಸಿದ್ದಾರೆ. ಬಹುಷಃ ಅವರು ತಮಗೆ ಸಂಬಂಧಿಸಿರುವ ಕಾಂಗ್ರೆಸ್ಸಿಗರನ್ನುದ್ದೇಶಿಸಿ ಮಾತನಾಡಬೇಕೆಂದು ಅವರು ಇಚ್ಛಿಸುತ್ತಿರುವಂತೆ ಕಾಣುತ್ತಿದೆ. ನಿಸ್ಸಂಶಯವಾಗಿ ಈ "ಮೋರ್ಚಾ" ರಾಜಕೀಯ ಪಕ್ಷವೊಂದರ ಕಡೆಗೆ ಇಟ್ಟ ಹೆಜ್ಜೆ.

ಈ ಘೋಷಣೆಯಲ್ಲಿ ವಿ.ಪಿ. ಸಿಂಗ್ ಮತ್ತು ಅವರ ಗುಂಪು, ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಬೃಹತ್‌ವಾಣಿಜೋದ್ಯಮಗಳ ಮೇಲೆ ಧಾಳಿ ಮಾಡುವುದರ ಮೂಲಕ ರಾಜೀವ್‌ಗಾಂಧಿಯವರ ಧೋರಣೆಗಳಿಂದ ಪ್ರತ್ಯೇಕಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಸಾರ್ವಜನಿಕ ವಲಯವನ್ನು ಸಮರ್ಥಿಸಿದ್ದಾರೆ. ಈ ಘೋಷಣೆಯಲ್ಲಿ ಭೂಸುಧಾರಣೆಗಳನ್ನು ಜಾರಿ ಮಾಡುವುದನ್ನು ಭೂಹೀನರ, ಅಸಂಘಟಿತ ಕಾರ್ಮಿಕರ ಬಗ್ಗೆ ಕಾಳಜಿಯನ್ನು ಒತ್ತಿಹೇಳುತ್ತಿದ್ದಾರೆ. ಭೂಹೀನ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ವಿರುದ್ಧ ನಡೆಯುತ್ತಿರುವ ಅನ್ಯಾಯದ ವಿರುದ್ಧ ಹೋರಾಡುತ್ತೇವೆಂದು ವಚನ ನೀಡಿದ್ದಾರೆ. ಈ ಘೋಷಣೆ ಕೈಗಾರಿಕಾ ಕಾರ್ಮಿಕರನ್ನೂ ಉದ್ದೇಶಿಸಿದೆ ಹಾಗೂ ಆರ್ಥಿಕ ರಚನೆ ಪ್ರಜಾಸತ್ತಾತ್ಮಕವಲ್ಲದಿದ್ದರೆ, ಸ್ವತಂತ್ರವಲ್ಲದಿದ್ದರೆ ಸ್ವತಂತ್ರ ಪ್ರಜಾಸತ್ತಾತ್ಮಕ ರಾಜಕೀಯ ರಚನೆ (ಅಂದರೆ ಚುನಾಯಿತ ಸರಕಾರಗಳು, ವಿಧಾನ ಸಭೆ, ಲೋಕಸಭೆಗಳು ಐಕ್ಯರಂಗ) ಯೂ ಸಾಧ್ಯವಿಲ್ಲ. ಕೈಗಾರಿಕಾ ಪ್ರಜಾಪ್ರಭುತ್ವ ರಾಜಕೀಯ ಪ್ರಜಾಪ್ರಭುತ್ವದ ಅತಿ ಪ್ರಮುಖ ಅಂಗ ಆದುದರಿಂದ ಕಾರ್ಮಿಕರಿಗೆ ಕೈಗಾರಿಕೆಗಳ ಆಡಳಿತ ನಿರ್ವಹಣೆಯಲ್ಲಿ ಪಾತ್ರವಿರಬೇಕು. ಗುಪ್ತಮತದಾನದ ಮೂಲಕ ಕಾರ್ಮಿಕರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಪದ್ಧತಿ ಇರಬೇಕು ಎಂದು ಈ ಘೋಷಣೆ ಸಾರುತ್ತದೆ.

ಜನ ಸಾಮಾನ್ಯರ ಪ್ರಜಾಸತ್ತಾತ್ಮಕ ಆಸೆ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವುದಕ್ಕೆ ಅವಕಾಶಕೊಡದ ಚುನಾವಣಾ ಪದ್ಧತಿಯ ಸುಧಾರಣೆಗೆ ಈ ಘೋಷಣೆ ಒತ್ತು ನೀಡಿದೆ. ದೊಡ್ಡ ವಾಣಿಜ್ಯೋದ್ಯಮಿಗಳಿಂದ ರಾಜಕೀಯ ಫಂಡ್ ವಸೂಲಿಯಿಂಥ ನಿರ್ಧಾರಗಳನ್ನು ಕೈಗೊಳ್ಳುವುದರಲ್ಲಿ ಈ ದೊಡ್ಡವರ ಹಣದ ಪ್ರಭಾವ ಬಿದ್ದೇ ಬೀಳುತ್ತದೆ. ಇದು ಜನ ಸಮುದಾಯದ ಹಿತಕ್ಕೆ ವಿರುದ್ಧವಾಗಿಯೇ ತೀರುತ್ತದೆ. ಎಂದು ಈ ಘೋಷಣೆ ಒತ್ತಿ ಹೇಳಿದೆ.

ಈ ಘೋಷಣೆ ಕೋಮುವಾದ, ಜಾತೀಯತೆಗಳು ದೇಶದ ಐಕ್ಯತೆಗೆ ಒಡ್ಡಿರುವ ಬೆದರಿಕೆಯ ಬಗ್ಗೆ ಎತ್ತಿ ಹೇಳುತ್ತಾ, ಆರ್ಥಿಕ ಪ್ರಶ್ನೆಗಳ ಮೇಲೆ ಸಾಮೂಹಿಕ ಹೋರಾಟವೇ ಎಲ್ಲಾ ಪ್ರತಿಗಾಮೀ ಛಿದ್ರಕಾರೀ ಶಕ್ತಿಗಳನ್ನು ನುಚ್ಚುನೂರು ಮಾಡುವ ಸಿಡಿಮದ್ದು ಎಂಬ ದೃಷ್ಟಿಕೋನವನ್ನು ನೀಡಿದೆ.

ಈ ಹೇಳಿಕೆಗಳು "ಜನ ಮೋರ್ಚಾ"ವನ್ನು ಎಡ ಹಾಗೂ ಇತರ ಪ್ರಜಾಸತ್ತಾತ್ಮಕ ಶಕ್ತಿಗಳ ಹತ್ತಿರಕ್ಕೆ ತಂದಿವೆ. ಜನ ಸಮುದಾಯದ ಹಿತಗಳ ರಕ್ಷಣೆಗಾಗಿ ಹಾಗೇಯೇ ಕೋಮುವಾದಿ ಹಾಗೂ ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಜಂಟೀ ಕಾರ್ಯಕ್ರಮಗಳನ್ನು ನಡೆಸುವ ಸಾಧ್ಯತೆಗಳನ್ನುಂಟುಮಾಡಿದೆ.

ಈ ಘೋಷಣೆಯನ್ನು ನಾವು ರಾಜಕೀಯ ಪಕ್ಷವೊಂದರ ಪೂರ್ಣ ಕಾರ್ಯಕ್ರಮವೆಂದು ಪರಿಗಣಿಸುಉದಿಲ್ಲ ಆದರೆ ನಿಸ್ಸಂಶಯವಾಗಿಯೂ ಇದೊಂದು ಹೆಜ್ಜೆ. ಆದರೆ ಎಲ್ಲವೂ ಈ ಘೋಷಣೆಯಲ್ಲಿ ನೀಡಲಾಗಿರುವ ಭರವಸೆಯನ್ನು ಜಾರಿಗೊಳಿಸುವ ದಿಕ್ಕಿನಲ್ಲಿ ನಡೆಯುವ ಪ್ರಯತ್ನಗಳ ತೀವ್ರತೆಯನ್ನೇ ಅವಲಂಬಿಸಿದೆ.

ಗಾಬರಿಗೊಂಡಿರುವ ಬಿ. ಜೆ. ಪಿ.

ಬಿ.ಜೆ.ಪಿ. ಪ್ರಧಾನ ಕಾರ್ಯದರ್ಶಿ ಕೆ.ಎಲ್.ಶರ್ಮಾರ ಪತ್ರಿಕಾ ಹೇಳಿಕೆಗೆ ಉತ್ತರವಾಗಿ ಸಿ.ಪಿ.ಐ. (ಎಂ) ಪಾಲಿಟ್‌ಬ್ಯೂರೋ ಸದಸ್ಯ ಕಾ. ಹರ್‌ಕಿಶನ್ ಸಿಂಗ್ ಸುರಜಿತ್ ಕೆಳಗೆ ಕಾಣಿಸಿದ ಹೇಳಿಕೆ ನೀಡಿದ್ದಾರೆ.

ಕೋಮುವಾದಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ಎಡ ಪಕ್ಷಗಳ ಖಡಾಖಂಡಿತ ನಿಲುವು ನೋಡಿ, ಬಿ.ಜೆ.ಪಿ. ನಾಯಕತ್ವ ಗಾಬರಿಗೊಂಡಂತಿದೆ. ನಾಗಪುರದಲ್ಲಿ ಇತ್ತೀಚೆಗೆ ಆರ್.ಎಸ್.ಎಸ್. ಮುಖ್ಯಸ್ಥ ದೇವರಸ್ ಅವರ ಭಾಷಣ, ಅವರ ಜಾತ್ಯಾತೀತತೆಯ ಸೋಗನ್ನು ಬಯಲು ಪಡಿಸಿದೆ.

ಎಡ ಪಕ್ಷಗಳಿಗೆ ಸವಾಲು ಹಾಕುವ ಮೊದಲು, ದೇವರಸ್ ಭಾಷಣದ ಬಗ್ಗೆ ಬಿ.ಜೆ.ಪಿ. ನಾಯಕತ್ವ ತನ್ನ ನಿಲುವು ಸ್ಪಷ್ಟ ಪಡಿಸಬೇಕು. ದೇವರಸ್ ಪ್ರಕಾರ ಅಲ್ಪಸಂಖ್ಯಾತ ಕೋಮಿನ ಬಗ್ಗೆ ಧೋರಣೆ ಬಿಟ್ಟರೆ ಆರ್.ಎಸ್.ಎಸ್.ಗೆ ಕಾಂಗ್ರೆಸ್‌ನ ಜತೆ ಯಾವುದೇ ಭಿನ್ನಾಭಿಪ್ರಾಯವಿಲ್ಲವಂತೆ. ಆದರೆ ಅದೇ ದೇವರಸ್ ಹಿಂದೂಗಳು ಒಂದಾಗಬೇಕು ಎಂದು ಕರೆ ಕೊಡುತ್ತಾರೆ. 'ಇಬ್ಬಗೆಯ ಸದಸ್ಯತ್ವ'ವನ್ನು ಸಮರ್ಥಿಸಿದ ಎಲ್.ಕೆ ಅಡ್ವಾನಿಯಂತಹವರು ಏಕೆ ಸುಮ್ಮನಿದ್ದಾರೆ? ಆರ್.ಎಸ್.ಎಸ್.ನ ಆಕ್ರಮಣಕಾರಿ ಕೋಮುವಾದ ಮತ್ತು ದೇವರಸ್ ಹೇಳಿಕೆಯನ್ನು ಈಗಲೂ ಹೀಗಳೆಯಲು ತಯಾರಿದ್ದಾರೆಯೇ? ಇದಕ್ಕೆ ಅವರು ಉತ್ತರಿಸಿದರೆ, ಅವರೇ ಪ್ರಸ್ತಾಪಿಸುತ್ತಿರುವ ಸಾರ್ವಜನಿಕ ಚರ್ಚೆ ಆದಂತೆ.

ಬಿ.ಜೆ.ಪಿ. ಪ್ರಧಾನ ಕಾರ್ಯದರ್ಶಿ ಈ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳ ಬಗ್ಗೆ ಚರ್ಚಿಸುವುದು ಈ ಹೇಳಿಕೆಯ ಉದ್ದೇಶ. ಸ್ವಾತಂತ್ರ್ಯಾ ನಂತರದಿಂದ ಕಾಂಗ್ರೆಸ್ ಏಕಸ್ವಾಮ್ಯವನ್ನು ಒಡೆಯುವುದು, ಜತೆಗೆ ಕೋಮುವಾದದ ಎಲ್ಲಾ ಅವತಾರಗಳನ್ನು ವಿರೋಧಿಸುವುದು, ನಮ್ಮ ಸುಸಂಬಂಧಿತ ನೀತಿಯಾಗಿದೆ ಎಂಬುದು ನಾನು ಹೇಳಬೇಕಾದ ಮುಖ್ಯ ಅಂಶ. 1947ರಲ್ಲಿ ಕೋಮುವಾದಿ ದಂಗೆಗಳು ನಡೆದಾಗ, ಒಡೆದ ದೇಶದ ಎರಡೂ ಭಾಗಗಳಲ್ಲೂ ಪಕ್ಷ ತನ್ನ ಕಾರ್ಯಕರ್ತರ ಪ್ರಾಣದ ಬಗ್ಗೆ ಲೆಕ್ಕಿಸದೆ, ಅಲ್ಪ ಸಂಖ್ಯಾತರನ್ನು ರಕ್ಷಿಸಿತು. ಎಲ್ಲಾ ಕೋಮುದಂಗೆಗಳಲ್ಲಿ ನಮ್ಮ ಕಾರ್ಯಾಚರಣೆ ಇದ್ದೇ ಇರುತ್ತದೆ.

★ 1967ರಲ್ಲಿ ಜನಸಂಘ, ಮೂರು ರಾಜ್ಯಗಳಲ್ಲಿ–ಪಂಜಾಬ್, ಉತ್ತರ ಪ್ರದೇಶ, ಬಿಹಾರ–ಒಕ್ಕೂಟದ ಜತೆ ಅಧಿಕಾರಕ್ಕೆ ಬಂದಾಗ ನಮ್ಮ ಪಕ್ಷ ಈ ಸರ್ಕಾರಗಳಲ್ಲಿ ಭಾಗವಹಿಸಲು ನಿರಾಕರಿಸಿತು.

★ ಜನಸಂಘ ಜನತಾದಲ್ಲಿ ವಿಲೀನ ಮಾಡಿದ ನಂತರ 1977ರಲ್ಲಿ ನಾವು ಜನತಾಕ್ಕೆ ಬೆಂಬಲ ಕೊಟ್ಟೆವು. ತುರ್ತು ಪರಿಸ್ಥಿತಿಯ ಚೌಕಟ್ಟನ್ನು ಸಡಿಲಿಸಿ, ಪ್ರಜಾಸತ್ತಾತ್ಮಕ ಹಕ್ಕುಗಳನ್ನು ವಾಪಸ್ಸು ಪಡೆಯುವುದಕ್ಕೆ ಈ ನೀತಿ ಆದರೆ ಜನಸಂಘ ದ್ವಿಸದಸ್ಯತ್ವದ ಪ್ರಶ್ನೆಯ ಬಗ್ಗೆ ಹಟಮಾರಿತನ ತೋರಿಸಿದಾಗ, ನಾವು ಜನತಾಕ್ಕೆ ಕೊಟ್ಟ ಬೆಂಬಲ ವಾಪಸ್ಸು ತೆಗೆದುಕೊಂಡೆವು.

★ ನಾವು ಯಾವತ್ತೂ "ಅಸ್ಪೃಶ್ಯತೆ"ಯ ನಿಲುವು ತೆಗೆದುಕೊಂಡಿಲ್ಲ. ಬಿ.ಜೆ.ಪಿ.ಯ ಮೇಲೆ ಟೀಕೆಯ ಜತೆ ಪಾರ್ಲಿಮೆಂಟಿನಲ್ಲಿ ಬೇರೆ ವಿಷಯಗಳ ಬಗ್ಗೆ ಸಹಕಾರ ಈಗಲೂ ಇದೆ. ಕೋಮುವಾದ, ಕೇಂದ್ರ–ರಾಜ್ಯ ಸಂಬಂಧ, ವಿದೇಶ ನೀತಿಯ ಬಗ್ಗೆ ಟೀಕೆ, ಬರ ನೆರೆ ಪರಿಹಾರ, ದಬ್ಬಾಳಿಕೆ ಅಥವಾ ಇನ್ನಾವುದೇ ವಿಷಯದ ಬಗ್ಗೆ ಸಹಕಾರ ಕೊಡಲು ನಮಗೆ ಯಾವುದೇ ಅಭ್ಯಂತರ ಇಲ್ಲ. ಆದರೆ ಬಿ.ಜೆ.ಪಿ.ಯ ಜತೆ ನಾವು ಯಾವುದೇ ರಾಜಕೀಯ ವಿಷಯಗಳ ಬಗ್ಗೆ ಹೊಂದಾಣಿಕೆ ಮಾಡಿಕೊಂಡಿಲ್ಲ. ಜಂಟಿ ರಂಗಗಳನ್ನು ರಚಿಸಿಕೊಂಡಿಲ್ಲ.

★ ಪಂಜಾಬಿನಲ್ಲಿ ಭಯೋತ್ಪಾದಕತೆಯ ವಿರುದ್ಧ ಹೋರಾಟದಲ್ಲಿ, ಬಿ.ಜೆ.ಪಿ. ಮಾತ್ರವಲ್ಲ ಆಳುವ ಪಕ್ಷದೊಂದಿಗೆ ಸಹ ಸಹಕಾರ ನೀಡಿದ್ದೇವೆ.

★ ಕೇರಳ ಚುನಾಯಣೆಯಲ್ಲಿ ನಾವು ಮಾರ್ಕ್ಸ್–ಲೆನಿನ್‌ರನ್ನು ಬಿಟ್ಟು, ವಿವೇಕಾನಂದರ ಹೆಸರಿನಲ್ಲಿ ಪ್ರಚಾರ ಮಾಡಿದೆವು ಎಂಬುದು ಅರ್ಥವಿಲ್ಲದ ಮಾತು. ದೇಶದ ಐಕ್ಯತೆಗೆ ಭಂಗ ತರುತ್ತಿರುವ ಜಾತಿ ಕೋಮುವಾದಿ ಶಕ್ತಿಗಳನ್ನು ಮಟ್ಟ ಹಾಕುವ, ಕಲ್ಕತ್ತ ಮಹಾಧಿವೇಶನದ ನಿರ್ಣಯದ ಆಧಾರದ ಮೇಲೆ ಚುನಾವಣಾ ಪ್ರಚಾರ ನಡೆಯಿತು. ದೇಶದ ಐಕ್ಯತೆಯನ್ನು ಎತ್ತಿ ಹಿಡಿಯುತ್ತಲೇ, ಕಾಂಗ್ರೆಸ್ (ಐ) ವಿರುದ್ಧ ಹೋರಾಡಲು ಇದು ಒಳ್ಳೆಯ ರೀತಿ ಎಂದು ನಮಗನಿಸಿದೆ. ಅದೇ ನಿಲುವನ್ನು ಈಗಲೂ ಮುಂದುವರಿಸುತ್ತಿದ್ದೇವೆ. ಜಾತಿ ವಿಭಜನೆಗಳಿಂದಾಗಿ ಕೇರಳ ಒಂದು ಹುಚ್ಚಾಸ್ಪತ್ರೆ, ಆಗಿದೆ ಎಂಬ ವಿವೇಕಾನಂದರ ಹೇಳಿಕೆಯನ್ನು ಕಾ. ಇ.ಎಂ.ಎಸ್. ನಂಬೂದ್ರಿಪಾಡ್ ಜಾತಿ ಕೋಮು ಶಕ್ತಿಗಳನ್ನು ಹೀಗೆಳೆಯುವ ಸಂದರ್ಭದಲ್ಲಿ ಉದಾಹರಿಸಿದ್ದರಷ್ಟೆ.

★ ಪಂಜಾಬಿನಲ್ಲಿ ಮಿಲಿಟರಿ ಆಡಳಿತ ಮತ್ತು ಅಲ್ಲಿ ರಕ್ಷಣಾ ಪಟ್ಟಿ (Security Belt)ಯ ಬಿ.ಜೆ.ಪಿ.ಯ ನಿಲುವನ್ನು ಬಲವಾಗಿ ವಿರೋಧಿಸಿದ್ದೇವೆ. ನಾವು ತಡೆಯಲು ಪ್ರಯತ್ನಿರುವ ಕೋಮು ವಿಭಜನೆಯನ್ನು ಅದು ಹುಟ್ಟುಹಾಕುತ್ತದೆ. ಭಯೋತ್ಪಾದಕತೆ ಮತ್ತು ಪ್ರತ್ಯೇಕತಾವಾದದ ವಿರುದ್ಧ ನಿಜವಾಗಿಯೂ ಹೋರಾಡುತ್ತಿರುವ ಶಕ್ತಿಗಳಲ್ಲಿ ಎರಡು ಕಮ್ಯುನಿಸ್ಟ್ ಪಕ್ಷಗಳಿಗೆ ಅಗ್ರಸ್ಥಾನ ಸಲ್ಲಬೇಕು ಎಂಬುದರ ಬಗ್ಗೆ ಯಾರಿಗೂ ಸಂಶಯವಿಲ್ಲ. ಈ ಪಕ್ಷಗಳ ಹಲವು ಹಿರಿಯ ಕಾರ್ಯಕರ್ತರು ಈ ಹೋರಾಟದಲ್ಲಿ ತಮ್ಮ ಬಲಿದಾನ ನೀಡಿದ್ದಾರೆ ಎನ್ನುವುದಕ್ಕಿಂತ ಹೆಚ್ಚಿನ ಪುರಾವೆ ಏನು ಬೇಕಾಗಿದೆ?

★ ದೇಶದ ಐಕ್ಯತೆಯನ್ನು ಛಿದ್ರಗೊಳಿಸುವ ಆರ್.ಎಸ್.ಎಸ್.ನ ಕಾರ್ಯಕರ್ತರನ್ನೊಳಗೊಂಡ ಬಿ.ಜೆ.ಪಿ. ಒಂದು ಕೋಮುವಾದಿ ಪಕ್ಷವೆಂದು ನಾವು ಪರಿಗಣಿಸುತ್ತೇವೆ.

★ ನಮ್ಮ ಮುಖ್ಯ ಹೋರಾಟ ರಾಜೀವ್‌ಗಾಂಧಿ ಮತ್ತು ಅವರ ಸರಕಾರದ ವಿರುದ್ಧ. ಆದರೆ ಕೋಮುವಾದ ಪ್ರತ್ಯೇಕತಾವಾದ ಮತ್ತು ದೇಶದ ಐಕ್ಯತೆಗೆ ಅಪಾಯದ ವಿರುದ್ಧ ಹೋರಾಟ, ಸರಕಾರದ ವಿರುದ್ಧ ಹೋರಾಟದ ಅಂಗ. ಆದ್ದರಿಂದಲೇ ಬಿ.ಜೆ.ಪಿ.ಯ ಜತೆ ರಾಜಕೀಯವಾಗಿ ಮೈತ್ರಿಯನ್ನು ಬೆಳೆಸುವುದನ್ನು ನಾವು ವಿರೋಧಿಸುತ್ತೇವೆ.

ದೆಹಲಿ ರ‍್ಯಾಲಿ

[1ನೇ ಪುಟದಿಂದ]

ಕ್ರಮಗಳನ್ನು ಕೈಗೊಳ್ಳಬೇಕು, ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರ ಕೊನೆಗೊಳ್ಳಬೇಕು. ದೇಶದ ಐಕ್ಯತೆ ಮತ್ತು ಭದ್ರತೆಗಾಗಿ ಕೋಮುವಾದ ಮತ್ತು ಛಿದ್ರಕಾರಿಗಳ ವಿರುದ್ಧ ಸೆಣಸಿ ಹೋರಾಡಲು ಈ ಸಭೆ ತೀರ್ಮಾನಿಸಿದೆ.

ರೈತರಿಗೆ ಲಾಭದಾಯಕ ಬೆಂಬಲ ಬೆಲೆಗಾಗಿ, ಎಲ್ಲರಿಗೂ ಶಿಕ್ಷಣ, ಎಲ್ಲರಿಗೂ ಉದ್ಯೋಗ, ಕೈಗಾರಿಕೆಗಳನ್ನು ಮುಚ್ಚುವುದರ ವಿರುದ್ಧ, ಚುನಾವಣಾ ನಿಯಮಗಳನ್ನು ತಿದ್ದುಪಾಟು ಮಾಡಲು, ಮಹಿಳೆಯರ ಮೇಲೆ ದುರ್ಬಲ ಜನವಿಭಾಗಗಳ ಧಾಳಿ ಮೇಲೆ ನಡೆಸುವುದರ ವಿರುದ್ಧ ಎನ್.ಎಸ್.ಎ. ಇ.ಎಸ್.ಎಂ.ಎ., ಮೊದಲಾದ ಕ್ರೂರ ಕಾನೂನುಗಳ ವಿರುದ್ಧ ಈ ಜಾಥಾ ಹಾಗೂ ರ‍್ಯಾಲಿ ದನಿಯೆತ್ತಲಿದೆ.

ಕಾ|| ಸೂರಿ ಮಗಳ ವಿವಾಹ

ರಾಜ್ಯ ಸಿ.ಪಿ.ಐ.(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರೂ ಸಿ.ಐ.ಟಿ.ಯು. ಅಖಿಲ ಭಾರತ ಉಪಾಧ್ಯಕ್ಷರೂ ಆದ ಕಾಂ. ಸೂರ್ಯನಾರಾಯಣ ರಾವ್‌ರವರ ಪ್ರಥಮ ಪುತ್ರಿ ಮೀರಾರ ವಿವಾಹವು ಶ್ರೀಛಾಯಾಪತಿ ರವರೊಂದಿಗೆ 5.10.87ರಂದು ನೆರವೇರಿತು. ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ಸದಸ್ಯರೂ, ರಾಜ್ಯ ಕಾರ್ಯದರ್ಶಿಗಳೂ ಆದ ಕಾಂ. ಪಿ. ರಾಮಚಂದ್ರರಾವ್ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಎನ್. ಕೆ. ಉಪಾಧ್ಯಾಯ.... ಮೊದಲಾದವರು ವಿವಾಹಮಹೋತ್ಸವದಲ್ಲಿ ಭಾಗವಹಿಸಿದ್ದರು.

ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ರಾಮ ಕೃಷ್ಣ ಹೆಗಡೆಯವರು, ಕಂದಾಯ ಸಚಿವ ಶ್ರೀ ಎಸ್.ಆರ್. ಬೊಮ್ಮಾಯಿಯವರು, ನಗರಾಭಿವೃದ್ಧಿ ಸಚಿವ ಶ್ರೀ ಎಂ ಚಂದ್ರಶೇಖರ, ಕಾರ್ಮಿಕ ಸಚಿವ ಎಸ್.ಕೆ.ಕಾಂತ್ ಬಂದರುಸಚಿವ ಆರ್.ರಘುಪತಿಯವರು ಆಗಮಿಸಿ ಶುಭ ಹಾರೈಸಿದರು.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone : 75 331
Editor Ramachandra Rao Managing Editor : N. K. Upadhyaya